# ನಿರ್ದೇಶಕರ 96ನೇ ವಾರ್ಷಿಕ ವರದಿ

**ಆತ್ಮೀಯ ಷೇರುದಾರರೇ,**

2020ನೇ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಬ್ಯಾಂಕಿನ 96ನೇ ವಾರ್ಷಿಕ ವರದಿಯನ್ನು ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧಕರ ವರದಿಯೊಂದಿಗೆ ತಮ್ಮ ಮುಂದಿಡಲು ನಿಮ್ಮ ನಿರ್ದೇಶಕರು ಹರ್ಷಿಸುತ್ತಾರೆ. ಈ ವರ್ಷ ನಿಮ್ಮ ಬ್ಯಾಂಕು ಸವಾಲುಗಳ ನಡುವೆಯೂ ಸ್ಥಿರ ಪ್ರಗತಿ ದಾಖಲಿಸುವಲ್ಲಿ ಯಶಸ್ವಿಯಾಗಿದೆ. ಪ್ರಮುಖ ವಲಯಗಳಲ್ಲಿ ಮಾರುಕಟ್ಟೆ ಬೇಡಿಕೆಯ ಕುಸಿತದಿಂದ ಭಾರತೀಯ ಆರ್ಥಿಕತೆಯು ನಿರೀಕ್ಷಿತ ಬೆಳವಣಿಗೆ ದರವನ್ನು ದಾಖಲಿಸಲು ಸಾಧ್ಯವಾಗಿರಲಿಲ್ಲ. ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಸಕಾಲಿಕ ಕ್ರಮಗಳ ಹೊರತಾಗಿಯೂ ಬ್ಯಾಂಕಿಂಗ್ ವಲಯವು ಮುಂಗಡ ಆಸ್ತಿಗಳ ಗುಣಮಟ್ಟ (ಅಸೆಟ್ ಕ್ವಾಲಿಟಿ) ಮತ್ತು ದ್ರವ್ಯತೆಯ ಒತ್ತಡದ (ಲಿಕ್ವಿಡಿಟಿ ಸ್ಟ್ರೆಸ್) ಸವಾಲುಗಳನ್ನು ಎದುರಿಸಬೇಕಾಯಿತು. ಕೇಂದ್ರ ಸರ್ಕಾರ ಕೈಗೊಂಡ ಸಮರ್ಪಕ ಕ್ರಮಗಳಿಂದಾಗಿ ಮತ್ತು ಹಣದ ಹರಿವನ್ನು ಒದಗಿಸುವಿಕೆಯಲ್ಲಿ ಮಾಡಿದ ಹಲವು ಪ್ರಯತ್ನಗಳಿಂದಾಗಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಮತೋಲನ ಸಾಧ್ಯವಾಗಿದೆ. ಒಟ್ಟಾರೆಯಾಗಿ ಕಳೆದ ಆರ್ಥಿಕ ವರ್ಷವು ಬ್ಯಾಂಕಿಂಗ್ ಉದ್ಯಮಕ್ಕೆ ಮತ್ತೊಂದು ಕಠಿಣ ಸವಾಲುಗಳ ವರ್ಷವಾಗಿ ಪರಿಣಮಿಸಿದೆ.

ಭಾರತದಲ್ಲಿ ಮೊದಲ ತಲೆಮಾರಿನ ಖಾಸಗಿ ಬ್ಯಾಂಕುಗಳ ಪೈಕಿ, 1924ರಿಂದಲೇ ಅಸ್ತಿತ್ವದಲ್ಲಿರುವ ನಿಮ್ಮ ಕರ್ಣಾಟಕ ಬ್ಯಾಂಕು, ಬದಲಾವಣೆಗಳು ಬರುವ ಮೊದಲೇ ಎಚ್ಚತ್ತುಕೊಂಡು ಮುಂಜಾಗರೂಕತೆ ವಹಿಸುವುದನ್ನು ಮನಗಂಡಿದ್ದು, ಈ ನಿಟ್ಟಿನಲ್ಲಿ ಪರಿವರ್ತನೆಗಳನ್ನು ಅಳವಡಿಸಿಕೊಂಡು ಪ್ರಗತಿ ಪಥದಲ್ಲಿ ಮೇಲೇರಲು ಸದಾ ತನ್ನ ಪ್ರಯತ್ನವನ್ನು ಮುಂದುವರಿಸಿದೆ. 2017ರಲ್ಲಿ ಚಾಲನೆಗೊಂಡ 'ಕೆಬಿಎಲ್ ವಿಕಾಸ್' ಪರಿವರ್ತನಾ ಯೋಜನೆಯು ಆಧುನಿಕ ಬ್ಯಾಂಕಿಂಗ್‌ನ ವ್ಯವಸ್ಥೆಯಲ್ಲಿ ತನ್ನ ಸ್ಥಾನವನ್ನು ಮರು ನಿರೂಪಣೆ ಮಾಡಿಕೊಳ್ಳುವ ದಿಸೆಯಲ್ಲಿ ಹೊಸದೊಂದು ಅಧ್ಯಾಯವನ್ನು ಬರೆದಿದೆ. ಮುಂದಿನ ತಲೆಮಾರಿಗೆ ಅಗತ್ಯವಿರುವ ಬ್ಯಾಂಕಿಂಗ್ ಮಾಡೆಲ್ ಅನ್ನು ಮೈಗೂಡಿಸಿಕೊಳ್ಳುವುದರೊಂದಿಗೆ ಅತ್ಯಂತ ಚಲನಶೀಲ ಇಕೊ-ಸಿಸ್ಟಂ ಸೃಷ್ಟಿಸಿಕೊಳ್ಳುವತ್ತ ನಿಮ್ಮ ಬ್ಯಾಂಕು ಗಮನವನ್ನು ಕೇಂದ್ರೀಕರಿಸಿದೆ. ಇದಲ್ಲದೆ, ಆರ್ಥಿಕ ವರ್ಷದ ಕೊನೆಯಲ್ಲಿ ಎಂ-ಕ್ಯಾಪ್ (M-Cap Ratio) ಎಂಬ ಅನುಪಾತ ಹಾಗೂ ಹಣದ ಹರಿವಿನ ಕುರಿತಂತೆ ದಾರಿ ತಪ್ಪಿಸುವ ಮಾಧ್ಯಮ ವರದಿಗಳು ಬ್ಯಾಂಕಿನ ವ್ಯವಹಾರದ ಮೇಲೆ ಅತ್ಯಲ್ಪ ಪರಿಣಾಮ ಬೀರಿದವು. ನಿಮ್ಮ ಬ್ಯಾಂಕು, ಈ ಕುರಿತಂತೆ ಸಮಯೋಚಿತ ಕ್ರಮಗಳ ಮೂಲಕ, ಪತ್ರಿಕೆಗಳು/ಮಾಧ್ಯಮ ಚಾನೆಲ್ಗಳು ಮತ್ತು ಸ್ಟಾಕ್ ಎಕ್ಸ್ಚೇಂಜ್ ಸೇರಿದಂತೆ ವಿವಿಧ ವಿಧಾನಗಳ ಮೂಲಕ ತನ್ನ ಆರ್ಥಿಕಸ್ಥಿತಿ ಮತ್ತು ಆರೋಗ್ಯಕರ ಬಂಡವಾಳದ ಸರಿಯಾದ ಚಿತ್ರಣವನ್ನು ನೀಡಿ ಈ ಬಗೆಗಿನ ಆಧಾರರಹಿತ ಭಯಗಳನ್ನು ನಿವಾರಿಸುವಲ್ಲಿ ಹಾಗು ಎಲ್ಲರ ವಿಶ್ವಾಸವನ್ನು ಕಾಪಾಡುವಲ್ಲಿ ಯಶಸ್ವಿಯಾಗಿದೆ. ನಿಮ್ಮ ಬ್ಯಾಂಕಿನ ಆರ್ಥಿಕ ಹಾಗೂ ಹಣಕಾಸಿನ ಹರಿವು ಸದೃಢವಾಗಿದ್ದು ಮತ್ತಷ್ಟು ಪ್ರಬಲವಾಗಿ ಮುಂದುವರಿಸುವಲ್ಲಿ ಯಶಸ್ಸನ್ನು ಕಾಣುತ್ತದೆ ಎಂಬ ಅಚಲ ವಿಶ್ವಾಸವನ್ನು ನಿರ್ದೇಶಕ ಮಂಡಳಿಯ ವ್ಯಕ್ತಪಡಿಸುತ್ತದೆ.

## ವ್ಯವಹಾರದ ಕಾರ್ಯಕ್ಷಮತೆ

ಕೋಟಿಗಳಲ್ಲಿ

| | ಮಾರ್ಚ್ 31, 2020 | ಮಾರ್ಚ್ 31, 2019 |
|---|---|---|
| ವಾಣಿಜ್ಯ ವಹಿವಾಟು | 128749.42 | 123280.32 |
| ಠೇವಣಿಗಳು | 71785.15 | 68452.12 |
| ಮುಂಗಡಗಳು | 56964.27 | 54828.20 |
| ಹೂಡಿಕೆಗಳು | 17545.34 | 16184.99 |
| ಒಟ್ಟು ಆದಾಯ | 7870.82 | 6907.92 |
| ನಿರ್ವಹಣಾ ಲಾಭ | 1656.77 | 1449.81 |
| ನಿವ್ವಳ ಲಾಭ | 431.78 | 477.24 |
| ನಿವ್ವಳ ಬಡ್ಡಿ ಆದಾಯ(NII) | 2030.36 | 1905.12 |

### ವಾಣಿಜ್ಯ ವಹಿವಾಟು (BUSINESS TURNOVER)

31 ಮಾರ್ಚ್ 2020ರಂದು ಬ್ಯಾಂಕಿನ ಒಟ್ಟು ವಾಣಿಜ್ಯ ವಹಿವಾಟು 128749.42 ಕೋಟಿ ರೂ.ಗಳಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ (31 ಮಾರ್ಚ್ 2019) ಬ್ಯಾಂಕು 123280.32 ಕೋಟಿ ರೂ.ಗಳ ವಹಿವಾಟು ದಾಖಲಿಸಿತ್ತು. ಇದು ಶೇ.4.44ರಷ್ಟು ಬೆಳವಣಿಗೆಯಾಗಿದೆ. ಬ್ಯಾಂಕಿನ ಒಟ್ಟು ಸ್ವತ್ತುಗಳು 79045.76 ಕೋಟಿ ರೂ.ಗಳಿಂದ 83313.49 ಕೋಟಿ ರೂ.ಗಳಿಗೆ ಏರಿಕೆಯಾಗಿದ್ದು ಇದು ಶೇ 5.40 ರಷ್ಟು ಬೆಳವಣಿಗೆ ದಾಖಲಾಗಿದೆ.

### ಠೇವಣಿಗಳು ಮತ್ತು ಚಾಲ್ತಿ ಖಾತೆ, ಉಳಿತಾಯ ಖಾತೆ

ಬ್ಯಾಂಕಿನ ಒಟ್ಟು ಠೇವಣಿಗಳು 71785.15 ಕೋಟಿ ರೂ.ಗಳಿಗೆ ಏರಿಕೆಯಾಗಿದ್ದು ಇದು 2019ರ ಮಾರ್ಚ್ 31ರಂದು ದಾಖಲಾದ 68452.12 ಕೋಟಿ ರೂ.ಗಳ ಪ್ರಮಾಣಕ್ಕಿಂತ 4.87 ಶೇ ಹೆಚ್ಚಾಗಿದೆ. 2020ರ ಮಾರ್ಚ್ 31ಕ್ಕೆ ಬ್ಯಾಂಕಿನ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (CASA) ಠೇವಣಿಗಳು 2020ರ ಮಾರ್ಚ್ 31ಕ್ಕೆ ಒಟ್ಟು ಠೇವಣಿಗಳ ಶೇ.28.91ಆಗಿದ್ದು, ಈ ಅನುಪಾತವು 2019ರ ಮಾರ್ಚ್ 31ರಂದು ಶೇ 28.06ರಷ್ಟು ದಾಖಲಾಗಿತ್ತು.

### ಮುಂಗಡಗಳು:

2019ರ ಮಾರ್ಚ್ 31ರಂದು ರೂ.54828.20 ಕೋಟಿಯಷ್ಟಿದ್ದ ಮುಂಗಡಗಳು 2020ರ ಮಾರ್ಚ್ 31ರ ವೇಳೆಗೆ 56964.27ಕೋಟಿ ರೂ.ಗಳಿಗೆ ಏರಿಕೆಯಾಗಿವೆ. ಸಾಲ-ಠೇವಣಿ ಅನುಪಾತ 2020ರ ಮಾರ್ಚ್ 31ರ ವೇಳೆಗೆ ಶೇ.79.35ರಷ್ಟಿತ್ತು. ಆದ್ಯತಾ ವಲಯದ ಮುಂಗಡಗಳು 21878.22 ಕೋಟಿ ರೂ.ಗಳಿಂದ 25093.73 ಕೋಟಿ ರೂ.ಗಳಿಗೆ ಏರಿಕೆಯಾಗಿದ್ದು, ಅರ್ಹ ಹೊಂದಾಣಿಸಿದ ನೆಟ್ ಬ್ಯಾಂಕ್ ಕ್ರೆಡಿಟ್'ನ (ANBC) ಶೇ.43.89ರಷ್ಟಾಗಿದೆ. ಕೃಷಿ ಕ್ಷೇತ್ರದ ಮುಂಗಡಗಳು 7082.90 ಕೋಟಿ ರೂ.ಗಳಿಂದ 8568.24 ಕೋಟಿ ರೂ.ಗಳಿಗೆ ಏರಿದ್ದು, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ(RIDF)ಯನ್ನು ಒಳಗೊಂಡಂತೆ ಒಟ್ಟಾರೆ ANBCಯ ಶೇ.14.99 ದಷ್ಟಾಗಿದೆ. ವಿವಿಧ ಸಾಮಾಜಿಕ–ಆರ್ಥಿಕ ಯೋಜನೆಗಳ ಅಡಿಯಲ್ಲಿ ನೀಡಲಾಗುವ ಸಾಲ ಸೌಲಭ್ಯಗಳ ವಿಚಾರದಲ್ಲೂ ಬ್ಯಾಂಕು ಸಕ್ರಿಯವಾಗಿದೆ.

ರಿಟೇಲ್ ಹಾಗೂ ಮಧ್ಯಮ ಗಾತ್ರದ ಕಾರ್ಪೋರೇಟ್ ವಿಭಾಗದ ಮುಂಗಡಗಳನ್ನು ವಿಸ್ತರಿಸುವತ್ತ ಬ್ಯಾಂಕು ತನ್ನ ಗಮನವನ್ನು ಕೇಂದ್ರೀಕರಿಸುತ್ತಿದ್ದು, ಕಾರ್ಪೋರೇಟ್ ವಿಭಾದ ಮುಂಗಡಗಳಲ್ಲಿ ಇಳಿಕೆ ಕಂಡುಬಂದಿರುತ್ತದೆ. ರಿಟೇಲ್(ಮಧ್ಯಮ ಗಾತ್ರದ ಕಾರ್ಪೋರೇಟ್ ಮುಂಗಡಗಳನ್ನು ಒಳಗೊಂಡಂತೆ) ಹಾಗೂ ಕಾರ್ಪೋರೇಟ್ ಅನುಪಾತವು ಶೇ.69.70 ರಿಂದ ಶೇ 74.20ಕ್ಕೆ ಸುಧಾರಿಸಿದೆ.

### ಅನುತ್ಪಾದಕ ಆಸ್ತಿಗಳು ಮತ್ತು ಪ್ರೊವಿಷನ್ ಕವರೇಜ್ (PCR) ಅನುಪಾತ

ನಿಮ್ಮ ಬ್ಯಾಂಕು ಇನ್ನಷ್ಟು ಉತ್ತಮ ರೀತಿಯ ಸಾಲ ಮೇಲ್ವಿಚಾರಣಾ ವಿಧಾನ ಮತ್ತು ದುರ್ಬಲಗೊಂಡ ಸಾಲಗಳಿಂದ ಉಂಟಾಗುವ ಸಮಸ್ಯೆಗಳ ಪರಿಹಾರಕ್ಕೆ ತನ್ನೆಲ್ಲ ಪ್ರಯತ್ನಗಳನ್ನು ಜಾರಿಯಲ್ಲಿಟ್ಟಿಲ್ಲಿದ್ದು 31 ಮಾರ್ಚ್ 2019ರಂದು 2456.38 ಕೋಟಿ ರೂ.ಯಷ್ಟಿದ್ದ (ಶೇ 4.41) ಬ್ಯಾಂಕಿನ ಒಟ್ಟಾರೆ ಅನುತ್ಪಾದಕ ಆಸ್ತಿಗಳು (Gross NPA), 31 ಡಿಸೆಂಬರ್ 2019ರ ವೇಳೆಗೆ 2777.46 ಕೋಟಿ ರೂ. ಗಳಾಗಿದ್ದು (ಶೇ4.99), 31 ಮಾರ್ಚ್ 2020ರ ವೇಳೆಗೆ ರೂ 2799.93 ಕೋಟಿಗಳಷ್ಟಾಗಿವೆ (ಶೇ 4.82).

ಅದೇ ರೀತಿ ಮಾರ್ಚ್ 31 2019ರಂದು 1616.71 ಕೋಟಿ ರೂ. (2.95%) ಯಷ್ಟಿದ್ದ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಗಳು (Net NPA), ಡಿಸೆಂಬರ್ 31, 2019ರಂದು 2058.04 ಕೋಟಿ ರೂ (ಶೇ 3.75) ಗಳಾಗಿದ್ದು, 31 ಮಾರ್ಚ್ 2020ರಂದು 1755.01 ಕೋಟಿ ರೂ (ಶೇ3.08) ದಾಖಲಾಗಿದೆ. ಪ್ರೊವಿಷನ್ ಕವರೇಜ್ ಅನುಪಾತ (ಪಿಸಿಆರ್) ಮಾರ್ಚ್ 31, 2019ರಂದು ದಾಖಾಲಾದ ಶೇ 58.45ರಿಂದ ಮಾರ್ಚ್ 31, 2020ರ ವೇಳೆಗೆ ಶೇ.64.70ಕ್ಕೆ ಸುಧಾರಿಸಿದೆ.

## ಹೂಡಿಕೆಗಳು:

ಒಟ್ಟು ಹೂಡಿಕೆಗಳು 2019ರ ಮಾರ್ಚ್ 31ರಂದು ಇದ್ದ 16184.99 ಕೋಟಿ ರೂ.ಗಳಿಂದ 2020ರ ಮಾರ್ಚ್ 31ರಂದು 17545.34 ಕೋಟಿ ರೂ.ಗಳಿಗೆ ಏರಿದೆ. ಹೂಡಿಕೆ ಠೇವಣಿ ಅನುಪಾತ (ಐಡಿ ರೇಶಿಯೋ) 2020ರ ಮಾರ್ಚ್ 31ರಂದು 24.44 ಶೇ ದಾಖಲಾಗಿದ್ದು ಇದು 2019ರ ಮಾರ್ಚ್ 31ರಂದು ಶೇ 23.64 ದಾಖಲಾಗಿತ್ತು.

## ಒಟ್ಟಾರೆ ಆದಾಯ ಮತ್ತು ನಿವ್ವಳ ಬಡ್ಡಿ ಆದಾಯ (NII)

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದಲ್ಲಿ ಬ್ಯಾಂಕಿನ ಒಟ್ಟು ಆದಾಯ 7870.82 ಕೋಟಿ ರೂ ಆಗಿದ್ದು, 6907.92 ಕೋಟಿ ರೂ.ಗಳ ಹಿಂದಿನ ವರ್ಷದ ಆದಾಯಕ್ಕೆ ಹೋಲಿಸಿದರೆ ಇದು ಶೇ 13.94ರಷ್ಟು ಬೆಳವಣಿಗೆಯಾಗಿದೆ. ಒಟ್ಟಾರೆ ವೆಚ್ಚ (ಮೀಸಲು ಮತ್ತು ಆಕಸ್ಮಿಕಗಳನ್ನು ಹೊರತುಪಡಿಸಿ) 31 ಮಾರ್ಚ್ 2020 ಗೆ ಕೊನೆಗೊಂಡ ವರ್ಷದಲ್ಲಿ 6214.05 ಕೋಟಿ ಆಗಿತ್ತು. 2019ರ ಮಾರ್ಚ್ 31ರ ವರ್ಷದಲ್ಲಿ ಇದು 5458.11 ಕೋಟಿ ರೂ.ಗಳಾಗಿತ್ತು. ನಿವ್ವಳ ಬಡ್ಡಿ ಆದಾಯ 2030.36 ಕೋಟಿ ರೂ.ಗಳಾಗಿದ್ದು ಹಿಂದಿನ ವರ್ಷಕ್ಕಿಂತ ಶೇ. 6.57ರಷ್ಟು ಬೆಳವಣಿಗೆಯಾಗಿದೆ.

## ಲಾಭ:

ನಿಮ್ಮ ಬ್ಯಾಂಕು 2019-20ರ ವರ್ಷದಲ್ಲಿ 1656.77 ಕೋಟಿ ರೂ.ಗಳ ನಿರ್ವಹಣಾ ಲಾಭ ಗಳಿಸಿದೆ. ಹಿಂದಿನ ವರ್ಷದಲ್ಲಿ ಈ ಮೊತ್ತ 1449.81 ಕೋಟಿ ರೂ.ಗಳಾಗಿತ್ತು. 2019-20ನೇ ಸಾಲಿನಲ್ಲಿ 1134.74 ಕೋಟಿ ರೂ.ಗಳಷ್ಟು ಮೊತ್ತವನ್ನು ಮೀಸಲು ಮತ್ತು ಆಕಸ್ಮಿಕಗಳಿಗೆ. (ತೆರಿಗೆ ಹೊರತುಪಡಿಸಿ) ಕಾದಿರಿಸಲಾಗಿದೆ. ಬ್ಯಾಂಕಿನ ನಿವ್ವಳ ಲಾಭ ಹಿಂದಿನ ವರ್ಷ 477.24 ಕೋಟಿ ರೂ ಗಳಾಗಿದ್ದು, ಪ್ರಸಕ್ತ ವರ್ಷದಲ್ಲಿ 431.78 ಕೋಟಿ ರೂ.ಗಳಾಗಿದೆ. ಇದಕ್ಕೆ ಸಂಬಂಧಿಸಿದ ಬ್ಯಾಂಕಿನ ದೂರದೃಷ್ಟಿಯುಳ್ಳ ನೀತಿಗಳಿಂದಾಗಿ PCR ಮತ್ತು ಮೂಲಭೂತ ಅಂಶಗಳಲ್ಲಿ ಸುಧಾರಣೆ ಕಂಡುಬಂದಿದೆ.

## ವಿನಿಯೋಗಗಳು

ಹಿಂದಿನ ವರ್ಷದ 119.65 ಕೋಟಿ ರೂ ಮೊತ್ತವೂ ಸೇರಿದಂತೆ 431.78 ಕೋಟಿ ರೂ.ಗಳ ನಿವ್ವಳ ಲಾಭವನ್ನು ಒಳಗೊಂಡಂತೆ 551.43 ಕೋಟಿ ರೂ.ಗಳನ್ನು ಈ ಕೆಳಗಿನಂತೆ ವಿನಿಯೋಗಿಸಲಾಗಿದೆ:

| ವಿನಿಯೋಗಗಳು | ಕೋಟಿ ರೂ.ಗಳಲಿ |
|---|---|
| ಶಾಸನಬದ್ಧ ಮೀಸಲು ವರ್ಗಾವಣೆ | 110.00 |
| ಬಂಡವಾಳ ಮೀಸಲು ವರ್ಗಾವಣೆ | 183.08 |
| ಆದಾಯ ಮತ್ತು ವಿಶೇಷ ಮೀಸಲುಗಳಿಗೆ ವರ್ಗಾವಣೆ | 36.74 |
| ಹೂಡಿಕೆ ಏರಿಳಿತಗಳ ಮೀಸಲು ನಿಧಿಗೆ ವರ್ಗಾವಣೆ | 0.78 |
| 2019-20ರಲ್ಲಿ ಪಾವತಿಸಲಾದ 2018-19ರ ಲಾಭಾಂಶ | 98.83 |
| ಮೇಲೆ ಪಾವತಿಸಿದ ಡಿವಿಡೆಂಡ್ ಮೇಲಿನ ತೆರಿಗೆ | 20.32 |
| ಬ್ಯಾಲೆನ್ಸ್ ಶೀಟ್‌ಗೆ ವರ್ಗಾಯಿಸಿದ ಬ್ಯಾಲೆನ್ಸ್ | 101.68 |
| **ಒಟ್ಟು** | **551.43** |

### ಲಾಭಾಂಶ:

2020 ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷದಲ್ಲಿ ಬ್ಯಾಂಕು ವಿತರಿಸಬಹುದಾದ ಲಾಭಗಳನ್ನು ಹೊಂದಿದ್ದರೂ, ಭಾರತೀಯ ರಿಸರ್ವ್ ಬ್ಯಾಂಕ್ 17 ಏಪ್ರಿಲ್ 2020ರಂದು ಹೊರಡಿಸಿದ ಸುತ್ತೋಲೆಯ ಅನುಸಾರ (ಸುತ್ತೋಲೆ ಸಂಖ್ಯೆ: DOR.BP.BC.No. 64/21.02.067/ 2019-20), ಕೋವಿಡ್ 19 ಸಾಂಕ್ರಾಮಿಕದ ಕಾರಣದಿಂದ ಉದ್ಭವಿಸಿದ ತೀವ್ರ ಅನಿಶ್ಚಿತತೆಯ ಪರಿಸ್ಥಿತಿಯನ್ನು ನಿಭಾಯಿಸಲು, ಅರ್ಥವ್ಯವಸ್ಥೆಗೆ ಬೆಂಬಲ ನೀಡಲು ಬಂಡವಾಳ ಕ್ರೋಢೀಕರಣ ಮತ್ತು ನಷ್ಟಗಳನ್ನು ಸರಿದೂಗಿಸಲು, ಎಲ್ಲ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳು ಇನ್ನು ಮುಂದಕ್ಕೆ 2020 ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕೆ ಮುಂದಿನ ಸೂಚನೆಯ ವರೆಗೂ ಯಾವುದೇ ಲಾಭಾಂಶ ವಿತರಿಸಬಾರದು ಎಂದು ನಿರ್ದೇಶಿಸಿದೆ. ಅದರಂತೆ, ನಿರ್ದೇಶಕ ಮಂಡಳಿಯು 2019-20ರ ವರ್ಷಕ್ಕೆ ಯಾವುದೇ ಲಾಭಾಂಶವನ್ನು ಶಿಫಾರಸು ಮಾಡಿರುವುದಿಲ್ಲ.

### ಶೇರಿನ ತಲಾ ಆದಾಯ/ ಬುಕ್ ಮೌಲ್ಯ:

ಶೇರಿನ ತಲಾ ಆದಾಯ (ಮೂಲಭೂತ/diluted) ಮತ್ತು ಪ್ರತಿ ಶೇರಿನ ಪುಸ್ತಕ ಮೌಲ್ಯ 2020 ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷದಲ್ಲಿ ಕ್ರಮವಾಗಿ ರೂ.13.89 ಮತ್ತು ರೂ.192.06 ಆಗಿತ್ತು. ಹಿಂದಿನ ವರ್ಷಕ್ಕೆ ಇದು ಕ್ರಮವಾಗಿ ರೂ.15.35 ಮತ್ತು ರೂ. 204.71 ಆಗಿತ್ತು. ಪ್ರಸಕ್ತ ವರ್ಷದಲ್ಲಿ ಬೋನಸ್ ಷೇರುಗಳ ವಿತರಣೆಯಿಂದಾಗಿ ಪುಸ್ತಕ ಮೌಲ್ಯದ ಮೇಲೆ ಅಲ್ಪ ಪರಿಣಾಮ ಕಂಡು ಬಂದಿದೆ. ಅಂತೆಯೇ ಹೊಂದಾಣಿಕೆ ಮಾಡಲಾದ ಪ್ರತಿ ಶೇರಿನ ಪುಸ್ತಕ ಮೌಲ್ಯ ಈಗ ರೂ.135.62 ಆಗಿದ್ದು, ಹಿಂದಿನ ವರ್ಷ ರೂ.147.50 ಆಗಿತ್ತು.

### ಬಂಡವಾಳ ನಿಧಿಗಳು ಮತ್ತು ಬಂಡವಾಳ ಪರ್ಯಾಪ್ತತೆ ಅನುಪಾತ:

ಬ್ಯಾಂಕಿನ ಬಂಡವಾಳ ನಿಧಿ 6306.95 ಕೋಟಿ ರೂ.ಗಳಿಂದ 6673.60 ಕೋಟಿ ರೂ.ಗಳಿಗೆ ಹೆಚ್ಚಾಗಿದ್ದು, ಶೇ5.81ರ ಬೆಳವಣಿಗೆ ದಾಖಲಾಗಿದೆ. BASEL III ನಿಯಮಾವಳಿಗಳ ಅನುಸಾರ ಬಂಡವಾಳ ಪರ್ಯಾಪ್ತ ತೆ (CRAR), 2020ರ ಮಾರ್ಚ್ 31ರಂದು ಶೇ12.66 ಆಗಿತ್ತು (ಹಿಂದಿನ ವರ್ಷ ಈ ಪ್ರಮಾಣ ಶೇ13.17). ಬ್ಯಾಂಕು ಸತತವಾಗಿ ನಿಗದಿತ ಕನಿಷ್ಠ CRAR ಪ್ರಮಾಣವಾದ ಶೇ. 10.875ಕ್ಕಿಂತ ಹೆಚ್ಚಿನ ಪ್ರಮಾಣವನ್ನು ಕಾಯ್ದುಕೊಂಡು ಬಂದಿದೆ. ಇದರಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಶೇ 1.875ರ ಸಂರಕ್ಷಣಾ ಬಫರ್ ಕೂಡ ಸೇರಿದೆ.

### ಬೋನಸ್ ಹಂಚಿಕೆ - 2020

ಈ ವರದಿ ವರ್ಷದಲ್ಲಿ ನಿಮ್ಮ ಬ್ಯಾಂಕು 1:10ರ ಅನುಪಾತದಲ್ಲಿ ಅರ್ಹ ಶೇರುದಾರರಿಗೆ 2,82,60,881 ಬೋನಸ್ ಶೇರುಗಳನ್ನು 19 ಮಾರ್ಚ್ 2020ರಂದು ಹಂಚಿಕೆ ಮಾಡಿದೆ. ಇದರೊಂದಿಗೆ ಪಾವತಿಸಲಾದ ಬ್ಯಾಂಕಿನ ಈಕ್ವಿಟಿ ಶೇರು ಬಂಡವಾಳವು 282.61 ಕೋಟಿ ರೂ. ಗಳಿಂದ 310.87 ಕೋಟಿ ರೂ.ತಲುಪಿದೆ.

ಬೋನಸ್ ಶೇರುಗಳ ವಿತರಣೆಗೆ ಶೇರುದಾರರಿಂದ ಅಂಚೆ ಮೂಲಕ ಅನುಮೋದನೆ ಪಡೆಯುವ ಸಂದರ್ಭದಲ್ಲಿ, ಅರ್ಹ ಸಾಂಸ್ಥಿಕ ಹೂಡಿಕೆದಾರರಿಗೂ(QIB) ಷೇರು ಹಂಚಿಕೆಗೆ ಅನುಮತಿ ಪಡೆಯಲಾಗಿದೆ. ಈ ನಿರ್ಣಯ ಒಂದು ವರ್ಷದ ಅವಧಿಗೆ- ಅಂದರೆ 2021ರ ಮಾರ್ಚ್ 4ರ ವರೆಗೆ ಚಾಲ್ತಿಯಲ್ಲಿರುತ್ತದೆ ಹಾಗು ಈ ಅವಧಿಯಲ್ಲಿ ಮಾರುಕಟ್ಟೆ ಪರಿಸ್ಥಿತಿಯು ಪೂರಕವಾಗಿ ಒದಗಿಬಂದಲ್ಲಿ ಬ್ಯಾಂಕು ಬಂಡವಾಳ ಕ್ರೋಢೀಕರಣವನ್ನು ಮಾಡಬಹುದಾಗಿದೆ.

### ಬ್ಯಾಂಕಿಂಗ್ ಮಳಿಗೆಗಳು:

2020ರ ಮಾರ್ಚ್ 31ರಂದು ದೇಶಾದ್ಯಂತ 22 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ ಕರ್ಣಾಟಕ ಬ್ಯಾಂಕ್ 848 ಶಾಖೆಗಳನ್ನು ಹೊಂದಿದ್ದು, ಒಂದು ವಿಸ್ತರಣಾ ಕೌಂಟರ್ ಹೊಂದಿದೆ. ಇದಕ್ಕೆ ಹೊರತಾಗಿ ಒಂದು ಅಂತಾರಾಷ್ಟ್ರೀಯ ಡಿವಿಶನ್, ಒಂದು ಗ್ರಾಹಕ ಸೇವಾ ಕೇಂದ್ರ, ನಾಲ್ಕು ಸೇವಾ ಶಾಖೆಗಳು, ಮೂರು ಕರೆನ್ಸಿ ಚೆಸ್ಟ್‌ಗಳು, ಎರಡು ಸೆಂಟ್ರಲ್ ಪ್ರೊಸೆಸಿಂಗ್ ಸೆಂಟರ್, ಒಂದು ಡೇಟಾ ಸೆಂಟರ್, ಒಂದು ಡಿಜಿಟಲ್ ಉತ್ಕೃಷ್ಟತಾ ಕೇಂದ್ರ ಮತ್ತು ಆರು ಸ್ವತ್ತು ಮರುಸ್ವಾಧೀನ ನಿರ್ವಹಣಾ ಶಾಖೆಗಳನ್ನು ಹೊಂದಿದೆ. ವರದಿ ವರ್ಷದ ಅವಧಿಯಲ್ಲಿ ನಿಮ್ಮ ಬ್ಯಾಂಕು ಹನ್ನೆರಡು ಹೊಸ ಶಾಖೆಗಳನ್ನು ಹಾಗೂ ಅಹಮದಾಬಾದ್ ಮತ್ತು ಕಲಬುರ್ಗಿಯಲ್ಲಿ ಎರಡು ಪ್ರಾದೇಶಿಕ ಕಚೇರಿಗಳನ್ನು ತೆರೆದಿದೆ. ಗುಜರಾತ್ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಬ್ಯಾಂಕಿನ ವ್ಯವಹಾರವನ್ನು ಮತ್ತಷ್ಟು ವಿಸ್ತರಿಸುವ ಹಾಗೂ ಸುಧಾರಿಸುವ ಉದ್ದೇಶದಿಂದ ಈ ಎರಡು ಪ್ರಾದೇಶಿಕ ಕಚೇರಿಗಳನ್ನು ತೆರೆಯಲಾಗಿದೆ. ಇದರೊಂದಿಗೆ ಒಟ್ಟು ಪ್ರಾದೇಶಿಕ ಕಚೇರಿಗಳ ಸಂಖ್ಯೆ ಹದಿನಾಲ್ಕಕ್ಕೆ ಏರಿದೆ.

### ಪರಿವರ್ತನಾ ಯೋಜನೆ- 'ಕೆಬಿಎಲ್ ವಿಕಾಸ್'

ನಿಮ್ಮ ಮೆಚ್ಚಿನ ಕರ್ಣಾಟಕ ಬ್ಯಾಂಕ್ ಕರಾವಳಿ ನಗರ ಮಂಗಳೂರಿನಲ್ಲಿ 1924ರಲ್ಲಿ ಜನ್ಮತಾಳಿತು. ಪ್ರಾರಂಭದಲ್ಲಿ ದಕ್ಷಿಣ ಭಾರತಕ್ಕೆ ಗಮನವನ್ನು ಕೇಂದ್ರೀಕರಿಸಿದ್ದ ಬ್ಯಾಂಕ್, ನಂತರ ತನ್ನ ಭೌಗೋಳಿಕ ಹೆಜ್ಜೆ ಗುರುತುಗಳನ್ನು ದೇಶದ ಉತ್ತರ ಭಾಗದಲ್ಲೂ ವಿಸ್ತರಿಸಲಾರಂಭಿಸಿತು. ಬಳಿಕ ರಾಷ್ಟ್ರೀಯ ದೃಷ್ಟಿಕೋನದೊಂದಿಗೆ ಸಮಗ್ರ ಭಾರತದ ಬ್ಯಾಂಕ್ ಆಗಿ ಬೆಳೆಯಲಾರಂಭಿಸಿತು. ಪ್ರಸ್ತುತ ಬ್ಯಾಂಕು ರಿಟೇಲ್, ಎಸ್ಎಂಇ, ಕಾರ್ಪೊರೇಟ್ ಸಾಲ ಮತ್ತು ಶುಲ್ಕ ಆಧರಿತ ವೈವಿಧ್ಯಮಯ ಉತ್ಪನ್ನಗಳೊಂದಿಗೆ 'ಒಂದೇ ಕಡೆ ಎಲ್ಲ ಹಣಕಾಸು ಸೌಲಭ್ಯಗಳನ್ನು' ಒದಗಿಸುವ (ಒನ್ ಸ್ಟಾಪ್ ಫೈನಾನ್ಷಿಯಲ್ ಸೊಲ್ಯೂಷನ್ಸ್) ಕೇಂದ್ರವಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. 2017ರಲ್ಲಿ ನಿಮ್ಮ ಈ ಬ್ಯಾಂಕು 'ಒಂದು ಲಕ್ಷ ಕೋಟಿ ರೂ.ಗಳ' ವಾಣಿಜ್ಯ ವಹಿವಾಟಿನ ಮಿತಿಯನ್ನು ದಾಟುವುದರೊಂದಿಗೆ ಹೊಸ ಮೈಲುಗಲ್ಲನ್ನು ಸ್ಥಾಪಿಸಿತು.

ನೂತನ ಮೈಲುಗಲ್ಲುಗಳೊಂದಿಗೆ, ಇಂದು ಕೆಬಿಎಲ್ ಅತ್ಯಂತ ಉತ್ಸಾಹದೊಂದಿಗೆ ಪರಿವರ್ತನೆಯ ಹಾದಿಯಲ್ಲಿ ಮುನ್ನುಗ್ಗುತ್ತಿದೆ. ಬ್ಯಾಂಕಿಂಗ್ ಸೇವೆಗಳ ಮೂಲ ಕಲ್ಪನೆಯನ್ನೇ ಬದಲಾಯಿಸಬಹುದಾದ ಮತ್ತು ಭಾರತೀಯ ಬ್ಯಾಂಕುಗಳ ಕ್ಷೇತ್ರದಲ್ಲಿ 'ಭವಿಷ್ಯದ ಬ್ಯಾಂಕು' ಎಂದೇ ಗುರುತಿಸಿಕೊಳ್ಳುವ ದಿಕ್ಕಿನತ್ತ ಸಾಗುತ್ತಿದೆ. ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ಇನ್ಶೂರೆನ್ಸ್ (ಬಿಎಫ್ಎಸ್ಐ- Banking, financial services and insurance- BFSI) ಕ್ಷೇತ್ರದಲ್ಲಿ 'ಡಿಜಿಟಲ್ ಯುಗ' ಆರಂಭವಾಗುವುದನ್ನು ಮೊದಲೇ ಮನಗಂಡಿರುವ ಕರ್ಣಾಟಕ ಬ್ಯಾಂಕು ಸಂಪೂರ್ಣ 'ಡಿಜಿಟಲ್ ಬ್ಯಾಂಕ್' ಆಗುವತ್ತ ದೃಢ ಹೆಜ್ಜೆಗಳನ್ನಿಡುತ್ತಿದೆ. 2017ರ ನವೆಂಬರ್ ನಲ್ಲಿ ಆರಂಭವಾದ ಈ ಯಾತ್ರೆ, ಈಗ ವೇಗ ಪಡೆದುಕೊಂಡಿದ್ದು, ಸಾಲ ಮಂಜೂರಾತಿ ಪ್ರಕ್ರಿಯೆಯ ಪರಿವರ್ತನೆ, ಮಾನವ ಸಂಪನ್ಮೂಲದ ಪರಿವರ್ತನೆ, ಐಟಿ ಪರಿವರ್ತನೆ ಮತ್ತು ಗ್ರಾಹಕ ಅನುಭವಗಳಲ್ಲಿ ಪರಿವರ್ತನೆಯನ್ನು ಸಾಧ್ಯವಾಗಿಸಿದೆ. ಕೇವಲ ಎರಡು ವರ್ಷಗಳೊಳಗೆ ಡಿಜಿಟಲ್ ಚಾಲಿತ ಸಾಮರ್ಥ್ಯವನ್ನು ಗಳಿಸಿಕೊಳ್ಳುವತ್ತ ಬ್ಯಾಂಕ್ ಬಹಳಷ್ಟು ಮುನ್ನಡೆ ಸಾಧಿಸಿದೆ. 'ಮುಂದಿನ ಪೀಳಿಗೆಯ ಬ್ಯಾಂಕಿಂಗ್' (ನೆಕ್ಸ್ಟ್ ಜನರೇಶನ್ ಬ್ಯಾಂಕಿಂಗ್) ಅಂದರೆ ಹೀಗೆಯೇ ಇರಬೇಕು ಎಂದು ವ್ಯಾಖ್ಯಾನಿಸುವ ಮಟ್ಟಿಗೆ ಕರ್ಣಾಟಕ ಬ್ಯಾಂಕ್ ಮುನ್ನಡೆ ಸಾಧಿಸಿದೆ.

#### 1. ಡಿಜಿಟಲ್ ಸೆಂಟರ್ ಆಫ್ ಎಕ್ಸಲೆನ್ಸ್ (ಡಿಸಿಓಇ- ಡಿಜಿಟಲ್ ಉತ್ಕೃಷ್ಟತಾ ಕೇಂದ್ರ)

ನಿಮ್ಮ ಬ್ಯಾಂಕು ಬೆಂಗಳೂರಿನಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡ ಡಿಜಿಟಲ್ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಿದೆ. ಸ್ವತ್ತುಗಳು ಮತ್ತು ಋಣಬಾಧ್ಯತೆಯ ಉತ್ಪನ್ನಗಳ ವಿಚಾರದಲ್ಲಿ ವಿಶ್ಲೇಷಣೆ, ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಸೇವಾ ತತ್ಪರತೆಯಲ್ಲಿ ಗ್ರಾಹಕರಿಗೆ ಸಂಪೂರ್ಣ (ಎಂಡ್ ಟು ಎಂಡ್- ಮೊದಲಿಂದ ಕೊನೆಯ ವರೆಗೂ) ತೃಪ್ತಿ ನೀಡುವ ಕೇಂದ್ರವಾಗಿ ಇದು ಬೆಳೆಯುತ್ತಿದೆ. ಈ ಉಪಕ್ರಮದೊಂದಿಗೆ ಬ್ಯಾಂಕು ಸಾಲಗಳ ಮಂಜೂರಾತಿಯ ಅವಧಿಯನ್ನು (ಟಿಎಟಿ- ಟರ್ನ್ ಅರೌಂಡ್ ಟೈಮ್ ಫಾರ್ ಸ್ಯಾಂಕ್ಷನ್) ಗಣನೀಯವಾಗಿ ಸುಧಾರಿಸಿದ್ದಲ್ಲದೆ, ಬ್ಯಾಂಕಿನ ಸಾಮರ್ಥ್ಯವನ್ನು ಮೇಲ್ದರ್ಜೆಗೇರಿಸಿದೆ. ಭವಿಷ್ಯದಲ್ಲಿ ಎಲ್ಲ ರೀಟೇಲ್ ಉತ್ಪನ್ನಗಳನ್ನೂ ಈ ಉಪಕ್ರಮದ ಅಡಿಯಲ್ಲಿ ತರುವುದು ಮತ್ತು ಆ ಮೂಲಕ ಕಾರ್ಯ ದಕ್ಷತೆಯನ್ನು ಮತ್ತಷ್ಟು ವೃದ್ಧಿಸಿಕೊಳ್ಳುವುದು ಬ್ಯಾಂಕಿನ ಉದ್ದೇಶವಾಗಿದೆ.

#### 2. ಗ್ರಾಹಕರಿಗೆ ಸಂಪೂರ್ಣ ಡಿಜಿಟಲ್ ಅನುಭವವನ್ನು ಒದಗಿಸುವುದು:

ಈ ಯೋಜನೆಯ ಭಾಗವಾಗಿ ಬ್ಯಾಂಕು ಡಿಜಿಟಲ್ ಪ್ರಾಡಕ್ಟ್‌ಗಳ ವೈವಿಧ್ಯಮಯ ಶ್ರೇಣಿಯನ್ನೇ ಪರಿಚಯಿಸುತ್ತಿದೆ:

ಎ. ಎಕ್ಸ್‌ಪ್ರೆಸ್ ಗೃಹ ಸಾಲ

ಬಿ. ಎಕ್ಸ್‌ಪ್ರೆಸ್ ನಗದು ಸಾಲ (ವೈಯಕ್ತಿಕ ಸಾಲದ ಉತ್ಪನ್ನ)

ಸಿ. ಎಕ್ಸ್‌ಪ್ರೆಸ್ ವಾಹನ ಸಾಲ

ಡಿ. ಎಂಎಸ್ಎಂಇಗಳಿಗಾಗಿ ಎಕ್ಸ್‌ಪ್ರೆಸ್ ವರ್ಕಿಂಗ್ ಕ್ಯಾಪಿಟಲ್ ಲೋನ್ (ಪ್ರಾಯೋಗಿಕ ಚಾಲನೆ)

ಇ. ಎಂಎಸ್ಎಂಇಗಳಿಗಾಗಿ ಎಕ್ಸ್‌ಪ್ರೆಸ್ ಟರ್ಮ್ ಲೋನ್ (ಪ್ರಾಯೋಗಿಕ ಚಾಲನೆ)

ಎಫ್. ಎಕ್ಸ್‌ಪ್ರೆಸ್ ಉಳಿತಾಯ ಖಾತೆ (ಪ್ರಾಯೋಗಿಕ ಚಾಲನೆ)- ಎಸ್‌ಬಿ ಟ್ಯಾಬ್ ಬ್ಯಾಂಕಿಂಗ್

ಡಿಜಿಟಲ್ ಸಾಲದ ಪೋರ್ಟ್‌ಫೋಲಿಯೋ ಸ್ಥಿರವಾಗಿ ನಿರ್ಮಾಣಗೊಳ್ಳುತ್ತಿದ್ದು, ಎಕ್ಸ್‌ಪ್ರೆಸ್ ಹೋಮ್, ಕ್ಯಾಶ್ ಮತ್ತು ಕಾರು ಲೋನ್‌ಗಳ ಅಡಿಯಲ್ಲಿ ಮಂಜೂರಾತಿಗಳು ವೇಗ ಪಡೆದುಕೊಳ್ಳುತ್ತಿವೆ.

**3. ಡಿಜಿ ಬ್ರಾಂಚ್:**

2018ರ ನವೆಂಬರ್‌ನಲ್ಲಿ ಪ್ರಾರಂಭವಾದ ಡಿಜಿಟಲೀಕರಣದ ಮೊದಲ ಹೆಜ್ಜೆಯಲ್ಲಿ ಬ್ಯಾಂಕು ಬೆಂಗಳೂರಿನ ಬಸವನಗುಡಿಯಲ್ಲಿ ಸಂಪೂರ್ಣ ಸುಸಜ್ಜಿತ 'ಡಿಜಿ ಬ್ರಾಂಚ್' ಅನ್ನು ಸ್ಥಾಪಿಸಿತು. ಗ್ರಾಹಕರು ನೇರವಾಗಿ ಡಿಜಿ ಶಾಖೆಗೆ ಬಂದು ಉಳಿತಾಯ ಖಾತೆಯನ್ನು ತೆರೆಯುವುದರ ಜೊತೆಗೆ ಕೆಲವೇ ನಿಮಿಷಗಳಲ್ಲಿ ಸ್ವಯಂ ರಚಿಸಿಕೊಳ್ಳಬಹುದಾದ ಡೆಬಿಟ್ ಕಾರ್ಡ್ ಕೂಡ ಪಡೆಯಬಹುದು.

**4. ಡಿಜಿಟಲ್ ಚಾನೆಲ್‌ಗಳ ಬಳಕೆ:**

2020ರ ಮಾರ್ಚ್ 31ರಂತೆ ಶೇ 83.50ರಷ್ಟು ಬ್ಯಾಂಕಿನ ವಹಿವಾಟುಗಳು ಇಂಟರ್ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಎಟಿಎಂಗಳು, ಇ-ಲಾಬಿ, POS, ಇತ್ಯಾದಿ ಡಿಜಿಟಲ್ ಚಾನೆಲ್ ಗಳ ಮೂಲಕವೇ ನಡೆಯುತ್ತಿವೆ.

**5. ಆಂತರಿಕ ದಕ್ಷತೆ ಮತ್ತು ಪರಿಣಾಮಕಾರಿತ್ವ**

ಡಿಜಿಟಲ್ ಉಪಕ್ರಮಗಳನ್ನು ಬೆಂಬಲಿಸಲು ಮತ್ತು ನಿಯತಕಾಲಿಕ ಪರಾಮರ್ಶೆಗಾಗಿ ಡಿಜಿಟಲ್ ಇಕೊ-ಸಿಸ್ಟಂ ಅನ್ನು ನಿರ್ಮಿಸಲು ಆಂತರಿಕ ಉಪಕರಣಗಳ (ಇಂಟರ್ನಲ್ ಟೂಲ್ಸ್) ಗುಚ್ಛವನ್ನೇ ಚಾಲನೆಗೊಳಿಸಲಾಗಿದೆ. ಅವುಗಳನ್ನು ಈ ಕೆಳಗೆ ವಿವರಿಸಲಾಗಿದೆ:

**ಎ. ಕೆಬಿಎಲ್ ಫೋರ್ಸ್,** ಗ್ರಾಹಕರನ್ನು ಗುರುತಿಸುವಿಕೆಯ ಎಂಡ್-ಟು-ಎಂಡ್ ನಿರ್ವಹಣೆಗಾಗಿ ವಿನ್ಯಾಸಗೊಳಿಸಲಾದ ಲೀಡ್ ಮ್ಯಾನೇಜ್ಮೆಂಟ್ ಸಿಸ್ಟಂ (ಎಲ್‌ಎಂಎಸ್).

**ಬಿ. ಕೆಬಿಎಲ್ ಕಲೆಕ್ಟ್+** ಒತ್ತಡದಲ್ಲಿರುವ ಸಾಲಗಳ ವಾಸ್ತವಿಕ ಪರಿವೀಕ್ಷಣೆಗಾಗಿ ಅಭಿವೃದ್ಧಿಪಡಿಸಲಾದ ಡಿಜಿಟಲ್ ಕಲೆಕ್ಷನ್ ಟೂಲ್.

**ಸಿ. ಕೆಬಿಎಲ್ ವಸೂಲ್-ಸಾಫ್ಟ್:** ಅನುತ್ಪಾದಕ ಆಸ್ತಿಗಳ (ಖಾತೆಗಳ) ಪರಿವೀಕ್ಷಣೆ ಮತ್ತು ವಸೂಲಾತಿ ಉಪಕ್ರಮಗಳ ಪರಿಣಾಮಕಾರಿ ಚಾಲನೆಗಾಗಿ ಇರುವ ಡಿಜಿಟಲ್ ಎನ್‌ಪಿಎ ಮ್ಯಾನೇಜ್ಮೆಂಟ್ ಟೂಲ್.

**ಡಿ. ಕೆಬಿಎಲ್ ರೈಸ್:** ಸಿಬ್ಬಂದಿಗಳ ನಿರ್ವಹಣಾ ಮೌಲ್ಯಮಾಪನಕ್ಕಾಗಿ ಕಾರ್ಯಾಧಾರಿತ 'ಪರ್ಫಾರ್ಮೆನ್ಸ್ ಮ್ಯಾನೇಜ್ಮೆಂಟ್ ಸಿಸ್ಟಂ'.

**ಇ. ಕೆಬಿಎಲ್ ಇ-ಡ್ಯಾಶ್ಬೋರ್ಡ್:** ವ್ಯವಹಾರದ ಮೇಲ್ವಿಚಾರಣೆಗಾಗಿ ದೈನಂದಿನ ಬ್ಯುಸಿನೆಸ್ ಡ್ಯಾಶ್‌ಬೋರ್ಡ್.

**6. ಇತರ ಉಪಕ್ರಮಗಳು:**

ವರದಿ ವರ್ಷದಲ್ಲಿ, ಕೆಬಿಎಲ್ ವಿಕಾಸ್ ಅಡಿಯಲ್ಲಿ ಇನ್ನೂ ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.

1. **ಚಾಲ್ತಿ ಖಾತೆ, ಉಳಿತಾಯ ಖಾತೆ ಉತ್ಪನ್ನಗಳು (CASA products)**

   * **ಎಸ್‌ಬಿ-ಟಾಸ್ಕ್ (SB-TASC)** ಟ್ರಸ್ಟ್‌ಗಳು, ಸಂಘಟನೆಗಳು, ಸೊಸೈಟಿ, ಕ್ಲಬ್‌ಗಳು ಮುಂತಾದ ಸಾಂಸ್ಥಿಕ ಗ್ರಾಹಕರಿಗಾಗಿ ಮತ್ತು

   * **ಎಸ್‌ಬಿ-ಸ್ಯಾಲರಿ-** ವೇತನದಾರ ಗ್ರಾಹಕರಿಗಾಗಿ.

2. ಮೊಬೈಲ್ ಬ್ಯಾಂಕಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ 40ಕ್ಕೂ ಹೆಚ್ಚು ಎಎಂಸಿಗಳಲ್ಲಿ ಎಂಡ್-ಟು-ಎಂಡ್ ಡಿಜಿಟೈಸೇಶನ್ ನೊಂದಿಗೆ ಮ್ಯೂಚ್ಯುವಲ್ ಫಂಡ್‌ಗಳ ವಿತರಣೆಗಾಗಿ FISDOM ಜತೆಗೆ ಪಾಲುದಾರಿಕೆ.
3. ಬ್ಯಾಂಕಿನ ಸಂಪೂರ್ಣ ಮಾಲೀಕತ್ವದ ಹಣಕಾಸೇತರ ಅಂಗಸಂಸ್ಥೆ 'ಕೆಬಿಎಲ್ ಸರ್ವಿಸಸ್ ಲಿಮಿಟೆಡ್'ನ ಸ್ಥಾಪನೆ.
4. ಬ್ಯಾಂಕಿನ ಸಮಸ್ತ ಕಾರ್ಯಪಡೆಯಲ್ಲಿ 'ಸೇಲ್ಸ್ ಮತ್ತು ಮಾರ್ಕೆಟಿಂಗ್' ಸಂಸ್ಕೃತಿಯನ್ನು ಬೆಳೆಸಿ ಸಾಂಸ್ಥೀಕರಣಗೊಳಿಸುವ ಕ್ರಿಯಾಯೋಜನೆ.
5. ಬ್ಯಾಂಕಿನ ಎಲ್ಲ ಸ್ತರಗಳಲ್ಲಿ ಕಾರ್ಯ ದಕ್ಷತೆಯ ಉನ್ನತೀಕರಣ.

ವಿಶ್ವದಾದ್ಯಂತ, ಪರಿವರ್ತನೆ ಒಂದು ನಿರಂತರವಾದ ಪ್ರಕ್ರಿಯೆಯೆಂದು ಪರಿಗಣಿಸಲಾಗಿದೆ. ಇದನ್ನು ಮನಗಂಡು, ನಿಮ್ಮ ಬ್ಯಾಂಕ್ ಪರಿವರ್ತನಾ ಯೋಜನೆಯಲ್ಲಿ ತೆಗೆದುಕೊಂಡ ಕ್ರಮಗಳ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳುತ್ತ ಅವುಗಳ ಪ್ರಯೋಜನಗಳನ್ನು ಕ್ರೋಢೀಕರಿಸುವತ್ತ ಗಮನ ಹರಿಸಿದೆ.

## ಕೋವಿಡ್ -19 ಸಾಂಕ್ರಾಮಿಕ ರೋಗದಿಂದುಂಟಾದ ಅನಿಶ್ಚಿತತೆಗಳನ್ನು ಎದುರಿಸಲು ಕೈಗೊಂಡ ವಿಶೇಷ ಉಪಕ್ರಮಗಳು:

ದೇಶದಲ್ಲಿ ಕೋವಿಡ್ -19 ಸಾಂಕ್ರಾಮಿಕ ರೋಗದಿಂದ ಉಂಟಾದ ನಿರಂತರ ಅನಿಶ್ಚಿತತೆಗಳ ದೃಷ್ಟಿಯಿಂದ, ನಿಮ್ಮ ಬ್ಯಾಂಕ್ "ಸಂರಕ್ಷಣೆ, ಬಲವರ್ಧನೆ ಮತ್ತು ಪ್ರಬಲವಾಗಿ ಹೊರಹೊಮ್ಮುವಿಕೆ" ಎಂಬ ವಿಧಾನವನ್ನು ಅಳವಡಿಸಿಕೊಂಡು ಹಲವಾರು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಂಡಿದೆ. ಈ ನಿಟ್ಟಿನಲ್ಲಿ ಬಂಡವಾಳವನ್ನು ಸಂರಕ್ಷಿಸಲು ಮತ್ತು ದೈನಂದಿನ ವೆಚ್ಚಗಳನ್ನು ತಗ್ಗಿಸಲು ಬ್ಯಾಂಕ್ ಅನೇಕ ಕ್ರಮಗಳನ್ನು ಪ್ರಾರಂಭಿಸಿದೆ. ಅಂತೆಯೇ ಬ್ಯಾಂಕಿನ ನಿರ್ದೇಶಕರ ಮಂಡಳಿಯೂ ಸಹ, ನಿರ್ದೇಶಕರ ಮಂಡಳಿ ಹಾಗೂ ಸಮಿತಿಯ ಸಭೆಗಳಿಗೆ ಅನ್ವಯವಾಗುವ ಸಂಭಾವನೆಯಲ್ಲಿ ಕ್ರಮವಾಗಿ ಶೇ. 29 ಮತ್ತು ಶೇ. 20ರಷ್ಟು ಕಡಿತವನ್ನು ಸ್ವಯಂ ಘೋಷಿಸುವುದರೊಂದಿಗೆ ಮುಂಚೂಣಿಯಲ್ಲಿ ನಿಂತು ಪ್ರೋತ್ಸಾಹಿಸಿದೆ. ಅಲ್ಲದೆ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಸಹ 2019-20ಕ್ಕೆ ಅನ್ವಯವಾಗುವ ವೇರಿಯಬಲ್ ವೇತನವನ್ನು ಪಡೆಯದಿರಲು ಸ್ವಯಂ ಇಚ್ಛೆಯಿಂದ ನಿರ್ಧರಿಸಿರುತ್ತಾರೆ. ಜೊತೆಗೆ ಈಗಾಗಲೇ ಕೊಡಮಾಡಿರುವ ವಾಹನವನ್ನೇ ಬಳಸಲು ನಿರ್ಧರಿಸಿದ್ದು ಈ ಸಂಬಂಧ ಬ್ಯಾಂಕಿಗೆ ವೆಚ್ಚವಾಗಲಿದ್ದ ಖರ್ಚನ್ನು ಸಹ ಮುಂದೂಡಿದ್ದಾರೆ. ಬ್ಯಾಂಕಿನ ನಿರ್ದೇಶಕರ ಮಂಡಳಿಯ ಹಾಗೂ ಸಮಿತಿಯ ಸಭೆಗಳನ್ನು ಮತ್ತು ಆಂತರಿಕ ಮೇಲ್ವಿಚಾರಣಾ ಸಭೆಗಳನ್ನು ಡಿಜಿಟಲ್ ವಿಧಾನದಲ್ಲಿ ನಡೆಸುವುದರಿಂದ ಉಳಿತಾಯದ ಮೇಲೆ ದೊಡ್ಡ ಪ್ರಮಾಣದ ಧನಾತ್ಮಕ ಪರಿಣಾಮ ಉಂಟಾಗಿದೆ. ಈ ಎಲ್ಲಾ ವೆಚ್ಚ ತಗ್ಗಿಸುವ ಕ್ರಮಗಳು ಉದ್ದೇಶಿಸಿದ ಫಲಿತಾಂಶವನ್ನು ಕೊಡಲು ಪ್ರಾರಂಭಿಸಿವೆ.

## ನಿಧಿ ವರ್ಗಾವಣೆ ದರ ನೀತಿ (Fund Transfer Pricing )

ಪ್ರತಿಯೊಂದು ವ್ಯಾವಹಾರಿಕ ನಿರ್ಧಾರ/ಸಂಬಂಧದ ಪ್ರತಿಫಲ ಮತ್ತು ಲಾಭದಾಯಕತೆಯನ್ನು ಅರಿಯಲು ನಿಮ್ಮ ಬ್ಯಾಂಕ್ ಆಂತರಿಕವಾಗಿ ಅಭಿವೃದ್ಧಿಪಡಿಸಿರುವ FTP (ಫಂಡ್ ಟ್ರಾನ್ಸ್‌ಫರ್ ಪ್ರೈಸಿಂಗ್) ಕಾರ್ಯವಿಧಾನದ ಪರಿಕಲ್ಪನೆಯನ್ನು ಮತ್ತಷ್ಟು ಸುವ್ಯವಸ್ಥಿತಗೊಳಿಸಿದೆ. FTPಯ ಸಹಾಯದಿಂದ, ಬ್ಯಾಂಕ್ ತನ್ನ ಪ್ರತಿಯೊಂದು ಶಾಖೆಗಳು, ವ್ಯಾಪಾರ ಘಟಕಗಳು, ಉತ್ಪನ್ನಗಳು, ವಲಯಗಳು, ಗ್ರಾಹಕರು, ವ್ಯವಹಾರಗಳು ಇತ್ಯಾದಿಗಳ ಲಾಭ ಅಥವಾ ನಷ್ಟವನ್ನು ಸೂಕ್ಷ್ಮವಾಗಿ ಗಮನಿಸಿ ಸೂಕ್ತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವತ್ತ ಹೆಚ್ಚಿನ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಬ್ಯಾಂಕಿನಾದ್ಯಂತ ಒಟ್ಟಾರೆ ದಕ್ಷತೆ ಮತ್ತು ವೃತ್ತಿಪರತೆಯನ್ನು ಹೆಚ್ಚಿಸುವಲ್ಲಿ ಇದು ಒಂದು ಉತ್ತಮ ಹೆಜ್ಜೆಯಾಗಿದೆ.

## ಕಾರ್ಯಕಾರಿ ಮಂಡಳಿ ಕಲಾಪ ಮತ್ತು ವಿಶ್ಲೇಷಣೆ:

### ಜಾಗತಿಕ ಆರ್ಥಿಕತೆ

ಜಾಗತಿಕ ಆರ್ಥಿಕತೆಯು ಪ್ರಸಕ್ತ ವರ್ಷದಲ್ಲಿ ಕಂಡು ಕೇಳರಿಯದ ಪ್ರಕ್ಷುಬ್ಧ ವಿದ್ಯಮಾನಗಳಿಗೆ ಸಾಕ್ಷಿಯಾಗಿದೆ. ಬ್ರೆಕ್ಸಿಟ್, ಭೌಗೋಳಿಕ-ರಾಜಕೀಯ ಕಳವಳಗಳು, ಅಮೇರಿಕಾ ಹಾಗೂ ಚೀನಾ ನಡುವಿನ ವ್ಯಾಪಾರ ಸಂಬಂಧಿ ಉದ್ವಿಗ್ನತೆಗಳು, ಮಾರುಕಟ್ಟೆ ಬೇಡಿಕೆಯಲ್ಲಿ ಕಂಡುಬಂದ ಮಂದಗತಿ, ಜಾಗತಿಕ ಉತ್ಪಾದನೆ ಮತ್ತು ವ್ಯಾಪಾರದಲ್ಲಿನ ಕುಸಿತ ಮುಂತಾದ ಹಲವು ವಿದ್ಯಮಾನಗಳು ವರ್ಷವಿಡೀ ಕಂಡು ಬಂದಿದ್ದರೆ, ವರ್ಷಾಂತ್ಯಕ್ಕೆ, ಇಡೀ ವಿಶ್ವವನ್ನೇ ತಲ್ಲಣಗೊಳಿಸಿದ ಕೋವಿಡ್-19 ಸೋಂಕು ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ನಿಶ್ಚಲಗೊಳಿಸಿತು.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ವರದಿಯಂತೆ ಜಾಗತಿಕ ಆರ್ಥಿಕತೆಯು ವಿಶ್ವವ್ಯಾಪಿ ಹಬ್ಬಿರುವ ಕೋವಿಡ್-19 ಸೋಂಕಿನಿಂದಾಗಿ ತೀವ್ರ ಹಿನ್ನಡೆಯನ್ನು ಎದುರಿಸುತ್ತಿದೆ. ಇದು 1930ರ ಮಹಾ ಆರ್ಥಿಕ ಕುಸಿತಕ್ಕಿಂತಲೂ ಹೆಚ್ಚಿನ ದುಷ್ಪರಿಣಾಮ ಅನುಭವಿಸಿದ್ದು, ವಿಶ್ವದೆಲ್ಲೆಡೆ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ. 2019ರಲ್ಲಿ ಶೇ. 2.90ರಷ್ಟಿದ್ದ ಜಾಗತಿಕ ಆರ್ಥಿಕ ಬೆಳವಣಿಗೆದರವು 2020ರಲ್ಲಿ ಶೇ.3ರಷ್ಟು(-3%) ಕುಗ್ಗುವಿಕೆಗೆ ಒಳಗಾಗಬಹುದೆಂದು ಅಂದಾಜಿಸಲಾಗಿದೆ.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಮುನ್ನೋಟದಂತೆ 2021ರ ಹೊತ್ತಿಗೆ ಜಾಗತಿಕ ಆರ್ಥಿಕತೆಯು ಶೇ. 5.8ರಷ್ಟು ಬೆಳವಣಿಗೆದರವನ್ನು ಧಾಖಲಿಸಬಹುದೆಂದು ಅಂದಾಜಿಸಲಾಗಿದೆ. ಅಂತೆಯೇ, ಮುಂದುವರಿದ ದೇಶಗಳು ಮತ್ತು ಉದಯೋನ್ಮುಖ ಹಾಗು ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿ 2021ರ ಹೊತ್ತಿಗೆ ಅಭಿವೃದ್ಧಿದರ ಕ್ರಮವಾಗಿ ಶೇ.4.50 ಮತ್ತು ಶೇ. 6.60 ತಲುಪಬಹುದೆಂದು ನೀರಿಕ್ಷಿಸಲಾಗಿದೆ. ಆದರೆ, ಆರ್ಥಿಕತೆಯು ಮೊದಲಿನಂತೆ ಯಥಾಸ್ಥಿತಿಗೆ ಮರಳುವಲ್ಲಿ, 2020ರ ದ್ವಿತೀಯಾರ್ಧದಲ್ಲಿ ಕೋವಿಡ್-19 ನ ಸಮರ್ಪಕ ತಡೆಗಟ್ಟುವಿಕೆ, ಸರಕಾರದ ಸೂಕ್ತ ನೀತಿಗಳು, ವ್ಯಾಪಾರ ವಹಿವಾಟಿನ ಸಹಜ ಸ್ಥಿತಿಗೆ ಮರಳುವಿಕೆ ಇತ್ಯಾದಿ ಮಹತ್ತರ ಪಾತ್ರ ವಹಿಸಲಿವೆ.

## ದೇಶೀಯ ಆರ್ಥಿಕತೆ

2019-20ರ ಮೊದಲಾರ್ಧದಲ್ಲಿ ಜಿಡಿಪಿ ಬೆಳವಣಿಗೆಯು ಶೇಕಡಾ 4.8 ಕ್ಕೆ ಇಳಿವುದರೊಂದಿಗೆ ಭಾರತೀಯ ಆರ್ಥಿಕತೆಯಲ್ಲಿ ಮಂದಗತಿಯ ಲಕ್ಷಣಗಳು ಕಂಡುಬಂದವು. ಆಟೋ, ನಿರ್ಮಾಣ ಕ್ಷೇತ್ರ, ಗಣಿಗಾರಿಕೆ, ಎಂಜಿನಿಯರಿಂಗ್ ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿನ ಮಾರುಕಟ್ಟೆ ಬೇಡಿಕೆಯಲ್ಲಿನ ಸ್ತಬ್ಧತೆಯು ಆರ್ಥಿಕತೆಯ ಹಿಂಜರಿತಕ್ಕೆ ಕಾರಣವಾಗಿವೆ. ಅಂತೆಯೇ ಒತ್ತಡಕ್ಕೊಳಗಾದ ಹಣಕಾಸಿನ ವಾತಾವರಣದಿಂದಾಗಿ ಇದರ ಪ್ರಭಾವವು ಇನ್ನೂ ಹೆಚ್ಚಾಗಿದೆ. ಇದಕ್ಕೆ ಪೂರಕವೆಂಬಂತೆ, ಕೈಗಾರಿಕಾ ಉತ್ಪಾದನಾ ಸೂಚ್ಯಂಕದಂತೆ(ಐಐಪಿ) ಕೈಗಾರಿಕಾ ವಲಯವು 2019-20ರಲ್ಲಿ (ಏಪ್ರಿಲ್-ಡಿಸೆಂಬರ್) ಶೇ. 0.5 ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದು, 2018-19ರ ಇದೇ ಅವಧಿಯಲ್ಲಿ ಇದು ಶೇ 4.7 ರಷ್ಟಿತ್ತು. ಇಂಡಿಯಾ ಬ್ರಾಂಡ್ ಇಕ್ವಿಟಿ ಫೌಂಡೇಶನ್ (IBEF) ಆರ್ಥಿಕ ಸಮೀಕ್ಷೆಯ ಪ್ರಕಾರ, 2019ರ ಡಿಸೆಂಬರ್‌ನಲ್ಲಿ 2.6ರಷ್ಟಿದ್ದ ಸಗಟು ಬೆಲೆ ಸೂಚ್ಯಂಕ(WPI) ಹಣದುಬ್ಬರವು 2020 ಜನವರಿಯಲ್ಲಿ ಶೇ 3.10ಕ್ಕೆ ಏರಿದೆ. ಅಂತೆಯೇ ಗ್ರಾಹಕ ಬೆಲೆ ಸೂಚ್ಯಂಕ-ಸಂಯೋಜಿತ ಹಣದುಬ್ಬರವು (CPI-Combined Inflation) ಶೇ 3.6ರಿಂದ (ಏಪ್ರಿಲ್-ಜನವರಿ 2019) ಶೇ 4.50ಕ್ಕೆ ಏರಿಕೆ ಕಂಡಿದೆ (ಏಪ್ರಿಲ್-ಜನವರಿ 2020).

ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು ಮತ್ತು ಬೆಳವಣಿಗೆಯನ್ನು ಹೆಚ್ಚಿಸಲು ಸರ್ಕಾರವು ಅನೇಕ ಬೆಂಬಲ ನೀತಿಗಳನ್ನು ರೂಪಿಸಿದೆ. 2020-21ರ ವೇಳೆಗೆ ಆರ್ಥಿಕತೆಯು ಶ್ರೀಘ್ರವಾಗಿ ಸಹಜತೆಗೆ ಮರುಕಳಿಸುವ ಸಾಧ್ಯತೆಗಳನ್ನು ಪ್ರಸ್ತುತಪಡಿಸುವ ನಿಟ್ಟಿನಲ್ಲಿ ಸರಕಾರವು, 'ಆತ್ಮನಿರ್ಭರ್ ಭಾರತ್' ಕಾರ್ಯಕ್ರಮದಡಿ ರೂ.20 ಲಕ್ಷ ಕೋಟಿ ಪ್ಯಾಕೇಜ್, ಆರ್‌ಬಿಐನಿಂದ ರೆಪೊದರ ಇಳಿಕೆ, ಬಿಎಸ್-VI ಮಾನದಂಡಕ್ಕೆ ಹೊಂದಿಕೊಳ್ಳುತ್ತಿರುವ ಆಟೋ ವಲಯಕ್ಕೆ ಮತ್ತು ಎಂಎಸ್‌ಎಂಇ ವಲಯಕ್ಕೆ ಕ್ರೆಡಿಟ್ ಲೈನ್ (GECL) ನಿಂದ ಅಗತ್ಯ ಪ್ರೋತ್ಸಾಹ, ಬೇಡಿಕೆ ಮತ್ತು ಉದ್ಯೋಗಾವಕಾಶಗಳ ಹೆಚ್ಚಳಕ್ಕಾಗಿ 'ರಾಷ್ಟ್ರೀಯ ಮೂಲಸೌಕರ್ಯ ಪೈಪ್‌ಲೈನ್ (NIP)' ಯೋಜನೆಯಡಿಯಲ್ಲಿ ದೊಡ್ಡ ಮಟ್ಟದ ಹೂಡಿಕೆ, ಮುಂತಾದ ಪರಿಹಾರ ಕ್ರಮಗಳನ್ನು ಕೈಗೊಂಡಿದೆ.

ಆರ್‌ಬಿಐನ ವರದಿಗಳ ಪ್ರಕಾರ, 2020-21ರ ಮೊದಲಾರ್ಧದಲ್ಲಿ ಜಿಡಿಪಿ ಬೆಳವಣಿಗೆಯು ನಕಾರಾತ್ಮಕವಾಗಿ ಉಳಿಯುವ ನೀರೀಕ್ಷೆಯಿದ್ದರೂ, ದ್ವಿತೀಯಾರ್ಧದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಿಸುವ ಸಾಧ್ಯತೆಯಿದೆ. ದೇಶೀಯ ಖಾಸಗಿ ಬಳಕೆಯಲ್ಲಿನ ಕುಸಿತ, ಗ್ರಾಮೀಣ ಬೇಡಿಕೆಯ ಮಂದಗತಿ, ಶ್ರಮಿಕ ಪ್ರಧಾನ ರಫ್ತುವಲಯದ ಹಿನ್ನಡೆ, ಸ್ಥೂಲ ಆರ್ಥಿಕತೆಯಲ್ಲಿನ ಹಿಂಜರಿಕೆ ಹಾಗೂ ಹಣಕಾಸು ಮತ್ತು ಸರಕು ಮಾರುಕಟ್ಟೆಗಳಲ್ಲಿ ಒತ್ತಡ ಇವೆಲ್ಲವೂ ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿವೆ. ಆದಾಗ್ಯೂ, ಪ್ರಸಕ್ತ ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ, ಯೋಜನೆಗಳನ್ನು ರೂಪಿಸುವುದು ಕಷ್ಟಕರ ಮತ್ತು ಸವಾಲಿನ ಸಂಗತಿಯಾಗಿದೆ.

## ಬ್ಯಾಂಕಿಂಗ್ ವಲಯದಲ್ಲಿನ ಬೆಳವಣಿಗೆಗಳು

2019 ಭಾರತೀಯ ಬ್ಯಾಂಕಿಂಗ್ ಉದ್ಯಮಕ್ಕೆ ಪರಿವರ್ತನೆಯ ವರ್ಷವಾಗಿತ್ತು. ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ವಿಲೀನಗೊಳಿಸಿ 10 ಬೃಹತ್ ಬ್ಯಾಂಕುಗಳನ್ನು ರಚಿಸುವ ಸರ್ಕಾರದ ಕ್ರಮವು ಒಂದು ಪ್ರಮುಖ ಬೆಳವಣಿಗೆಯಾಗಿದೆ. ಜಾಗತಿಕ ಮತ್ತು ಭಾರತೀಯ ಆರ್ಥಿಕತೆಗಳಲ್ಲಿನ ಮಂದಗತಿ, ನಿಸ್ತೇಜ ಬೇಡಿಕೆ ಮತ್ತು ಸರ್ಕಾರದ ಮಿತಕರ ಖರ್ಚು ಸೇರಿದಂತೆ ಹಲವಾರು ಅಂಶಗಳಿಂದಾಗಿ 2020 ಆರ್ಥಿಕ ವರ್ಷದ ಪ್ರಥಮಾರ್ಧದಲ್ಲಿ ಭಾರತೀಯ ಕಂಪನಿಗಳ ಸಾಲದ ಗುಣಮಟ್ಟದ ಮೇಲಿನ ಒತ್ತಡ ಹೆಚ್ಚಾಗಿದೆ.

ಹೆಚ್ಚಿನ ಅನುತ್ಪಾದಕ ಆಸ್ತಿ ಮತ್ತು ದೊಡ್ಡ ಮೊತ್ತದ ಸಾಲಗಳಿಂದಾಗಿ ಒತ್ತಡಕ್ಕೊಳಗಾದ ಬ್ಯಾಂಕುಗಳ ಸ್ಥಿರತೆಯನ್ನು ಪುನಃಸ್ಥಾಪಿಸಲು ಮತ್ತು ನಿಯಂತ್ರಣಾ ಚೌಕಟ್ಟನ್ನು ಬಿಗಿಗೊಳಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು, ವಿತ್ತೀಯ ಸೇರ್ಪಡೆ ಮತ್ತು ಡಿಜಿಟಲೀಕರಣದತ್ತ ನೀಡಿರುವ ಒತ್ತು ಇವೆಲ್ಲವೂ ಭಾರತೀಯ ಬ್ಯಾಂಕಿಂಗ್ ಉದ್ಯಮಕ್ಕೆ ಪೂರಕವಾಗಿವೆ.

ಭಾರತೀಯ ಬ್ಯಾಂಕಿಂಗ್ ಉದ್ಯಮವು ಇತ್ತೀಚೆಗೆ ಪರಿಚಯಿಸಲಾದ ಪಾವತಿ ಮತ್ತು ಸಣ್ಣ ಹಣಕಾಸು ಬ್ಯಾಂಕುಗಳಂತಹ ನವೀನ ಬ್ಯಾಂಕಿಂಗ್ ಮಾಡೆಲ್ ಗಳಿಗೆ ಸಾಕ್ಷಿಯಾಗಿದೆ. ಭಾರತದಲ್ಲಿನ ಡಿಜಿಟಲ್ ಪಾವತಿ ವ್ಯವಸ್ಥೆಯು 25 ದೇಶಗಳ ಹೋಲಿಕೆಯಲ್ಲಿ ಹೆಚ್ಚು ವಿಕಾಸಗೊಂಡಿದ್ದು, ವೇಗದ ಪಾವತಿ ಆವಿಷ್ಕಾರ ಸೂಚ್ಯಂಕದಲ್ಲಿ (FPII) ಭಾರತದ ತತ್ ಕ್ಷಣದ ಪಾವತಿ ಸೇವೆ (IMPS) ಐದನೇ ಹಂತದ ಏಕೈಕ ವ್ಯವಸ್ಥೆಯಾಗಿದೆ. ದೇಶೀಯ ಬ್ಯಾಂಕಿಂಗ್ ಉದ್ಯಮದ ಪುನರ್‌ರಚನೆ ಮಾಡುವ ನಿಟ್ಟಿನಲ್ಲಿ ಆರ್‌ಬಿಐ ಕೈಗೊಂಡ ಹೊಸ ಕ್ರಮಗಳು ಮಹತ್ವದ ಸಹಕಾರ ನೀಡಲಿದೆ.

## ಅವಕಾಶಗಳು

ಕೇಂದ್ರ ಸರ್ಕಾರದ ಬಜೆಟ್ ನ ಗುರಿಗಳಾದ 'ಕನಿಷ್ಠ ನಿಯಂತ್ರಣ ಗರಿಷ್ಠ ಆಡಳಿತ' (Minimum Government Maximum Governance), 'ಮೇಕ್ ಇನ್ ಇಂಡಿಯಾ' ವ್ಯವಹಾರ ವಾತಾವರಣವನ್ನು ಉತ್ತೇಜಿಸುವುದು, ಎಂಎಸ್ಎಂಇ (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು) ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು, ಹೊಸ ಉದ್ಯೋಗಾವಕಾಶಗಳ ಸೃಷ್ಟಿ ಹಾಗು ಮೂಲಸೌಕರ್ಯ ನಿರ್ಮಾಣದತ್ತ ಹೂಡಿಕೆಗೆ ಆದ್ಯತೆ ಇವೆಲ್ಲವುಗಳಿಂದ ಬೆಳವಣಿಗೆಗೆ ಪ್ರಮುಖ ಅವಕಾಶ ಲಭಿಸಲಿದೆ. ಡಿಸೆಂಬರ್ 31, 2019 ರಂದು ಬಿಡುಗಡೆಯಾದ "ರಾಷ್ಟ್ರೀಯ ಮೂಲಸೌಕರ್ಯ ಪೈಪ್‌ಲೈನ್" ವರದಿಯಂತೆ ಭಾರತದಲ್ಲಿ 2020-2025ರ ಆರ್ಥಿಕ ಅವಧಿಯಲ್ಲಿ ಒಟ್ಟು ರೂ.102 ಲಕ್ಷ ಕೋಟಿ (ಯುಎಸ್ $ 1.44 ಟ್ರಿಲಿಯನ್) ಮೂಲಸೌಕರ್ಯ ಹೂಡಿಕೆಯನ್ನು ಯೋಜಿಸಲಾಗಿದೆ. ಸರ್ಕಾರದ ವ್ಯಾಪಾರ-ಪರ ನೀತಿಗಳು, "ಡಿಜಿಟಲ್ ಇಂಡಿಯಾ ಡ್ರೈವ್" ಮತ್ತು ತಂತ್ರಜ್ಞಾನದ ಬಳಕೆಯಿಂದಾಗಿ ವಿಶ್ವ ಬ್ಯಾಂಕಿನ "ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್" ವರದಿಯ 'ಟ್ರೇಡಿಂಗ್ ಅಕ್ರಾಸ್ ಬಾರ್ಡರ್ಸ್' ಸೂಚಕದಂತೆ 2014ರಲ್ಲಿ 142ನೇ ಸ್ಥಾನದಲ್ಲಿದ್ದ ಭಾರತ, 2019ರ ವೇಳೆಗೆ ಅನೇಕ ರಾಷ್ಟ್ರಗಳನ್ನು ಹಿಂದಿಕ್ಕಿ 63ನೇ ಸ್ಥಾನಕ್ಕೇರುವ ಮೂಲಕ ಪ್ರಮುಖ ಜಾಗತಿಕ ಉದ್ಯಮಗಳಿಗೆ ನೆಚ್ಚಿನ ತಾಣವಾಗಲು ಅವಕಾಶಗಳನ್ನು ತೆರೆದಿದೆ.

## ಬ್ಯಾಂಕಿನ ವಹಿವಾಟು ವಿಭಾಗಗಳು:

ನಿಮ್ಮ ಬ್ಯಾಂಕಿನ ವಹಿವಾಟುಗಳು ಪ್ರಾಥಮಿಕವಾಗಿ ರೀಟೇಲ್ ಬ್ಯಾಂಕಿಂಗ್, ಕಾರ್ಪೊರೇಟ್ ಬ್ಯಾಂಕಿಂಗ್, ಖಜಾನೆ ಕಾರ್ಯಾಚರಣೆ ಮತ್ತು ಇತರ ಬ್ಯಾಂಕಿಂಗ್ ಚಟುವಟಿಕೆಗಳನ್ನು ಒಳಗೊಂಡಿದೆ.

## ರೀಟೇಲ್ ಬ್ಯಾಂಕಿಂಗ್:

ರೀಟೇಲ್ ಬ್ಯಾಂಕಿಂಗ್ ವಿಭಾಗದಲ್ಲಿ ವೈಯಕ್ತಿಕ ಬ್ಯಾಂಕಿಂಗ್‌ನ ವೈವಿಧ್ಯಮಯ ಉತ್ಪನ್ನಗಳನ್ನು ನಿಮ್ಮ ಬ್ಯಾಂಕ್ ಒದಗಿಸುತ್ತಿದೆ. ರೀಟೇಲ್ ಸಾಲದ ಉತ್ಪನ್ನಗಳಲ್ಲಿ ಮೋರ್ಟ್‌ಗೇಜ್ ಲೋನ್ಸ್ (ಅಡಮಾನ ಸಾಲಗಳು), ಆಟೊಮೊಬೈಲ್ ಸಾಲಗಳು, ವೈಯಕ್ತಿಕ ಸಾಲಗಳು, ಶಿಕ್ಷಣ ಸಾಲಗಳು, ಠೇವಣಿಗಳ ಮೇಲಿನ ಸಾಲ, ಸೆಕ್ಯುರಿಟಿಗಳ ಮೇಲಿನ ಸಾಲಗಳು, ಚಿನ್ನದ ಮೇಲಿನ ಸಾಲ, ಸಣ್ಣ ಉದ್ಯಮ ಸಾಲಗಳು ಮತ್ತು ಕೃಷಿ ಸಾಲಗಳು ಕೂಡ ಇದರಲ್ಲಿ ಸೇರಿವೆ. ಬ್ಯಾಂಕಿನ ರಿಟೇಲ್ ಸಾಲಗಳ ಪೋರ್ಟ್‌ಫೋಲಿಯೋದಲ್ಲಿ ಗೃಹ ಮತ್ತು ಅಡಮಾನ ಫೈನಾನ್ಸ್, ಕೃಷಿ ಸಾಲ, ವೈಯಕ್ತಿಕ ಸಾಲ ಮತ್ತು ಆಟೊಮೊಬೈಲ್ ಸಾಲಗಳು ಪ್ರಮುಖವಾಗಿವೆ

## ಎಂಎಸ್ಎಂಇ ಸಾಲ:

ರೀಟೇಲ್ ಬ್ಯಾಂಕಿಂಗ್‌ನ ಭಾಗವಾಗಿ ನಿಮ್ಮ ಬ್ಯಾಂಕು ಎಂಎಸ್ಎಂಇ ವಲಯಕ್ಕೂ ಬೆಂಬಲ ನೀಡುತ್ತಿದೆ. ದಿನವಹಿ ಬಂಡವಾಳದ ಹಣಕಾಸು (ವರ್ಕಿಂಗ್ ಕ್ಯಾಪಿಟಲ್ ಫೈನಾನ್ಸ್), ದೀರ್ಘಾವಧಿ ಸಾಲಗಳು (ಟರ್ಮ್ ಲೋನ್ಸ್), ಬ್ಯುಸಿನೆಸ್ ಫೈನಾನ್ಸ್ ಪ್ರಾಡಕ್ಟ್ಸ್ (ಔದ್ಯಮಿಕ ಹಣಕಾಸು ಉತ್ಪನ್ನಗಳು)- ಎಲ್ಲ ಬಗೆಯ ಉದ್ಯಮಗಳಿಗೂ ಸೂಕ್ತವೆನಿಸುವ ಫಂಡ್ ಆಧರಿತ ಮತ್ತು ನಾನ್-ಫಂಡ್ ಆಧರಿತ ಹಣಕಾಸು ಉತ್ಪನ್ನಗಳನ್ನು ನಿಮ್ಮ ಬ್ಯಾಂಕ್ ಒದಗಿಸುತ್ತಿದೆ.

ವಿಶ್ವಸಂಸ್ಥೆಯ ಇಂಡಸ್ಟ್ರಿಯಲ್ ಡೆವಲಪ್ಮೆಂಟ್ ಆರ್ಗನೈಸೇಶನ್ (ಯುನಿಡೊ) ದೇಶಾದ್ಯಂತ 388 ಎಂಎಸ್ಎಂಇ ಗುಚ್ಛಗಳನ್ನು (ಕ್ಲಸ್ಟರ್) ಗುರುತಿಸಿದೆ. ಅವುಗಳ ಪೈಕಿ 200ಕ್ಕೂ ಅಧಿಕ ಕ್ಲಸ್ಟರ್ ಗಳಲ್ಲಿ ಕೆಬಿಎಲ್ ತನ್ನ ಅಸ್ತಿತ್ವ ಹೊಂದಿದೆ. ಎಂಎಸ್ಎಂಇ ಸೆಕ್ಟರ್ ಘಟಕಗಳಿಗೆ ಹಣಕಾಸು ಒದಗಿಸುವ ಪ್ರತ್ಯೇಕ ಶಾಖೆಗಳು ಮತ್ತು ತಂಡಗಳನ್ನು ಕೆಬಿಎಲ್ ಹೊಂದಿದೆ.

ಈ ವಲಯದಲ್ಲಿ 2613.35 ಕೋಟಿ ರೂ ಆದಾಯ ಬಂದಿದ್ದು, ಲಾಭಕ್ಕೆ 451.31 ಕೋಟಿ ರೂ ಕೊಡುಗೆ ನೀಡಿದೆ (ತೆರಿಗೆ ಮತ್ತು ಹಂಚಿಕೆ ಮಾಡಲಾಗದ ಖರ್ಚಿನ ಪೂರ್ವದಲ್ಲಿ).

### ಕಾರ್ಪೊರೇಟ್ ಬ್ಯಾಂಕಿಂಗ್:

ನಿಮ್ಮ ಬ್ಯಾಂಕಿನ ಕಾರ್ಪೊರೇಟ್ ಮತ್ತು ಸಗಟು ಬ್ಯಾಂಕಿಂಗ್ ವಹಿವಾಟು (ರೂ.100 ಕೋಟಿ ಗಳಿಗೂ ಅಧಿಕ ಮೊತ್ತದ) ಎಂಟರ್‌ಪ್ರೈಸರ್, ಕಾರ್ಪೊರೇಟ್ ಘಟಕಗಳು, ದೊಡ್ಡ ಗಾತ್ರದ ಕಾರ್ಪೊರೇಶನ್‌ಗಳಿಗೆ ಹಣಕಾಸು ಒದಗಿಸುತ್ತಿದೆ. ಕಾರ್ಪೊರೇಟ್ ಬ್ಯಾಂಕಿಂಗ್ ಉತ್ಪನ್ನಗಳು ಮತ್ತು ಸೇವೆಗಳಲ್ಲಿ ಫಂಡ್ ಆಧರಿತ ಮತ್ತು ನಾನ್-ಫಂಡ್ ಆಧರಿತ ಉತ್ಪನ್ನಗಳು; ದಿನವಹಿ ಬಂಡವಾಳದ ಹಣಕಾಸು (ವರ್ಕಿಂಗ್ ಕ್ಯಾಪಿಟಲ್ ಫೈನಾನ್ಸ್), ದೀರ್ಘಾವಧಿ ಸಾಲಗಳು (ಟರ್ಮ್ ಲೋನ್ಸ್), ವಿದೇಶಿ ವಿನಿಮಯ ಸೇವೆಗಳು, ರಚನಾತ್ಮಕ ಸಾಲದ ಪ್ರಾಡಕ್ಟ್ ಗಳು ಮತ್ತು ಲೆಟರ್ ಆಫ್ ಕ್ರೆಡಿಟ್ (ಸಾಲಪತ್ರ), ಗ್ಯಾರಂಟಿಗಳು, ಬಿಲ್ ಡಿಸ್ಕೌಂಟಿಂಗ್ ಇತ್ಯಾದಿ ಟ್ರೇಡ್ ಫೈನಾನ್ಸಿಂಗ್ ಉತ್ಪನ್ನಗಳನ್ನು ನಿಮ್ಮ ಬ್ಯಾಂಕ್ ಪೂರೈಸುತ್ತಿದೆ.

ವರದಿ ವರ್ಷದಲ್ಲಿ ಈ ವಿಭಾಗದಲ್ಲಿ ಬ್ಯಾಂಕ್ ಗಳಿಸಿದ ಆದಾಯ 3138.02 ಕೋಟಿ ರೂ.ಗಳಾಗಿದ್ದು, ಲಾಭಕ್ಕೆ 556.03ಕೋಟಿ ರೂ. ಕೊಡುಗೆ ನೀಡಿದೆ (ತೆರಿಗೆ ಮತ್ತು ಹಂಚಿಕೆ ಮಾಡಲಾಗದ ಖರ್ಚಿನ ಪೂರ್ವದಲ್ಲಿನ).

### ಖಜಾನೆ ನಿರ್ವಹಣೆಗಳು:

ಬ್ಯಾಂಕಿನ ಖಜಾನೆ ನಿರ್ವಹಣೆ ಕಾರ್ಯಾಚರಣೆಗಳಲ್ಲಿ ಪ್ರಾಥಮಿಕವಾಗಿ ಎಸ್‌ಎಲ್‌ಆರ್ ಮತ್ತು ಸಿಆರ್‌ಆರ್ ನಂತಹ ಶಾಸನಬದ್ಧ ಮೀಸಲುಗಳ ನಿರ್ವಹಣೆ, ಲಿಕ್ವಿಡಿಟಿ ನಿರ್ವಹಣೆ, ಹೂಡಿಕೆ ಮತ್ತು ಟ್ರೇಡಿಂಗ್ ಚಟುವಟಿಕೆಗಳು ಮತ್ತು ವಿದೇಶಿ ವಿನಿಮಯ ಚಟುವಟಿಕೆಗಳು ಸೇರಿವೆ. ಲಿಕ್ವಿಡಿಟಿ ನಿರ್ವಹಣೆಯ ಭಾಗವಾಗಿ ಖಜಾನೆಯು (ಟ್ರೆಶರಿ) ಪ್ರಾಥಮಿಕವಾಗಿ ಸಾರ್ವಭೌಮ ಸಾಲ ಉಪಕರಣಗಳು (ಸೊವರಿನ್ ಡೆಟ್ ಇನ್‌ಸ್ಟ್ರುಮೆಂಟ್ಸ್) ಮತ್ತು ಇತರ ಸ್ಥಿರ ಆದಾಯದ ಸೆಕ್ಯುರಿಟಿಗಳನ್ನು ನಿರ್ವಹಿಸುತ್ತದೆ. ಅಲ್ಪಾವಧಿ ಹೆಚ್ಚುವರಿ ಲಿಕ್ವಿಡಿಟಿ ನಿರ್ವಹಣೆಗಾಗಿ ಬ್ಯಾಂಕು ವಾಣಿಜ್ಯ ಪತ್ರಗಳು, ಮ್ಯೂಚ್ಯುವಲ್ ಫಂಡ್ಸ್, ಠೇವಣಿ ಸರ್ಟಿಫಿಕೇಟ್‌ಗಳು ಮತ್ತು ಫ್ಲೋಟಿಂಗ್ ರೇಟ್ ಇನ್‌ಸ್ಟ್ರುಮೆಂಟ್ಸ್‌ಗಳನ್ನು ನಿರ್ವಹಿಸುತ್ತದೆ.

ನಿಮ್ಮ ಬ್ಯಾಂಕು ವಿದೇಶಿ ವಿನಿಮಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು, ಮುಂಬಯಿಯ ಕೇಂದ್ರೀಕೃತ ಟ್ರೇಡಿಂಗ್ ಫ್ಲೋರ್‌ನಲ್ಲಿ ಇದನ್ನು ನಿರ್ವಹಿಸಲಾಗುತ್ತಿದೆ. ಕಾರ್ಪೊರೇಟ್ ಗ್ರಾಹಕರಿಗಾಗಿ ಫಾರ್ವರ್ಡ್ ಒಪ್ಪಂದಗಳು, ವಿದೇಶಿ ವಿನಮಯ ಉತ್ಪನ್ನಗಳು ಮತ್ತು ಸೇವೆಗಳಂತಹ ವೈವಿಧ್ಯಮಯ ಶ್ರೇಣಿಯ ಪ್ರಾಡಕ್ಟ್‌ಗಳನ್ನು ಒದಗಿಸುತ್ತಿದೆ.

ಖಜಾನೆ ನಿರ್ವಹಣೆಯಿಂದ ಬ್ಯಾಂಕು ಒಟ್ಟಾರೆ 1625.94 ಕೋಟಿ ರೂ. ಆದಾಯ ಗಳಿಸಿದ್ದು, ಲಾಭಕ್ಕೆ 574.20 ಕೋಟಿ ರೂ ಕೊಡುಗೆ ನೀಡಿದೆ (ತೆರಿಗೆ ಮತ್ತು ಹಂಚಿಕೆ ಮಾಡಲಾಗದ ಖರ್ಚಿನ ಪೂರ್ವದಲ್ಲಿನ).

### ಇತರ ಬ್ಯಾಂಕಿಂಗ್ ಚಟುವಟಿಕೆಗಳು:

ಉಳಿತಾಯ ಖಾತೆಗಳು, ಚಾಲ್ತಿ ಖಾತೆಗಳು, ಅಂತಾರಾಷ್ಟ್ರೀಯ ಡೆಬಿಟ್ ಕಾರ್ಡ್, ಕೋ-ಬ್ರಾಂಡೆಡ್ ಕ್ರೆಡಿಟ್ ಕಾರ್ಡ್, ಆನ್‌ಲೈನ್ ಟ್ರೇಡಿಂಗ್, ಎಎಸ್ ಬಿಎ ಸೌಲಭ್ಯ, ಲಾಕರ್ ಸೌಲಭ್ಯ, ಮೊಬೈಲ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳು, ಪಾವತಿ ಮತ್ತು ರವಾನೆ (ರೆಮಿಟೆನ್ಸ್) ಇತ್ಯಾದಿ ಸೇವೆಗಳನ್ನು ಒದಗಿಸುತ್ತಿದೆ. ಈ ಸೇವೆಗಳನ್ನು ಭೌತಿಕ ಮತ್ತು ಇ- ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಇ-ಲಾಬಿಗಳು ಇತ್ಯಾದಿ ಡಿಜಿಟಲ್ ಚಾನೆಲ್‌ಗಳ ಮೂಲಕ ಒದಗಿಸಲಾಗುತ್ತಿದೆ.

ಈ ವಿಭಾಗದಲ್ಲಿ 473.51 ಕೋಟಿ ರೂ ಆದಾಯ ಗಳಿಸಿದ್ದು, ಅದರಲ್ಲಿ 118.99 ಕೋಟಿ ರೂ.ಗಳ ಲಾಭವನ್ನು (ತೆರಿಗೆ ಮತ್ತು ಹಂಚಿಕೆ ಮಾಡಲಾಗದ ಖರ್ಚಿನ ಪೂರ್ವದಲ್ಲಿನ) ಗಳಿಸಲಾಗಿದೆ.

### ಪಾರಾಬ್ಯಾಂಕಿಂಗ್ ಸೇವೆಗಳು:

ವೈವಿಧ್ಯಮಯ ಹಣಕಾಸು ಉತ್ಪನ್ನಗಳು ಮತ್ತು ಸೇವೆಗಳನ್ನು ಹಾಗೂ ಗ್ರಾಹಕರಿಗೆ ಮೌಲ್ಯವರ್ಧಿತ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ನಿಮ್ಮ ಬ್ಯಾಂಕ್ ಪ್ಯಾರಾಬ್ಯಾಂಕಿಂಗ್ ಸೌಲಭ್ಯಗಳಾದ ಲೈಫ್ ಇನ್ಶೂರೆನ್ಸ್, ಜನರಲ್ ಇನ್ಶೂರೆನ್ಸ್, ಆರೋಗ್ಯ ವಿಮೆ, ಮ್ಯೂಚ್ಯುವಲ್ ಫಂಡ್ ಇತ್ಯಾದಿಗಳನ್ನು ಕೂಡ ಮುಖಾಂತರ ಒದಗಿಸುತ್ತಿದೆ.

## ಬ್ಯಾಂಕಾಶ್ಯುರೆನ್ಸ್ ಸೇವೆಗಳು:

### ಲೈಫ್ ಇನ್ಶೂರೆನ್ಸ್:

ನಿಮ್ಮ ಬ್ಯಾಂಕ್ ಪಿಎನ್ ಬಿ ಮೆಟ್‌ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ (PNB Metlife Insurance Co Pvt Ltd) ಜತೆಗೆ ಕಳೆದ 15ಕ್ಕೂ ಹೆಚ್ಚು ವರ್ಷಗಳಿಂದ ಸಹಯೋಗ ಹೊಂದಿದ್ದು, 2017ರಿಂದ ಭಾರತೀಯ ಜೀವ ವಿಮಾ ನಿಗಮದ ಜೊತೆಗೆ ಮತ್ತು ಕಳೆದ ಒಂದು ವರ್ಷದಿಂದ ಭಾರ್ತಿ ಅಕ್ಸಾ ಲೈಫ್ ಇನ್ಶೂರೆನ್ಸ್ ಲಿಮಿಟೆಡ್ ಜತೆಗೂ ಲೈಫ್ ಇನ್ಶೂರೆನ್ಸ್ ಉತ್ಪನ್ನಗಳ ಮಾರಾಟದ ಸಹಯೋಗ ಹೊಂದಿದೆ.

### ಜನರಲ್ ಇನ್ಶೂರೆನ್ಸ್:

ನಿಮ್ಮ ಬ್ಯಾಂಕು ಯುನಿವರ್ಸಲ್ ಸೊಂಪೊ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಜತೆಗೆ ಜಂಟಿ ಸಹೋದ್ಯಮ ಹೊಂದಿದ್ದು, ಬಜಾಜ್ ಅಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಜೊತೆಗೆ ಕೂಡ ಸಹಭಾಗಿತ್ವ ಹೊಂದಿದೆ. ಈ ಮೂಲಕ ಆರೋಗ್ಯ ಮತ್ತು ನಾನ್-ಹೆಲ್ತ್ (ಆರೋಗ್ಯೇತರ) ವಿಮಾ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುತ್ತಿದೆ.

2019-2020ನೇ ವಿತ್ತೀಯವರ್ಷದಲ್ಲಿ ಬ್ಯಾಂಕು ನಾನ್-ಲೈಫ್ ಇನ್ಶೂರೆನ್ಸ್ ವಹಿವಾಟಿನಿಂದ 11.19 ಕೋಟಿ ರೂ.ಗಳ ಆದಾಯಗಳಿಸಿದೆ. (2018-19ರಲ್ಲಿ -9.75 ಕೋಟಿ ರೂ.)

ಸಾಮಾಜಿಕ ಭದ್ರತಾ ಯೋಜನೆಗಳು (ಪಿಎಂಜೆಜೆಬಿವೈ ಮತ್ತು ಪಿಎಂಎಸ್ಬಿವೈ) ಹಾಗೂ ಪಿಂಚಣಿ (NPS) ಸೌಲಭ್ಯಗಳು ಬ್ಯಾಂಕಿನ ಎಲ್ಲ ಶಾಖೆಗಳಲ್ಲಿ ಲಭ್ಯವಿರುತ್ತವೆ. ಬ್ಯಾಂಕಿನ '**ಕೆಬಿಎಲ್ ಸುರಕ್ಷಾ'**ಎಂಬ ಯೋಜನೆಯಡಿಯಲ್ಲಿ ಪರ್ಸನಲ್ ಆಕ್ಸಿಡೆಂಟ್ ಇನ್ಶೂರೆನ್ಸ್ (ವೈಯಕ್ತಿಕ ಅಪಘಾತ ವಿಮೆ ಯೋಜನೆ) ಉತ್ಪನ್ನವನ್ನು ಗ್ರಾಹಕರಿಗೆ ನೀಡುತ್ತಿದೆ. ಬ್ಯಾಂಕಿನ ಎಲ್ಲ ಎಸ್‌ಬಿ ಖಾತೆ (ಉಳಿತಾಯ) ಗ್ರಾಹಕರೂ (18ರಿಂದ 70 ವರ್ಷ ವಯೋಮಾನದ ಒಳಗಿನವರು) ವಾರ್ಷಿಕ ಅತಿ ಕಡಿಮೆ ಪ್ರೀಮಿಯಂ ಪಾವತಿಸಿ ಈ ಯೋಜನೆಗೆ ಚಂದಾದಾರರಾಗಬಹುದು. ಇದಕ್ಕೆ ಆಟೋ ರಿನ್ಯೂಯಲ್ ಸೌಲಭ್ಯವೂ ಇದೆ. ಈ ಸಾಮಾಜಿಕ ಭದ್ರತಾ ಯೋಜನೆಯು ಬಹಳ ಜನಪ್ರಿಯತೆಯನ್ನು ಗಳಿಸಿದೆ.

### ಮ್ಯೂಚ್ಯುವಲ್ ಫಂಡ್ ಯುನಿಟ್‌ಗಳ ವಿತರಣೆ:

ನಿಮ್ಮ ಬ್ಯಾಂಕು ಹಲವಾರು ಪ್ರಮುಖ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ (AMC)ಗಳ ಮ್ಯೂಚ್ಯುವಲ್ ಫಂಡ್ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡುತ್ತದೆ. ಮ್ಯೂಚ್ಯುವಲ್ ಫಂಡ್‌ಗಳ ಆನ್‌ಲೈನ್ ಮಾರಾಟಕ್ಕಾಗಿ ನಿಮ್ಮ ಬ್ಯಾಂಕು ಇತ್ತೀಚೆಗೆ ಫಿನ್‌ವಿಝಾರ್ಡ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪನಿ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಅವರ ತಂತ್ರಜ್ಞಾನ ಆಧರಿತ ಫಿಸ್ಡಮ್ (FISDOM) ಮೊಬೈಲ್ ಅಪ್ಲಿಕೇಶನ್ ಮೂಲಕ ಈ ಪ್ರಾಡಕ್ಟ್‌ಗಳನ್ನು ಗ್ರಾಹಕರು ಸುಲಭ ಮತ್ತು ಆಧುನಿಕ ರೀತಿಯಲ್ಲಿ ಪಡೆಯಬಹುದಾಗಿದೆ.

### ಪಾಯಿಂಟ್ ಆಫ್ ಸೇಲ್ಸ್ (POS) ನೆಟ್‌ವರ್ಕ್:

ವ್ಯಾಪಾರಿಗಳಿಗೆ ತಮ್ಮ ಪಾವತಿಗಳನ್ನು ಸ್ವಯಂಚಾಲಿತವಾಗಿ ಸಂಗ್ರಹಿಸಲು ಬ್ಯಾಂಕು ಪಿಓಎಸ್ (ಸ್ವೈಪಿಂಗ್ ಯಂತ್ರ) ಸೇವೆಗಳನ್ನು ಒದಗಿಸುತ್ತಿದೆ. ಇನ್ನಷ್ಟು ಪರಿಣಾಮಕಾರಿ ಪಾವತಿ ಪರಿಹಾರಗಳನ್ನು ಗ್ರಾಹಕರಿಗೆ ಪೂರೈಸಲು ಬ್ಯಾಂಕು 'ಎಂಸ್ವೈಪ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್' ಮತ್ತು 'ಬಿಜಿಲಿಪೇ' ಜತೆ ಸಹಯೋಗ ಮಾಡಿಕೊಂಡಿದೆ.

ನಿಮ್ಮ ಬ್ಯಾಂಕು ದೇಶಾದ್ಯಂತ 11,900ಕ್ಕೂ ಅಧಿಕ ಪಿಓಎಸ್ ಟರ್ಮಿನಲ್‌ಗಳ ಬೃಹತ್ ಜಾಲದ ಮೂಲಕ 'Cash@POS' ಸೌಲಭ್ಯವನ್ನು ಒದಗಿಸುತ್ತಿದೆ. ಯಾವುದೇ ಇತರ ಬ್ಯಾಂಕಿನ ಗ್ರಾಹಕರು ತಮ್ಮ ಡೆಬಿಟ್ ಕಾರ್ಡ್/ ಓಪನ್ ಸಿಸ್ಟಂ ಪ್ರಿಪೇಯ್ಡ್ ಕಾರ್ಡ್ (ಭಾರತದಲ್ಲಿರುವ ಬ್ಯಾಂಕುಗಳು ವಿತರಿಸಿದ ಕಾರ್ಡ್‌ಗಳನ್ನು ಬಳಸಿ) ಪಿಓಎಸ್ ಮೂಲಕ ನಗದು ಹಣ ಪಡೆಯಬಹುದಾಗಿದೆ.

## ಗ್ರಾಹಕ ಸೇವೆಗಳು:

ನಿಮ್ಮ ಬ್ಯಾಂಕು ಅತ್ಯುತ್ತಮ ಗ್ರಾಹಕ ಸೇವೆಗಳನ್ನು ಒದಗಿಸುವ ಮೂಲಕ ಇತರ ಬ್ಯಾಂಕುಗಳಿಗಿಂತ ಸ್ಪರ್ಧಾತ್ಮಕವಾಗಿ ಉತ್ಕೃಷ್ಟ ಗುಣಮಟ್ಟವನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದೆ. ಇದರಿಂದಾಗಿ ಬ್ಯಾಂಕಿಂಗ್ ಸೇವೆಗಳನ್ನು ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾಗಿ ಒದಗಿಸಲು ಹೊಸ ವಿಧಾನಗಳನ್ನು ಶೋಧಿಸಬೇಕಾಗುತ್ತದೆ. ಸೇವೆಗಳ ಸಮರ್ಪಕ ಪೂರೈಕೆ ಮತ್ತು ಪರಾಮರ್ಶೆ ವ್ಯವಸ್ಥೆಯ ಮೂಲಕ ದೂರುಗಳನ್ನು ಅತಿ ಕನಿಷ್ಠ ಮಟ್ಟಕ್ಕೆ ಇಳಿಸುವುದು ಬ್ಯಾಂಕಿನ ಗುರಿಯಾಗಿದೆ.

ಆರ್‌ಬಿಐ ಮತ್ತು ಐಬಿಎ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ವ್ಯವಸ್ಥೆ ಮತ್ತು ವಿಧಾನಗಳನ್ನು ಹೊಂದಿಸಿಕೊಳ್ಳಲು ಬ್ಯಾಂಕು ಸಕ್ರಿಯವಾಗಿ ಶ್ರಮಿಸುತ್ತಿದ್ದು, ಗ್ರಾಹಕರ ದೂರುಗಳ ಪರಿಹಾರಕ್ಕಾಗಿ ಪರಿಣಾಮಕಾರಿ ಕಾರ್ಯವಿಧಾನದೊಂದಿಗೆ ಆಂತರಿಕ ಬ್ಯಾಂಕಿಂಗ್ ಓಂಬುಡ್ಸ್ಮನ್ ವ್ಯವಸ್ಥೆಯನ್ನೂ ಕಾರ್ಯಗತಗೊಳಿಸಿದೆ.

## ಪ್ರಶಸ್ತಿಗಳು ಮತ್ತು ಪುರಸ್ಕಾರಗಳು:

ವರದಿ ವರ್ಷದಲ್ಲಿ ನಿಮ್ಮ ಬ್ಯಾಂಕು ಈ ಕೆಳಗೆ ಸೂಚಿಸಿದ ಹಲವಾರು ಪ್ರಶಸ್ತಿಗಳು ಮತ್ತು ಪುರಸ್ಕಾರಗಳನ್ನು ಪಡೆದುಕೊಂಡಿದೆ. ಇವುಗಳು ತಾಂತ್ರಿಕ ಆವಿಷ್ಕಾರಗಳು, ಸಾಮಾಜಿಕ ಬ್ಯಾಂಕಿಂಗ್, ರಫ್ತು ನಿರ್ವಹಣೆ, ಇತ್ಯಾದಿಗಳಿಗೆ ದೊರೆತ ಪುರಸ್ಕಾರಗಳಾಗಿವೆ.

- 'ಐಬಿಎ- ಬ್ಯಾಂಕಿಂಗ್ ಟೆಕ್ನಾಲಜಿ ಅವಾರ್ಡ್ಸ್ 2020' (ಸಣ್ಣ ಬ್ಯಾಂಕುಗಳ ವಿಭಾಗದಲ್ಲಿ - 3 ವರ್ಗಗಳಲ್ಲಿ).
    - ❖ ಅತ್ಯುತ್ತಮ ಡಿಜಿಟಲ್ ವಿತ್ತೀಯ ಸೇರ್ಪಡೆ (ಬೆಸ್ಟ್ ಡಿಜಿಟಲ್ ಫೈನಾನ್ಷಿಯಲ್ ಇನ್‌ಕ್ಲೂಷನ್)
    - ❖ 'ಬೆಸ್ಟ್ ಐಟಿ ರಿಸ್ಕ್ ಮ್ಯಾನೇಜ್‌ಮೆಂಟ್ & ಸೈಬರ್ ಸೆಕ್ಯುರಿಟಿ ಇನಿಷಿಯೇಟಿವ್ಸ್' -ಜಂಟಿ ಪ್ರಶಸ್ತಿ
    - ❖ ವರ್ಷದ ಟೆಕ್ನಾಲಜಿ ಬ್ಯಾಂಕ್ ಸ್ಪರ್ಧೆಯಲ್ಲಿ ರನ್ನರ್ ಅಪ್ ಪ್ರಶಸ್ತಿ
- ಅಸೋಚಾಮ್‌ನ 7ನೇ ರಾಷ್ಟ್ರೀಯ ಎಂಎಸ್ಎಂಇ ಎಕ್ಸಲೆನ್ಸ್ ಅವಾರ್ಡ್ಸ್- ಖಾಸಗಿ ಬ್ಯಾಂಕುಗಳ ವಿಭಾಗದಲ್ಲಿ,
- ಕೇರಳದ ಬ್ಯಾಂಕರ್ಸ್ ಕ್ಲಬ್‌ನ ರಾಜ್ಯ ವೇದಿಕೆ ಕೊಡಮಾಡಿರುವ 'ಮೊದಲ ತಲೆಮಾರಿನ ಖಾಸಗಿ ವಲಯದ ಬ್ಯಾಂಕ್'ಗಳ ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ 2018-19ನೇ ಸಾಲಿಗೆ ಮೂರನೆಯ ''ಬೆಸ್ಟ್ ಪರ್‌ಫಾರ್ಮಡ್ ಬ್ಯಾಂಕ್' ಪ್ರಶಸ್ತಿ.
- ಎಬಿಪಿ ನ್ಯೂಸ್ ಸ್ಥಾಪಿಸಿದ ಬಿಎಫ್ಎಸ್ಐ ಪ್ರಶಸ್ತಿ- 2 ವಿಭಾಗಗಳಲ್ಲಿ. (ಬ್ಯಾಂಕಿಂಗ್ ಫೈನಾನ್ಷಿಯಲ್ ಸರ್ವಿಸಸ್ ಮತ್ತು ಇನ್ಶೂರೆನ್ಸ್ ನ ಉತ್ಕೃಷ್ಟ ಸೇವೆಗಳಿಗಾಗಿ).
    - ○ ಖಾಸಗಿ ವಲಯದ ಅತ್ಯುತ್ತಮ ಬ್ಯಾಂಕ್.
    - ○ ಬ್ಯಾಂಕಿಂಗ್ ವಲಯದಲ್ಲಿ ಆವಿಷ್ಕಾರ ಮತ್ತು ನವೀನ ತಂತ್ರಜ್ಞಾನ.
- ಇಟಿ ಬಿಸಿನೆಸ್ ಎಕ್ಸಲೆನ್ಸ್ ಅಡಾರ್ಡ್ 2019. (ಉತ್ಕೃಷ್ಟ ಬ್ಯಾಂಕಿಂಗ್ ಸೇವಾ ವಿಭಾಗದಲ್ಲಿ).
- ಬ್ಯಾಂಕ್ ಆಫ್ ನ್ಯೂಯಾರ್ಕ್ ಕೊಡಮಾಡಿರುವ ಎಸ್‌ಟಿಪಿ ಅವಾರ್ಡ್ 2019: ಸುಲಲಿತ ಪಾವತಿ ಮತ್ತು ನೇರ ದರ ವ್ಯವಸ್ಥೆಯಲ್ಲಿ ಬ್ಯಾಂಕಿನ ಅತ್ಯುತ್ತಮ ನಿರ್ವಹಣೆಗಾಗಿ.
- ಮುಂಬಯಿಯ ಬಿಸಿನೆಸ್ ಟೆಲಿವಿಷನ್ ಇಂಡಿಯಾ ನೀಡಿರುವ ಬ್ಯಾಂಕಿನ ಆಂತರಿಕ ಮ್ಯಾಗಜಿನ್ 'ಅಭ್ಯುದಯ'ಕ್ಕೆ ಅತ್ಯುತ್ತಮ ಇನ್‌ಹೌಸ್ ಮ್ಯಾಗಜಿನ್ ಎಂಬ ರಾಷ್ಟ್ರೀಯ ಪ್ರಶಸ್ತಿ.
- 2018-19ರ ಸಾಲಿನಲ್ಲಿ ಎಪಿಬಿ ಗುರಿಯಲ್ಲಿ 'ಶೇ 100ರ ಫಲಿತಾಂಶ' ಸಾಧನೆಗಾಗಿ ಪಿಎಫ್‌ಆರ್‌ಡಿಎ 01-07-2019ರಂದು ಸ್ಥಾಪಿಸಿದ ಅಟಲ್ ಪೆನ್ಷನ್ ಯೋಜನೆ 'ಗೇಮ್ ಚೇಂಜರ್ ಅವಾರ್ಡ್.

## ವಿತ್ತೀಯ ಸೇರ್ಪಡೆ

ವಿತ್ತೀಯ ಸೇರ್ಪಡೆ ಯೋಜನೆಯಡಿಯಲ್ಲಿ, ಬ್ಯಾಂಕು ಕೇವಲ ಖಾತೆಗಳನ್ನು ತೆರೆಯುವುದಷ್ಟಕ್ಕೇ ಸೀಮಿತಗೊಳಿಸದೆ, 'ಜನರ ಜತೆ ಸಂಪರ್ಕ ಸಾಧಿಸುವ' ಗುರಿ ಹೊಂದಿದೆ. ಗ್ರಾಮೀಣ ಜನರ ಸಣ್ಣ ಸಾಲದ ಅವಶ್ಯಕತೆಗಳನ್ನು ಪೂರೈಸುವುದು, ಅವರಿಗೆ ಪಾವತಿ ವ್ಯವಸ್ಥೆಯ ಎಲ್ಲ ಸೌಲಭ್ಯಗಳನ್ನೂ ಒದಗಿಸುವುದು, ಹಣ ರವಾನೆ ಸೌಲಭ್ಯ ಮತ್ತು ಜೀವ ಹಾಗೂ ಆರೋಗ್ಯ ವಿಮೆ ಒದಗಿಸುವುದು ಕೂಡ ಇದರಲ್ಲಿ ಸೇರಿದೆ.

ನಿಮ್ಮ ಬ್ಯಾಂಕು 386 ಶಾಖೆಗಳನ್ನು ಗ್ರಾಮೀಣ ಮತ್ತು ಸೆಮಿ ಅರ್ಬನ್ ಪ್ರದೇಶಗಳಲ್ಲಿಹೊಂದಿದ್ದು (35 ಅತಿ ಸಣ್ಣ ಶಾಖೆಗಳ ಸಹಿತ) ಗ್ರಾಮೀಣ ಗ್ರಾಹಕರಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಶಾಖೆಗಳು ಹಣಕಾಸಿನ ಸಾಕ್ಷರತಾ ಕೇಂದ್ರಗಳಾಗಿಯೂ (ಎಫ್‌ಎಲ್‌ಸಿ) ಕೆಲಸ ಮಾಡುತ್ತಿದ್ದು, ಗ್ರಾಮೀಣ ಜನತೆಗೆ ಹಣಕಾಸಿನ ಬಗ್ಗೆ ಅರಿವು ಮೂಡಿಸುತ್ತಿದೆ. ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ (ಪಿಎಂಜೆಡಿವೈ) ಅನುಸಾರ ವಿತ್ತೀಯ ಸೇರ್ಪಡೆ ಚಟುವಟಿಕೆಗಳಿಗೆ ಬ್ಯಾಂಕು ಪರಿಷ್ಕೃತ ಕಾರ್ಯತಂತ್ರ ಹಾಗೂ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ. ಭಾರತ ಸರಕಾರದ ನೇರ ನಗದು ವರ್ಗಾವಣೆ (ಡಿಬಿಟಿ) ಯೋಜನೆಯಲ್ಲಿ ನಿಮ್ಮ ಬ್ಯಾಂಕು ಸಕ್ರಿಯವಾಗಿ ಭಾಗಿಯಾಗಿದೆ. ಇದರಡಿಯಲ್ಲಿ ಎಲ್‌ಪಿಜಿ ಸಬ್ಸಿಡಿ ಸಹಿತ ಹಲವು ಸೌಲಭ್ಯಗಳನ್ನು ಗ್ರಾಹಕರ ಆಧಾರ್ ಜೋಡಿಸಿದ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ.

ವಿತ್ತೀಯ ಸೇರ್ಪಡೆ ಯೋಜನೆ ಅನುಸಾರ, ಬ್ಯಾಂಕು ಈ ಕೆಳಗಿನ ಸೇವೆಗಳನ್ನು ಪೂರೈಸುತ್ತಿದೆ:

1. ಬಿಸಿನೆಸ್ ಕರೆಸ್ಪಾಂಡೆಂಟ್ ಸೇವೆಗಳು (BC): ಈ ಸೇವೆಗಳನ್ನು ಒದಗಿಸುವುದಕ್ಕಾಗಿ ಬ್ಯಾಂಕು 'ಸಬ್-ಕೆ ಇಂಪ್ಯಾಕ್ಟ್ ಸೊಲ್ಯೂಷನ್ಸ್ ಲಿಮಿಟೆಡ್' ಜತೆಗೆ ಒಪ್ಪಂದ ಮಾಡಿಕೊಂಡಿದೆ. 2020ರ ಮಾರ್ಚ್ 31ರಂದು ಬ್ಯಾಂಕು ಕರ್ನಾಟಕ, ಆಂಧ್ರಪ್ರದೇಶ ಮತ್ತು ಛತ್ತೀಸ್‌ಗಢ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ 119 ಬಿಸಿನೆಸ್ ಕರೆಸ್ಪಾಂಡೆಂಟ್‌ಗಳನ್ನು ಹೊಂದಿತ್ತು.

2. ಆಧಾರ್ ಸಕ್ರಿಯಗೊಳಿಸಿದ ಪಾವತಿ ವ್ಯವಸ್ಥೆ (ಎಇಪಿಎಸ್): ಭಾರತದ ರಾಷ್ಟ್ರೀಯ ಪಾವತಿಗಳ ನಿಗಮ (ಎನ್‌ಸಿಪಿಐ) ಪರಿಚಯಿಸಿದ ಎಇಪಿಎಸ್ ಟ್ರಾನ್ಸಾಕ್ಷನ್ ಸೇವೆಗಳನ್ನು ನಿಮ್ಮ ಬ್ಯಾಂಕು ಎಲ್ಲ ಬಿಸಿನೆಸ್ ಕರೆಸ್ಪಾಂಡೆಂಟ್ ಸ್ಥಳಗಳಲ್ಲಿ ಜಾರಿಗೊಳಿಸಿದೆ. ಆಧಾರ್ ಜೋಡಿಸಿದ ಉಳಿತಾಯ ಖಾತೆ ಹೊಂದಿದ ಗ್ರಾಹಕರು ಬಿ.ಸಿ ಪಾಯಿಂಟ್‌ಗಳ ಮೂಲಕ ಹಣದ ವ್ಯವಹಾರ ಮಾಡಬಹುದು.

3. ಹಣಕಾಸು ಸಾಕ್ಷರತೆ ಮತ್ತು ಕ್ರೆಡಿಟ್ ಸಲಹಾ ಕೇಂದ್ರಗಳು (ಎಫ್‌ಎಲ್‌ಸಿಸಿ): ನಿಮ್ಮ ಬ್ಯಾಂಕು ಮಣಿಪಾಲದ ಮೆ. ಜ್ಞಾನಜ್ಯೋತಿ ಫೈನಾನ್ಷಿಯಲ್ ಲಿಟರಸಿ ಅಂಡ್ ಕ್ರೆಡಿಟ್ ಕೌನ್ಸೆಲಿಂಗ್ ಟ್ರಸ್ಟ್ ಜತೆ ಜಂಟಿ ಸಹಭಾಗಿತ್ವದೊಂದಿಗೆ ಕರ್ನಾಟಕದ ಬಿ.ಸಿ ರೋಡ್, ತಿಪಟೂರು, ಹಾನಗಲ್, ಕುಂದಗೋಳ ಮತ್ತು ಆಲೂರಿನಲ್ಲಿ 5 ಎಫ್‌ಎಲ್‌ಸಿಗಳನ್ನು ಪ್ರಾಯೋಜಿಸಿದೆ. ವರದಿ ವರ್ಷದಲ್ಲಿ ಎಫ್‌ಎಲ್‌ಸಿಗಳು 3012 ಹಣಕಾಸು ಸಾಕ್ಷರತಾ ಅಭಿಯಾನಗಳನ್ನು ನಡೆಸಿವೆ. ಅವುಗಳಲ್ಲಿ ಒಟ್ಟು 1,20,320 ಮಂದಿ ಭಾಗವಹಿಸಿದ್ದಾರೆ. ಆರ್‌ಬಿಐ ಮಾರ್ಗಸೂಚಿಗಳ ಅನುಸಾರ, ಬ್ಯಾಂಕಿನ ಎಲ್ಲ ಗ್ರಾಮೀಣ ಶಾಖೆಗಳು ಕೂಡ ಹಣಕಾಸು ಸಾಕ್ಷರತೆ ಶಿಬಿರಗಳನ್ನು ನಡೆಸುತ್ತಿವೆ.

4. ಸಾಮಾಜಿಕ ಭದ್ರತಾ ಯೋಜನೆಗಳು: ಪ್ರಧಾನ ಮಂತ್ರಿಗಳ ಜೀವನ್ ಜ್ಯೋತಿ ವಿಮಾ ಯೋಜನೆ (ಪಿಎಂಜೆಜೆಬಿವೈ), ಪ್ರಧಾನ ಮಂತ್ರಿಗಳ ಸುರಕ್ಷಾ ಬಿಮಾ ಯೋಜನಾ (ಪಿಎಂಎಸ್‌ಬಿವೈ) ಮತ್ತು ಅಟಲ್ ಪೆನ್ಷನ್ ಯೋಜನಾ (ಎಪಿವೈ) ಗಳನ್ನು 2015ರ ಜೂನ್ 1ರಂದು ಗೌರವಾನ್ವಿತ ಪ್ರಧಾನ ಮಂತ್ರಿಗಳು ಜಾರಿಗೊಳಿಸಿದರು. ನಿಮ್ಮ ಬ್ಯಾಂಕಿನ ಎಲ್ಲ ಶಾಖೆಗಳೂ ದೇಶಾದ್ಯಂತ ತನ್ನ ಗ್ರಾಹಕರಿಗೆ ಈ ಯೋಜನೆಗಳ ಸೇವೆಯನ್ನು ಕ್ರಿಯಾಶೀಲವಾಗಿ ನೀಡುತ್ತಿವೆ.

5. ಪ್ರಧಾನ ಮಂತ್ರಿಗಳ ಜನ್‌ಧನ್ ಯೋಜನೆ (ಪಿಎಂಜೆಡಿವೈ): ದೇಶಾದ್ಯಂತ ಎಲ್ಲ ಶಾಖೆಗಳೂ ಪಿಎಂಜೆಡಿವೈ ಖಾತೆಗಳನ್ನು ತೆರೆಯುತ್ತಿದ್ದು, ರುಪೇ ಡೆಬಿಟ್ ಕಾರ್ಡ್‌ಗಳನ್ನು ನೀಡುತ್ತಿವೆ. 15-08-2014ರಿಂದೀಚೆಗೆ ಒಟ್ಟು 2,39,573 ಪಿಎಂಜೆಡಿವೈ ಖಾತೆಗಳನ್ನು ತೆರೆಯಲಾಗಿದ್ದು, ಒಟ್ಟು 64.59 ಕೋಟಿ ರೂ. ಬ್ಯಾಲೆನ್ಸ್ ಹೊಂದಿವೆ. ಇದುವರೆಗೆ ಒಟ್ಟಾರೆ 77,886 ರುಪೇ ಕಾರ್ಡ್‌ಗಳನ್ನು ವಿತರಿಸಲಾಗಿದೆ.

## ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ:

ಬ್ಯಾಂಕಿನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಲ್ಲಿ (ಸಿಎಸ್‌ಆರ್) ಆರೋಗ್ಯ ಪಾಲನೆ, ಶಿಕ್ಷಣ/ ಜೀವನ ಸುಧಾರಣೆ, ಮಹಿಳೆಯರು ಮತ್ತು ಸಾಮಾಜಿಕ/ಆರ್ಥಿಕ ದುರ್ಬಲರ ಸಬಲೀಕರಣ, ಪಾರಿಸರಿಕ ಸುಸ್ಥಿರತೆ/ ಹಸಿರು ಉಪಕ್ರಮಗಳು, ಪರಂಪರೆ/ ಸಂಸ್ಕೃತಿಯ ರಕ್ಷಣೆ, ಕ್ರೀಡೆಗಳಿಗೆ ಉತ್ತೇಜನ, ಗ್ರಾಮೀಣ ಅಭಿವೃದ್ಧಿ, ಸ್ವಚ್ಛ ಭಾರತ್ ಇತ್ಯಾದಿ ಸೇರಿವೆ. ಸಮಾಜದ ಒಟ್ಟಾರೆ ಅಭಿವೃದ್ಧಿಗಾಗಿ ಈ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಮುಂದುವರಿದು, ನಗರ-ಗ್ರಾಮೀಣ ಅಸಮತೋಲನವನ್ನು ಕಡಿಮೆ ಮಾಡಲು ನಿಮ್ಮ ಬ್ಯಾಂಕು ಗ್ರಾಮೀಣ ಪ್ರದೇಶಗಳ ಕಡೆಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಹಣಕಾಸು ಸಾಕ್ಷರತೆ ಮತ್ತು ಬ್ಯಾಂಕುಗಳೇ ಇಲ್ಲದ ಗ್ರಾಮೀಣ ಪ್ರದೇಶಗಳಲ್ಲೂ ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸುತ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ, ಕೈಗೆಟಕುವ ವೆಚ್ಚದಲ್ಲಿ ಸೇವೆಗಳನ್ನು ಪೂರೈಸುತ್ತಿದೆ.

2013ರ ಕಂಪನಿಗಳ ಕಾಯ್ದೆ ಮತ್ತು ನಿಯಮಗಳು ಅನುಸಾರ, ಬ್ಯಾಂಕ್ 'ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಕಮಿಟಿ' ಎಂಬ ನಿರ್ದೇಶಕರ ಸಮಿತಿಯನ್ನು ರಚಿಸಿದೆ. ಅಲ್ಲದೆ ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ (ಸಿಎಸ್‌ಆರ್) ನೀತಿಯನ್ನೂ ರೂಪಿಸಿದೆ. ಅದರ ಅಡಿಯಲ್ಲಿ ಸಮಾಜಕ್ಕೆ ಲಾಭವಾಗುವ ಹಲವಾರು ಯೋಜನೆಗಳು/ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಸಿಎಸ್‌ಆರ್ ನೀತಿಯ ವಿಷಯಗಳು ಮತ್ತು 2019-20ರ ಸಾಲಿನಲ್ಲಿ ಈ ಯೋಜನೆಯಡಿ ಕೈಗೆತ್ತಿಕೊಂಡ ಕಾರ್ಯಗಳ ವಿಸ್ತೃತ ವರದಿಯನ್ನು ಅನುಬಂಧ-5ರಲ್ಲಿ ನೀಡಲಾಗಿದೆ. 2014ರ ಕಂಪನಿಗಳ (ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಪಾಲಿಸಿ) ನಿಯಮ 8ರ ಅನುಸಾರ ಈ ವಿವರಗಳನ್ನು ನೀಡಲಾಗುತ್ತಿದೆ. ಈ ವರೆಗೆ ಬ್ಯಾಂಕು ಸುಮಾರು 1171 ಯೋಜನೆಗಳಿಗೆ 40.80 ಕೋಟಿ ರೂಪಾಯಿಯಷ್ಟು ಆರ್ಥಿಕ ನೆರವನ್ನು ನೀಡಿದ್ದು, ಈ ಯೋಜನೆಗಳು ಸಮಾಜಕ್ಕೆ ಧನಾತ್ಮಕ ಪರಿಣಾಮವನ್ನು ಬೀರುವಲ್ಲಿ ಯಶಸ್ವಿಯಾಗಿವೆ.

## ಮಾನವ ಸಂಪನ್ಮೂಲ:

ಜಗತ್ತಿನಲ್ಲಿ ಹೆಚ್ಚುತ್ತಿರುವ ಡಿಜಿಟಲೀಕರಣದ ಪ್ರಭಾವಕ್ಕೆ ಬ್ಯಾಂಕಿಂಗ್ ಉದ್ಯಮವೂ ಹೊರತಾಗಿಲ್ಲ. ಇದರಿಂದಾಗಿ ಹಲವು ಬದಲಾವಣೆಗಳು/ನೂತನ ಸವಾಲುಗಳು ಎದುರಾಗಿವೆ. ಸವಾಲುಗಳನ್ನು ಎದುರಿಸಿ ಮುನ್ನಡೆಯಬೇಕಾದರೆ ಅದರ ಮಾನವ ಸಂಪನ್ಮೂಲದ ಗುಣಮಟ್ಟ ಅತಿಮುಖ್ಯವಾದ ಪಾತ್ರ ವಹಿಸುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಉದ್ಯೋಗಿಗಳ ಕಾರ್ಯಕ್ಷಮತೆಯನ್ನು ವ್ಯವಸ್ಥಿತ ರೀತಿಯಲ್ಲಿ ಬೆಳೆಸಬೇಕಾಗುತ್ತದೆ. ಅದೇ ರೀತಿ ನಿಮ್ಮ ಬ್ಯಾಂಕು ಉದ್ಯೋಗಿಗಳ ತೃಪ್ತಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳಿಗೆ ಗರಿಷ್ಠ ಆದ್ಯತೆ ನೀಡುತ್ತಿದೆ. ಮಾನವ ಸಂಪನ್ಮೂಲ ಇಲಾಖೆಯ ಮೇಲ್ವಿಚಾರಣೆಗೆ ಬ್ಯಾಂಕ್ ಮುಖ್ಯ ಕಲಿಕಾ ಅಧಿಕಾರಿಯನ್ನು ಸಹ ಹೊಂದಿದೆ. ಉದ್ಯೋಗಿಗಳ ಕಾರ್ಯಕ್ಷಮತೆ ನಿರ್ವಹಣಾ ವ್ಯವಸ್ಥೆ (PMS) ಯನ್ನು ಕಾರ್ಯಗತಗೊಳಿಸುವ ಮೂಲಕ ಬ್ಯಾಂಕ್, ನೌಕರರ ವೃತ್ತಿ ಮತ್ತು ಅಭಿವೃದ್ಧಿ ವ್ಯವಸ್ಥೆ (ECDS)ಯನ್ನು ಪರಿಚಯಿಸಿದೆ.

## ತರಬೇತಿ ಮತ್ತು ಅಭಿವೃದ್ಧಿ:

ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ತರಬೇತಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ತನ್ನ ಸಿಬ್ಬಂದಿಗಳಿಂದ ಸ್ಪರ್ಧಾತ್ಮಕ ಕಾರ್ಯನಿರ್ವಹಣೆ ಮತ್ತು ಉತ್ಕೃಷ್ಟ ಸೇವೆಗಳ ಮೂಲಕ ಮುಂಚೂಣಿಯಲ್ಲಿ ಇರಲು ಬಯಸುವ ಯಾವುದೇ ಸಂಸ್ಥೆಗೆ ಪರಿಣಾಮಕಾರಿ ತರಬೇತಿಯನ್ನು ಒದಗಿಸುವುದು ಪ್ರಮುಖವಾಗಿರುತ್ತದೆ. ಸಿಬ್ಬಂದಿ ಸದಸ್ಯರಿಗೆ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಕೌಶಲ್ಯಗಳಲ್ಲಿ ಪ್ರಭುತ್ವ ಇದ್ದರೆ ಪ್ರಸಕ್ತ ಸವಾಲುಗಳನ್ನು ಸುಲಭವಾಗಿ ಎದುರಿಸಲು ಸಾಧ್ಯ. ಅಲ್ಲದೆ ಹೆಚ್ಚಿನ ಜವಾಬ್ದಾರಿಗಳನ್ನೂ ಹೊರಲು ಸಾಧ್ಯವಾಗುತ್ತದೆ. ಅಂತೆಯೇ, ನಿಮ್ಮ ಬ್ಯಾಂಕು ಉದ್ಯೋಗಿಗಳನ್ನು ವಿವಿಧ ತರಬೇತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ. ಆ ಮೂಲಕ ಅವರ ಕೌಶಲ್ಯಗಳು, ಸ್ಪರ್ಧಾತ್ಮಕತೆಗಳನ್ನು ಬ್ಯಾಂಕಿನ ಬೆಳವಣಿಗೆಗೆ ಕೊಡುಗೆಗಳನ್ನು ನೀಡಲು ಸಾಧ್ಯವಾಗುವಂತೆ ಮೇಲ್ದರ್ಜೆಗೇರಿಸುತ್ತದೆ. ಗುಣಮಟ್ಟದ ನಿರ್ವಹಣಾ ಮಾನದಂಡವಾದ ISO 9001:2015 ಪ್ರಮಾಣ ಪತ್ರ ಪಡೆದಿರುವ ಉತ್ಕೃಷ್ಟ ಸಿಬ್ಬಂದಿ ತರಬೇತಿ ಕಾಲೇಜನ್ನು ಬ್ಯಾಂಕು ಹೊಂದಿದೆ. ಅಧಿಕಾರಿಗಳಿಗೆ ವಿಶೇಷ ತರಬೇತಿಗಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಅಹಮದಾಬಾದ್, ಬಿಕ್ಯೂ ಗ್ಲೋಬಲ್ ಅಕಾಡೆಮಿ ಮುಂಬಯಿ, ಸೆಂಟರ್ ಫಾರ್ ಅಡ್ವಾನ್ಸ್ಡ್ ಫೈನಾನ್ಶಿಯಲ್ ರಿಸರ್ಚ್ ಅಂಡ್ ಲರ್ನಿಂಗ್ ಮುಂಬಯಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್ ಮೆಂಟ್ (ಎನ್‌ಐಬಿಎಂ) ಪುಣೆ, ಸದರ್ನ್ ಇಂಡಿಯಾ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಕಾಲೇಜು (ಎಸ್‌ಐಬಿಎಸ್‌ಟಿಸಿ) ಬೆಂಗಳೂರು, ಐಎಫ್‌ಬಿಐ ಚೆನ್ನೈ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಅಂಡ್ ಫೈನಾನ್ಸ್ (ಐಐಬಿಎಫ್) ಮುಂಬಯಿ, ಕಾಲೇಜ್ ಆಫ್ ಅಗ್ರಿಕಲ್ಚರಲ್ ಬ್ಯಾಂಕಿಂಗ್ (ಸಿಎಬಿ) ಪುಣೆ, ಇನ್‌ಸ್ಟಿಟ್ಯೂಟ್ ಫಾರ್ ಡೆವಲಪ್‌ಮೆಂಟ್ ಅಂಡ್ ರೀಸರ್ಚ್ ಇನ್ ಬ್ಯಾಂಕಿಂಗ್ ಟೆಕ್ನಾಲಜಿ (ಐಡಿಬಿಆರ್‌ಟಿ) ಹೈದರಾಬಾದ್, ಫಾರಿನ್ ಎಕ್ಸ್

ಚೇಂಜ್ ಡೀಲರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ (ಎಫ್ಇಡಿಎಐ) ಮುಂಬಯಿ, ಬ್ಯಾಂಕರ್ಸ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್ (ಬಿಐಆರ್‌ಡಿ) ಮಂಗಳೂರು ಮತ್ತು ಲಖನೌ ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಕಳುಹಿಸಿ ತರಬೇತಿ ಕೊಡಿಸಲಾಗುತ್ತಿದೆ. 2019-20ರ ಸಾಲಿನಲ್ಲಿ 4622 ಸಿಬ್ಬಂದಿಗಳನ್ನು ವಿವಿಧ ತರಬೇತಿ/ ಕಾರ್ಯಾಗಾರಗಳು/ ಸಮ್ಮೇಳನಗಳಿಗೆ ಕಳುಹಿಸಲಾಗಿದೆ. ಒಟ್ಟಾರೆ ಸಿಬ್ಬಂದಿಗಳ ಪೈಕಿ ಶೇ 50.22ರಷ್ಟು ಮಂದಿಗೆ ತರಬೇತಿಗಳನ್ನು ನೀಡಲಾಗಿದೆ. ಜತೆಗೆ ಹೊಸದಾಗಿ ನೇಮಿಸಿಕೊಂಡ ಸಿಬ್ಬಂದಿಗಳಿಗೂ ತರಬೇತಿ ಕೊಡಿಸಲಾಗಿದೆ.

ನಿಮ್ಮ ಬ್ಯಾಂಕು ಇ-ಲರ್ನಿಂಗ್ ಕಲ್ಪನೆಯನ್ನು ಪರಿಚಯಿಸಿದ್ದು, ಸಿಬ್ಬಂದಿ ಸದಸ್ಯರು ಕ್ಲಾಸ್‌ರೂಂ ತರಬೇತಿಗೆ ಹಾಜರಾಗದೇ ತಾವಿದ್ದ ಜಾಗದಿಂದಲೇ ಅಗತ್ಯವಿರುವ ವಿಷಯದ ಕೌಶಲ್ಯಗಳನ್ನು ಕಲಿತುಕೊಳ್ಳುವ ಅವಕಾಶ ಕಲ್ಪಿಸಿದೆ. ಈ ತರಬೇತಿ ಪಠ್ಯಗಳು ಪ್ರತಿಯೊಬ್ಬರಿಗೂ ಸುಲಭವಾಗಿ ಅರ್ಥವಾಗುವಂತೆ ರೂಪಿತವಾಗಿವೆ.

ಸಾಮರ್ಥ್ಯ ವೃದ್ಧಿ ಉಪಕ್ರಮಗಳ ಭಾಗವಾಗಿ ಖಜಾನೆ ನಿರ್ವಹಣೆ, ಆಪತ್ತಿನ ನಿರ್ವಹಣೆ (ರಿಸ್ಕ್ ಮ್ಯಾನೇಜ್‌ಮೆಂಟ್), ಕ್ರೆಡಿಟ್ ಮ್ಯಾನೇಜ್‌ಮೆಂಟ್, ಅಕೌಂಟಿಂಗ್ (ಲೆಕ್ಕಪತ್ರ ನಿರ್ವಹಣೆ), ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಮಾಹಿತಿ ತಂತ್ರಜ್ಞಾನದಂತಹ ವಿಶೇಷ ಕ್ಷೇತ್ರಗಳಲ್ಲಿ ಸಿಬ್ಬಂದಿಗಳನ್ನು ಐಬಿಎ ಗುರುತಿಸಿರುವ ಸಂಸ್ಥೆಗಳಿಂದ ತರಬೇತಿಯನ್ನು ಕೊಡಿಸಲಾಗುತ್ತಿದೆ. ರೊಬೋಟಿಕ್ ಪ್ರೋಸೆಸ್ ಆಟೋಮೇಶನ್ (ಆರ್ ಪಿಎ) ಅನ್ನು ವಿವಿಧ ಮಾನವ ಸಂಪನ್ಮೂಲ ಪ್ರಕ್ರಿಯೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಪ್ರಮುಖ ಹುದ್ದೆಗಳು/ ಕಾರ್ಯಾಚರಣೆ ಕ್ಷೇತ್ರಗಳಲ್ಲಿ ನಿಯೋಜಿತರಾಗಿರುವ ಎಕ್ಸಿಕ್ಯೂಟಿವ್‌ಗಳು/ ಅಧಿಕಾರಿಗಳಿಗೆ ಕಡ್ಡಾಯ ರಜೆಗಳನ್ನು ನೀಡಲಾಗುತ್ತಿದೆ.

ನಿಮ್ಮ ಬ್ಯಾಂಕು ತನ್ನ ಎಲ್ಲ ಸಿಬ್ಬಂದಿಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಗೌರವಿಸುತ್ತದೆ. ಅಲ್ಲದೆ ಅತ್ಯಧಿಕ ಉತ್ಪಾದಕತೆ, ಸ್ಪರ್ಧಾತ್ಮಕತೆ ಮತ್ತು ವಿಶ್ವಾಸಾರ್ಹಯ ಕಾರ್ಯಪಡೆಯನ್ನು ರೂಪಿಸಲು ಅನುಕೂಲವಾಗುವಂತಹ ಅವರ ಸಲಹೆಗಳು, ಚಿಂತನೆಗಳು ಮತ್ತು ಆವಿಷ್ಕಾರಿ ಯೋಚನೆಗಳನ್ನು ಪ್ರೋತ್ಸಾಹಿಸುತ್ತದೆ. ಸಮರ್ಥ ಕಾರ್ಯಪಡೆಯನ್ನು ಅದಕ್ಕೆ ಸೂಕ್ತವಾದ ಹುದ್ದೆಗಳಲ್ಲೇ ನಿಯೋಜಿಸಲಾಗುತ್ತದೆ.

2020ರ ಮಾರ್ಚ್ 31ರಂದು,ಬ್ಯಾಂಕು 8509 ಸಿಬ್ಬಂದಿಗಳನ್ನು ಹೊಂದಿದೆ. ಸಿಬ್ಬಂದಿ-ವಾರು ವಹಿವಾಟು (ಅಂತರ್ ಬ್ಯಾಂಕು ಡಿಪಾಸಿಟ್‌ಗಳು ಹೊರತುಪಡಿಸಿ) 2019 ಮಾರ್ಚ್ 31ರಂದು 14.89 ಕೋಟಿ ರೂ.ಗಳಾಗಿತ್ತು. ಅದು 2020ರ ಮಾರ್ಚ್ 31ರ ವೇಳೆಗೆ 15.12 ಕೋಟಿ ರೂ ಗೆ ಏರಿಕೆಯಾಗಿದೆ. ಅದೇ ರೀತಿ, ಪ್ರತಿ ಶಾಖೆಯ ವಹಿವಾಟು ಕೂಡ 2019ರ ಮಾರ್ಚ್ 31ರಂದು ಇದ್ದ 147.50 ಕೋಟಿ ರೂ ಮೊತ್ತಕ್ಕಿಂತ 2020ರ ಮಾರ್ಚ್ 31ಕ್ಕೆ 151.80 ಕೋಟಿ ರೂಗೆ ಏರಿಕೆಯಾಗಿದೆ. ಮುಂದುವರಿದು, ನಿಮ್ಮ ಬ್ಯಾಂಕು ಸೌಹಾರ್ದ ಔದ್ಯಮಿಕ ಸಂಬಂಧಗಳು ಮತ್ತು ಸಿಬ್ಬಂದಿ ಶಿಸ್ತನ್ನು ಕಾಯ್ದುಕೊಂಡಿದೆ.

ನಿಮ್ಮ ಬ್ಯಾಂಕು, ಕೆಲಸದ ಸ್ಥಳದಲ್ಲಿ ಮಹಿಳಾ ಉದ್ಯೋಗಿಗಳ ರಕ್ಷಣೆಗಾಗಿ ಸಾಂಸ್ಥಿಕ ವ್ಯವಸ್ಥೆಯನ್ನು ಹೊಂದಿದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ (ತಡೆ, ನಿಷೇಧ ಮತ್ತು ದೂರುಗಳ ಪರಿಹಾರ) ಕಾಯ್ದೆ 2013ರ ಸೆಕ್ಷನ್ 22ರ ಅನ್ವಯ ಒಂದು ನೀತಿಯನ್ನು ಅಂಗೀಕರಿಸಿದೆ. ಅದರಂತೆ ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ತಡೆ, ನಿಷೇಧ ಮತ್ತು ದೂರುಗಳ ಪರಿಹಾರ ವ್ಯವಸ್ಥೆಯನ್ನು ರೂಪಿಸಲಾಗಿದೆ. ಮೇಲೆ ತಿಳಿಸಿದ ಪಾಲಿಸಿ ಅಡಿಯಲ್ಲಿ ವರದಿ ಮಾಡಲಾದ ವರ್ಷದಲ್ಲಿ ಬಂದ ದೂರುಗಳು ಮತ್ತು ಪರಿಹಾರದ ಮಾಹಿತಿ ಈ ಕೆಳಗಿನ ಕೋಷ್ಟಕದಲ್ಲಿದೆ:

| | |
|---|---|
| ಹಣಕಾಸು ವರ್ಷದ ಆರಂಭದಲ್ಲಿ ಬಾಕಿಯಿದ್ದ ದೂರುಗಳು | ಇಲ್ಲ |
| ಹಣಕಾಸು ವರ್ಷದ ಅವಧಿಯಲ್ಲಿ ಸಲ್ಲಿಸಲಾದ ದೂರುಗಳು | ಇಲ್ಲ |
| ಹಣಕಾಸು ವರ್ಷದ ಕೊನೆಗೆ ಬಾಕಿ ಉಳಿದ ದೂರುಗಳು | ಇಲ್ಲ |

## ಕಣ್ಗಾವಲು ವ್ಯವಸ್ಥೆ:

ಬ್ಯಾಂಕು ಸಂರಕ್ಷಿತ ಬಹಿರಂಗಪಡಿಸುವಿಕೆ ನೀತಿ (ವಿಸಿಲ್ ಬ್ಲೋವರ್ ಪಾಲಿಸಿ) ಯನ್ನು 2007ರಿಂದಲೇ ಜಾರಿಗೊಳಿಸಿದೆ. ಎಲ್ಲ ಹಂತಗಳಲ್ಲೂ ಉದ್ಯೋಗಿಗಳು ಪಾಲ್ಗೊಳ್ಳಲು ಅನುಕೂಲವಾಗುವಂತೆ ಈ ನೀತಿಯನ್ನು ರೂಪಿಸಲಾಗಿದ್ದು, ಭ್ರಷ್ಟಚಾರ ಪತ್ತೆ, ಕಚೇರಿಯ ದುರ್ಬಳಕೆ, ಅಪರಾಧ ಕೃತ್ಯಗಳು, ಶಂಕಿತ / ನೈಜ ವಂಚನೆಗಳು, ಬ್ಯಾಂಕಿನ ನೀತಿ ನಿಯಮಗಳಿಗೆ ಬಾಧ್ಯತೆಯಲ್ಲಿ ವೈಫಲ್ಯ, ಬ್ಯಾಂಕಿನ ಹಿತಕ್ಕೆ ಧಕ್ಕೆಯಾಗುವಂತಹ ಯಾವುದೇ ಕೃತ್ಯದಲ್ಲಿ ತೊಡಗುವುದು, ಠೇವಣಿಗಳು ಮತ್ತು ಸಾರ್ವಜನಿಕರಿಗೆ ನಷ್ಟವುಂಟುಮಾಡುವ ಚಟುವಟಿಕೆಗಳು, ಖ್ಯಾತಿಗೆ ನಷ್ಟವುಂಟುಮಾಡುವುದು ಇತ್ಯಾದಿ ಚಟುವಟಿಕೆಗಳನ್ನು ತಡೆಯಲು ಬ್ಯಾಂಕ್ ಕ್ರಮ ಕೈಗೊಂಡಿದೆ. ಮುಂದುವರಿದು, ಬ್ಯಾಂಕು ಅಂಗೀಕರಿಸಿದ

ವ್ಯವಸ್ಥೆಯು, ವಿಸಿಲ್ ಬ್ಲೋವರ್‌ಗೆ ಸೂಕ್ತ ರಕ್ಷಣೆಯನ್ನು ನೀಡುತ್ತದೆ. ವಿಸಿಲ್ ಬ್ಲೋವರ್ ನೀತಿಯನ್ನು ಬಳಸಲು ಬಯಸಿದವರಿಗೆ ಸಾಮಾನ್ಯವಾಗಿ ಮುಖ್ಯ ಆಂತರಿಕ ವಿಜಿಲೆನ್ಸ್ (ಸಿಐವಿ) ಅಧಿಕಾರಿಯ ಜತೆಗೆ ನೇರ ಸಂಪರ್ಕ ಒದಗಿಸಲಾಗುತ್ತದೆ. ವಿಶೇಷ ಸಂದರ್ಭಗಳಲ್ಲಿ ಆಡಿಟ್ ಕಮಿಟಿಯ ಮುಖ್ಯಸ್ಥರ ಜತೆಗೂ ಸಂಪರ್ಕ ಕಲ್ಪಿಸಲಾಗುತ್ತದೆ. ಈ ವಿಚಕ್ಷಣಾ ವ್ಯವಸ್ಥೆಯನ್ನು ಕಾಲ ಕಾಲಕ್ಕೆ ಪರಾಮರ್ಶಿಸಲಾಗುತ್ತದೆ. ವಿಸಿಲ್ ಬ್ಲೋವರ್ ಪಾಲಿಸಿಯ ಪೂರ್ಣ ವಿವರಗಳು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮತ್ತು ಈ ಲಿಂಕ್‌ನಲ್ಲಿ ಲಭ್ಯವಿದೆ.
https://karnatakabank.com/sites/default/files/201709/Policy%20on%20Disclosure%20Scheme.pdf

## ಮಾಹಿತಿ ತಂತ್ರಜ್ಞಾನ:

ಕೋರ್ ಬ್ಯಾಂಕಿಂಗ್ ಸಿಸ್ಟಂ (ಸಿಬಿಎಸ್) ಬ್ಯಾಂಕಿನ ಎಲ್ಲ ಶಾಖೆಗಳು ಮತ್ತು ಕಚೇರಿಗಳನ್ನೂ ಒಳಗೊಂಡಿದೆ. ಅಲ್ಲದೆ, ಎಟಿಎಂ, ಇಂಟರ್‌ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಯುಪಿಐ ಆಪ್ ಇತ್ಯಾದಿ ಪರ್ಯಾಯ ಚಾನೆಲ್‌ಗಳನ್ನೂ ಸಿಬಿಎಸ್ ವ್ಯವಸ್ಥೆಗೆ ಜೋಡಿಸಲಾಗಿದೆ. ವಿಪತ್ತಿನ ಸಂದರ್ಭದಲ್ಲಿ ಮರಳಿ ಪಡೆಯುವ (ಡಿಸಾಸ್ಟರ್ ರಿಕವರಿ – ಡಿ.ಆರ್) ವ್ಯವಸ್ಥೆಯನ್ನು ಎಲ್ಲ ಪ್ರಮುಖ ಅಪ್ಲಿಕೇಶನ್‌ಗಳಲ್ಲೂ ಅಳವಡಿಸಲಾಗಿದೆ. ಪ್ರಾಥಮಿಕ ಸೈಟ್ ವಿಫಲವಾದ ಸಂದರ್ಭದಲ್ಲಿ ವ್ಯವಹಾರ ಅಬಾಧಿತವಾಗಿ ಮುಂದುವರಿಯುವಂತೆ ಮಾಡಲು ಈ ವ್ಯವಸ್ಥೆ ಮಾಡಲಾಗಿದೆ. ಡೇಟಾ ನಷ್ಟವಾಗುವುದನ್ನು ತಡೆಯಲು ಮೂರು ಕಡೆ ಪುನರಾವರ್ತನೆಯಾಗುವಂತೆ ಸಿಬಿಎಸ್, ಎಟಿಎಂ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಳವಡಿಸಲಾಗಿದೆ. ಅಂತೆಯೇ, ಮಾಹಿತಿ ತಂತ್ರಜ್ಞಾನ ವಿಭಾಗದ ಮೇಲ್ವಿಚಾರಣೆಯನ್ನು ಮುಖ್ಯ ತಂತ್ರಜ್ಞಾನ ಅಧಿಕಾರಿ (CTO) ನಿರ್ವಹಿಸುತ್ತಾರೆ.

ವರದಿ ವರ್ಷದಲ್ಲಿ ಬ್ಯಾಂಕು ಈ ಕೆಳಗಿನ ಐಟಿ ಯೋಜನೆಗಳನ್ನು ಕೈಗೆತ್ತಿಕೊಂಡಿದೆ:

1. ಇಎಂವಿ ಕಾರ್ಡ್ ಎನೇಬಲ್ಡ್ ಎಟಿಎಂಗಳು.
2. ಎಲ್ಲ ಎಟಿಎಂ ಮತ್ತು ಬಿಎನ್‌ಎ ಯಂತ್ರಗಳಲ್ಲಿ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ಮೂಲಕ ಕಾರ್ಡ್ ರಹಿತ ನಗದು ವಿತ್‌ಡ್ರಾವಲ್ ಸೌಲಭ್ಯ ಅಳವಡಿಸಲಾಗಿದೆ.
3. ಇಂಟರ್ನೆಟ್ ಬ್ಯಾಂಕಿಂಗ್ ಸೊಲ್ಯೂಷನ್ ಬಲವರ್ಧನೆಗಾಗಿ 'ಮನಿ ಕ್ಲಿಕ್' ವ್ಯವಸ್ಥೆ ಜಾರಿಗೆ ತರಲಾಗಿದೆ.
4. ಎನ್‌ಪಿಸಿಎಲ್ ಪ್ರಸ್ತಾವಿತ ಇ-ಮ್ಯಾಂಡೇಟ್ ಸಿಸ್ಟಂ ಅನ್ನು ಪರಿಚಯಿಸಲಾಗಿದೆ.
5. ಅಪಾಯಕಾರಿ ಎಲೆಕ್ಟ್ರಾನಿಕ್ ತ್ಯಾಜ್ಯಗಳ ವಿಲೇವಾರಿಗಾಗಿ ಇ-ವೇಸ್ಟ್ ಮ್ಯಾನೇಜ್‌ಮೆಂಟ್ ಅಳವಡಿಕೆ.

ಉತ್ಕೃಷ್ಟ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಮತ್ತು ತಂತ್ರಜ್ಞಾನ ಪ್ರೇಮಿ ಬ್ಯಾಂಕ್ ಆಗಿ ಮುಂದುವರಿಯಲು ನಿಮ್ಮ ಬ್ಯಾಂಕು ತಾಂತ್ರಿಕ ಕ್ರಾಂತಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದೆ.

## ಆಪತ್ತುಗಳು ಮತ್ತು ಚಿಂತನೆ:

ಆಪತ್ತು ಮತ್ತು ಪ್ರತಿಫಲಗಳು ಬ್ಯಾಂಕಿಂಗ್‌ನ ಅವಿಭಾಜ್ಯ ಅಂಗವಾಗಿದ್ದರೂ, ಆಪತ್ತಿನ ಸರಿಯಾದ ಮೌಲ್ಯಮಾಪನ ಪ್ರಕ್ರಿಯೆಯ ಮೂಲಕ ತಿಳುವಳಿಕೆಯುಳ್ಳ ನಿರ್ಧಾರ ತೆಗೆದುಕೊಳ್ಳುವುದು ವಿವೇಕಯುತವಾಗಿದೆ. ಬ್ಯಾಂಕಿಂಗ್ ವ್ಯವಹಾರದಲ್ಲಿ ಸಾಮಾನ್ಯವಾಗಿ ಮುಂಗಡ ನೀಡುವಿಕೆಯಲ್ಲಿನ ಆಪತ್ತು, ಮಾರುಕಟ್ಟೆ ಮತ್ತು ನಿರ್ವಹಣಾ ಆಪತ್ತುಗಳು ಕಂಡು ಬರುತ್ತವೆ. ಇವಲ್ಲದೆ, ಇತರ ಆಪತ್ತುಗಳಾದ ಹಣದ ಹರಿವಿಗೆ ಸಂಬಂಧಿಸಿದ (ಲಿಕ್ವಿಡಿಟಿ), ಬಡ್ಡಿದರ, ಕೇಂದ್ರೀಕರಣ (ಕಾನ್ಸಂಟ್ರೇಶನ್ ರಿಸ್ಕ್), ಕಾರ್ಯವ್ಯೂಹಕ್ಕೆ ಸಂಬಂಧಿಸಿದ (ಸ್ಟ್ರಾಟೆಜಿಕ್), ಅನುಸರಣಾ, ವಂಚನೆ, ಸೈಬರ್ ವಂಚನೆ ಮತ್ತು ಖ್ಯಾತಿಗೆ ಧಕ್ಕೆಯಾಗುವ ಆಪತ್ತುಗಳನ್ನೂ ಯಶಸ್ವಿಯಾಗಿ ನಿಭಾಯಿಸಬೇಕಾಗುತ್ತದೆ. ಅಂತಹ ಆಪತ್ತುಗಳನ್ನು ಸಮರ್ಥವಾಗಿ ನಿಭಾಯಿಸಲು ಬ್ಯಾಂಕು ವಿವಿಧ ಆಪತ್ತು ನಿರ್ವಹಣಾ ವಿಧಾನಗಳನ್ನು ಅಧ್ಯಯನ ಮಾಡಿ ಒಂದು ನಿಯಮಾವಳಿಗಳ ಚೌಕಟ್ಟು ರೂಪಿಸಿದೆ. ಅವುಗಳ ಅನುಷ್ಠಾನವನ್ನು ಕಾರ್ಯನಿರ್ವಾಹಕ ಅಧಿಕಾರಿಗಳ ಸಮಿತಿಯೊಂದು ಮೇಲ್ವಿಚಾರಣೆ ನಡೆಸುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಅನುಸಾರ ನಿಮ್ಮ ಬ್ಯಾಂಕು ಕಾಲ ಕಾಲಕ್ಕೆ ವಿವಿಧ ಬಗೆಯ ಆಪತ್ತು ನಿರ್ವಹಣಾ ವ್ಯವಸ್ಥೆಗಳನ್ನು ಬಲಪಡಿಸುತ್ತಲೇ ಇದೆ. ಅವುಗಳಲ್ಲಿ ನೀತಿಗಳು, ಉಪಕರಣಗಳು (ಟೂಲ್ಸ್), ತಂತ್ರಗಳು ಮತ್ತು ಇತರ ಮೇಲ್ವಿಚಾರಣೆ ಮತ್ತು ಮುನ್ಸೂಚನಾ ವ್ಯವಸ್ಥೆಗಳೂ ಸೇರಿವೆ.

ನಿಮ್ಮ ಬ್ಯಾಂಕು, ಆಪತ್ತು ಮತ್ತು ಪ್ರತಿಫಲಗಳ (ರಿಸ್ಕ್‌ಗಳು ಮತ್ತು ರಿಟರ್ನ್ಸ್‌ಗಳ) ಸೂಕ್ತ ಹೊಂದಾಣಿಕೆಯೊಂದಿಗೆ ಶೇರುದಾರರ ಮೌಲ್ಯಗಳನ್ನು ಗರಿಷ್ಠಗೊಳಿಸಲು ಉದ್ದೇಶಿಸಿದೆ. ನಿಮ್ಮ ಬ್ಯಾಂಕಿನ ಆಪತ್ತು ನಿರ್ವಹಣಾ ಉದ್ದೇಶಗಳಲ್ಲಿ, ಸರಿಯಾದ ಗುರುತಿಸುವಿಕೆ, ಮೌಲ್ಯಮಾಪನ, ಅಳತೆ, ಮೇಲ್ವಿಚಾರಣೆ, ನಿಯಂತ್ರಣ, ನಿವಾರಣೆ ಮತ್ತು ಬ್ಯಾಂಕಿನ ವಿವಿಧ ವಹಿವಾಟು ವಿಭಾಗಗಳ ನಡುವೆ ವರದಿ ಮಾಡುವುದೂ ಸೇರಿದೆ. ನಿಮ್ಮ ಬ್ಯಾಂಕು

ಅಂಗೀಕರಿಸಿದ ಆಪತ್ತು ನಿರ್ವಹಣಾ ಕಾರ್ಯತಂತ್ರವು ಆಪತ್ತು ಮತ್ತು ಅದರ ಮಟ್ಟಗಳ ಸರಿಯಾದ ತಿಳುವಳಿಕೆಯನ್ನು ಆಧರಿಸಿದೆ. ಇದಕ್ಕಾಗಿ ರಿಸ್ಕ್ & ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಕಮಿಟಿ (RCMC) ಎಂಬ ನಿರ್ದೇಶಕರ ಮಂಡಳಿಯ ಹಂತದ ಸಮಿತಿಯನ್ನು ರಚಿಸಿದೆ. ಈ ಸಮಿತಿ ನಿಯತಕಾಲಿಕವಾಗಿ ಆಪತ್ತಿನ ಚಿತ್ರಣಗಳನ್ನು ವಿಮರ್ಶಿಸಿ ಮೌಲ್ಯಮಾಪನ ನಡೆಸುತ್ತದೆ. ಆಪತ್ತುಗಳ ಒಟ್ಟಾರೆ ಮೇಲ್ವಿಚಾರಣೆಗಾಗಿ ಬ್ಯಾಂಕ್ ಸಮರ್ಥ ಆಪತ್ತು ನಿರ್ವಹಣಾ ವಿಭಾಗ ಮತ್ತು ಮುಖ್ಯಆಪತ್ತು ನಿರ್ವಹಣಾ ಅಧಿಕಾರಿಯನ್ನು ನೇಮಿಸಿದೆ. ಜತೆಗೆ ಸಮರ್ಥ ನಿರ್ವಹಣೆಗಾಗಿ ಬ್ಯಾಂಕ್‌ಗೆ ಸೂಕ್ತವೆನಿಸುವ ನೀತಿಗಳು ಮತ್ತು ಕಾರ್ಯತಂತ್ರಗಳನ್ನು ರೂಪಿಸುತ್ತದೆ. ಬ್ಯಾಂಕು ನಿರ್ವಹಿಸುತ್ತಿರುವ ವಿವಿಧ ಆಪತ್ತುಗಳು ಈ ಕೆಳಗಿನಂತಿವೆ:

### ಮುಂಗಡ ನೀಡುವಿಕೆಯಲ್ಲಿನ ಆಪತ್ತು (ಕ್ರೆಡಿಟ್ ರಿಸ್ಕ್) ಮತ್ತು ಅದರ ನಿರ್ವಹಣೆ

ಬ್ಯಾಂಕಿನ ಸಾಲಗಾರರು ತಾವು ಒಪ್ಪಿಕೊಂಡ ಬಾಧ್ಯತೆಯನ್ನು ಪಾಲಿಸದೇ ಇದ್ದಾಗ ಕ್ರೆಡಿಟ್ ರಿಸ್ಕ್ ಸಂಭವಿಸುತ್ತದೆ. ಮುಖ್ಯವಾಗಿ, ಮುಂಗಡಗಳಿಂದಲೇ ಕ್ರೆಡಿಟ್ ರಿಸ್ಕ್ ಉಂಟಾದರೂ ಬ್ಯಾಂಕಿಂಗ್ ಬುಕ್ ಮತ್ತು ಟ್ರೇಡಿಂಗ್ ಬುಕ್ ಹಾಗೂ ಬ್ಯಾಲೆನ್ಸ್ ಶೀಟ್, ಬ್ಯಾಲೆನ್ಸ್ ಶೀಟ್ ಹೊರತುಪಡಿಸಿದ ಒಡ್ಡುವಿಕೆಯಲ್ಲೂ ಕ್ರೆಡಿಟ್ ರಿಸ್ಕ್ ಇರುತ್ತದೆ. ಸಾಲದ ಹೊರತಾಗಿಯೂ, ಅಂತರ್ ಬ್ಯಾಂಕ್ ವಹಿವಾಟು, ವ್ಯಾಪಾರ ಹಣಕಾಸು (ಟ್ರೇಡ್ ಫೈನಾನ್ಸಿಂಗ್), ವಿದೇಶಿ ವಿನಿಮಯ ವಹಿವಾಟು, ಹಣಕಾಸು ಫ್ಯೂಚರ್‌ಗಳು, ಬದಲಾವಣೆಗಳು (swaps), ಬಾಂಡ್‌ಗಳು, ಈಕ್ವಿಟಿಗಳು ಮತ್ತು ಗ್ಯಾರಂಟಿಗಳು ಹಾಗೂ ಸೆಟಲ್‌ಮೆಂಟ್ (ವಿಲೇವಾರಿ) ವಹಿವಾಟುಗಳಲ್ಲೂ ಸಹ ಕ್ರೆಡಿಟ್ ರಿಸ್ಕ್ ಇರುತ್ತದೆ.

ವಿವಿಧ ವಲಯಗಳ ಎಲ್ಲ ಸಾಲಗಾರರ ಖಾತೆಗಳಲ್ಲೂ ಆಪತ್ತಿನ ಸಾಧ್ಯತೆಗಳನ್ನು ಒಗ್ಗೂಡಿಸಿ, ಪ್ರಮಾಣಬದ್ಧವಾಗಿ ಆನ್‌ಲೈನ್ ಮೂಲಕ ಸಮಗ್ರ ರೇಟಿಂಗ್ ನೀಡುವ ವ್ಯವಸ್ಥೆಯನ್ನು ಕೆಬಿಎಲ್ ಅಭಿವೃದ್ಧಿಪಡಿಸಿದೆ. ಚಾಲ್ತಿಯಲ್ಲಿರುವ ರೇಟಿಂಗ್ ಮಾಡೆಲ್‌ಗಳ ಜತೆಗೆ ಕಾರ್ಪೊರೇಟ್ ಮಾಡೆಲ್ ಅನ್ನು ಪರಿಷ್ಕರಿಸಿ ಬ್ಯಾಂಕು ತನ್ನದೇ ಆದ ವಿಶೇಷ ಸಾಲ ನೀಡುವ ರೇಟಿಂಗ್ ಮಾದರಿಗಳು, ರೀಟೇಲ್ ಸ್ಕೋರ್ ಕಾರ್ಡ್ ಮಾಡೆಲ್ (ಪೂಲ್ ಆಧರಿತ ಕ್ರಮ) ಮತ್ತು ಫೆಸಿಲಿಟಿ ರೇಟಿಂಗ್ ಮಾಡೆಲ್ ಗಳನ್ನು ಪರಿಚಯಿಸಿದೆ. ಬ್ಯಾಂಕಿನ ಸಾಲ ನೀತಿಗೆ ಅನುಗುಣವಾಗಿ ಕ್ರೆಡಿಟ್ ಪೋರ್ಟ್‌ಫೋಲಿಯೋ ಮಾನದಂಡಗಳನ್ನು ನಿಗದಿಪಡಿಸಿದ್ದು, ಅದರಂತೆ ರೇಟಿಂಗ್ ವ್ಯವಸ್ಥೆಯನನ್ನು ರೂಪಿಸಿದೆ. ಎಲ್ಲ ಆಪತ್ತುಗಳನ್ನು ವಿಶ್ಲೇಷಣೆ ನಡೆಸಿದ ಬಳಿಕವೇ ಕ್ರೆಡಿಟ್ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಇದರಲ್ಲಿ ರೇಟಿಂಗ್ ಸೇವೆಗಳು ಮಹತ್ವದ ಪಾತ್ರವಹಿಸುತ್ತವೆ. ಆಪತ್ತಿನ ರೇಟಿಂಗ್ ಸಿಸ್ಟಂ ಅನ್ನು ರಚನಾತ್ಮಕ ರೀತಿಯಲ್ಲಿ ರೂಪಿಸಲಾಗಿದ್ದು, ಸಾಲಗಾರರು ಮತ್ತು ಉದ್ಯಮ ನಿರ್ದಿಷ್ಟ ಗುಣಲಕ್ಷಣಗಳನ್ನು ಆಧರಿಸಿ ರೂಪಿಸಲಾಗಿದೆ. ಬ್ಯಾಂಕು ನಿಯಮಿತವಾಗಿ ತನ್ನ ರೇಟಿಂಗ್ ಮಾಡೆಲ್‌ಗಳನ್ನು ಮರುಪರಿಶೀಲಿಸುತ್ತದೆ ಮತ್ತು ಅಗತ್ಯವಿರುವ ಬದಲಾವಣೆಗಳನ್ನು ಮಾಡುತ್ತಿರುತ್ತದೆ. ಸಾಲಗಾರರ ವಿಫಲತೆಯ ವಿಶ್ಲೇಷಣೆಯ ಮುಖಾಂತರ ರೇಟಿಂಗ್ ಮಾದರಿಯ ದೃಢತೆಯನ್ನು ಪರೀಕ್ಷಿಸಲಾಗುತ್ತದೆ.

ಬ್ಯಾಂಕು ಸಮಗ್ರ ಸಾಲ ನೀತಿಯನ್ನು ರೂಪಿಸಿದ್ದು, ಸಾಲಮಿತಿ ನಿರ್ವಹಣೆ ಮತ್ತು ನಿಯಂತ್ರಣದ ವಿವಿಧ ಮಾನದಂಡಗಳನ್ನು ಅಳವಡಿಸಿಕೊಂಡಿದೆ. ಆ ಮೂಲಕ ವ್ಯವಹಾರದ ಮತ್ತು ಆಂತರಿಕ ಆಪತ್ತುಗಳನ್ನು ನಿರ್ವಹಿಸಲು ಕ್ರಮ ಕೈಗೊಂಡಿದೆ.

ಬ್ಯಾಂಕ್ ವಿವಿಧ ರೇಟಿಂಗ್ ವಿಭಾಗಗಳಲ್ಲಿ ಸಾಲಗಾರರ ಚಲನೆಯನ್ನು ಅಳೆಯುವ ಮೂಲಕ ಸಾಲದ ಪೋರ್ಟ್‌ಫೋಲಿಯೋ ಗುಣಮಟ್ಟವನ್ನು ಅಳೆಯಲಾಗುತ್ತದೆ. ಸಾಲದ ಸ್ವತ್ತುಗಳ ನಿಯಮಿತ ಪರಾಮರ್ಶೆ ನಡೆಸಲಾಗುತ್ತದೆ. ಹೆಚ್ಚುವರಿಯಾಗಿ, ದೊಡ್ಡ ಸಾಲಗಳ ಪ್ರಸ್ತಾವದ ಬಗ್ಗೆ ಕ್ರೆಡಿಟ್ ಆಡಿಟ್, ಲೀಗಲ್ ಆಡಿಟ್ ಮತ್ತು ಸ್ಟಾಕ್ ಆಡಿಟ್ ನಡೆಸಿ ಸಾಲದ ಮತ್ತು ಬಡ್ಡಿದರ ಆಪತ್ತಿನ ಸಾಧ್ಯತೆಗಳನ್ನು ಲೆಕ್ಕಹಾಕಲಾಗುತ್ತದೆ.

### ಸಾಲದ ಮಂಜೂರಾತಿ ಮತ್ತು ಸಂಬಂಧಿತ ಪ್ರಕ್ರಿಯೆಗಳು:

ಎಲ್ಲ ಉದ್ಯಮ ಚಟುವಟಿಕೆಗಳಿಗೂ 'ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ' (ನೋ ಯುವರ್ ಕಸ್ಟಮರ್- ಕೆವೈಸಿ) ಎಂಬುದು ಪ್ರಾಥಮಿಕ ತತ್ವವಾಗಿದೆ. ಕ್ರೆಡಿಟ್ ಪ್ರಕ್ರಿಯೆಗಳ ಇತರ ಅಂಶಗಳು ಇಂತಿವೆ:

1. ಅತ್ಯುತ್ತಮವಾಗಿ ರೂಪಿಸಲಾದ ಕ್ರೆಡಿಟ್ ಮಾನದಂಡಗಳ ಜತೆಗೆ ಬಲವಾದ ಸಾಲ ಮಂಜೂರಾತಿ ಪ್ರಕ್ರಿಯೆಗಳು.
2. ಸಾಲಗಾರ ಒದಗಿಸಿದ ಭದ್ರತೆಯೊಂದನ್ನೇ ಆಧರಿಸದೆ, ಸಾಲದ ಮಾನ್ಯತೆಯ ಸ್ವೀಕಾರಾರ್ಹತೆಯನ್ನು ಸಾಲಗಾರನ ಸಾಮಾನ್ಯ ವ್ಯವಹಾರದ ಸಮರ್ಪಕತೆ ಮತ್ತು ಸ್ಥಿರತೆಯನ್ನು ಆಧರಿಸಿ ತೀರ್ಮಾನಿಸುವುದು.
3. ಪೋರ್ಟ್‌ಫೋಲಿಯೋ ಮಟ್ಟದ ಆಪತ್ತಿನ ವಿಶ್ಲೇಷಣೆ ಮತ್ತು ಯಾವುದೇ ನಿರ್ದಿಷ್ಟ ಉದ್ಯಮ ವಿಭಾಗದ ಮೇಲೆ ಅನಗತ್ಯ ಆಪತ್ತಿನ ಕೇಂದ್ರೀಕರಣವನ್ನು ತಪ್ಪಿಸಲು ವಿವಿಧ ರೇಟಿಂಗ್ ವಿಭಾಗಗಳಿಂದ ಸಕಾಲಿಕ ವರದಿಗಳನ್ನು ತರಿಸಿಕೊಳ್ಳುವುದು ಮತ್ತು ಕ್ರೆಡಿಟ್ ರಿಸ್ಕ್

ನಿವಾರಣೆಯ ಮೇಲ್ವಿಚಾರಣೆ ನಡೆಸುವುದು. ನಿಯಮಿತವಾಗಿ ನಡೆಸುವ ನಿರ್ದಿಷ್ಟ ವ್ಯವಹಾರ ಕ್ಷೇತ್ರದ ಅಧ್ಯಯನಗಳು ಆಪತ್ತುಗಳನ್ನು ಮತ್ತು ಅವಕಾಶಗಳನ್ನು ಎತ್ತಿ ತೋರಿಸಲು ನೆರವಾಗುತ್ತವೆ.

4. ರೇಟಿಂಗ್ ಲಿಂಕ್ಡ್ ಸಾಲದ ಮಾನ್ಯತೆಯ ನಿಯಮಗಳ ಅಳವಡಿಕೆ.

5. ಉದ್ಯಮವಾರು ಸಾಲದ ಮಾನ್ಯತೆಯ ಮಿತಿ ನಿಗದಿ. ಆಯಾ ಉದ್ಯಮದ ನಿರ್ವಹಣೆ, ಭವಿಷ್ಯ ಮತ್ತು ತನ್ನ ವಲಯದಲ್ಲಿ ಹೊಂದಿರುವ ಸ್ಪರ್ಧಾತ್ಮಕತೆಯನ್ನು ಪರಿಗಣಿಸುವುದು.

6. ಎನ್‌ಬಿಎಫ್‌ಸಿ (ಬ್ಯಾಂಕೇತರ ಹಣಕಾಸು ಸಂಸ್ಥೆಗಳು) ಮತ್ತು ಭದ್ರತೆಯಿಲ್ಲದ ಸಾಲಗಳ ಪೋರ್ಟ್‌ಫೋಲಿಯೋದ ಮೇಲ್ವಿಚಾರಣೆಗೆ ವಿಶೇಷ ಅಪಾಯ ಮಿತಿಗಳನ್ನು ಅನುಸರಿಸುವುದು.

## ಪರಾಮರ್ಶೆ ಮತ್ತು ಸ್ವತಂತ್ರ ಮೇಲ್ವಿಚಾರಣೆ:

1. ಎಲ್ಲ ಸಾಲದ ಮಾನ್ಯತೆಗಳು, ಒಮ್ಮೆ ಅನುಮೋದನೆ ಪಡೆದ ಬಳಿಕ, ಮಂಜೂರಾತಿ ಪಡೆದ ಮಿತಿಗಳ ವಿಷಯದಲ್ಲಿ ನಿಯಮಿತವಾಗಿ ಮೇಲ್ವಿಚಾರನೆ ಮತ್ತು ಪರಾಮರ್ಶೆ ನಡೆಸಲಾಗುತ್ತದೆ. ಕೆಳವರ್ಗದ ಕ್ರೆಡಿಟ್ ರೇಟಿಂಗ್ ಪಡೆದ ಸಾಲಗಾರರ ಬಗ್ಗೆ ಹೆಚ್ಚಿನ ನಿಗಾ ಮತ್ತು ಮೇಲ್ವಿಚಾರಣೆ ನಡೆಸಲಾಗುತ್ತದೆ.

2. ಕ್ರೆಡಿಟ್ ರಿಸ್ಕ್ ಮೌಲ್ಯಮಾಪನದ ಸ್ವತಂತ್ರ ಪರಾಮರ್ಶೆ, ಬ್ಯಾಂಕಿನ ಆಂತರಿಕ ನೀತಿಗಳು ಮತ್ತು ನಿಯಂತ್ರಣ ಚೌಕಟ್ಟಿನ ಪಾಲನೆ, ಮಂಜೂರಾತಿ ನಿಯಮ ಮತ್ತು ಷರತ್ತುಗಳಿಗೆ ಬಾಧ್ಯತೆ ಮತ್ತು ಸಾಲದ ಆಡಳಿತದ ಪರಿಣಾಮಕಾರಿತ್ವ ಇದರಲ್ಲಿ ಒಳಗೊಂಡಿರುತ್ತದೆ.

3. ಚಾಲ್ತಿಯಲ್ಲಿರುವ ಸಾಲಗಳಲ್ಲಿ ಸಮಸ್ಯೆ ಎದುರಿಸುತ್ತಿರುವ ಗ್ರಾಹಕರನ್ನು ಮುನ್ಸೂಚನಾ ವ್ಯವಸ್ಥೆಯ ಮೂಲಕ ಮೊದಲು ಗುರುತಿಸಿ ವರ್ಗೀಕರಿಸಲಾಗುತ್ತದೆ. ಬ್ಯಾಂಕಿನ ಸಂಭಾವ್ಯ ನಷ್ಟವನ್ನು ಕನಿಷ್ಠ ಮಟ್ಟಕ್ಕಿಳಿಸಲು ಪರಿಹಾರ ಕ್ರಮಗಳನ್ನು ಆರಂಭಿಸಲಾಗುತ್ತದೆ.

## ಮುಂಗಡ ಮೇಲ್ವಿಚಾರಣೆ

ಪರಿಣಾಮಕಾರಿ ಮುಂಗಡ ಮೇಲ್ವಿಚಾರಣಾ ಕಾರ್ಯವ್ಯವಸ್ಥೆಯನ್ನು ಹೊಂದುವ ನಿಟ್ಟಿನಲ್ಲಿ, ಪ್ರತ್ಯೇಕ 'ಮುಂಗಡ ಮೇಲ್ವಿಚಾರಣಾ ವಿಭಾಗವನ್ನು (ಕ್ರೆಡಿಟ್ ಮಾನಿಟರಿಂಗ್ ಡಿಪಾರ್ಟ್‌ಮೆಂಟ್-CRMD) ಕೇಂದ್ರ ಕಚೇರಿಯಲ್ಲಿ ಸ್ಥಾಪಿಸಲಾಗಿದೆ. 'ರೀಜನಲ್ ಕಲೆಕ್ಷನ್ ಹಬ್ (RCH) ಎಂಬ ಪ್ರತ್ಯೇಕ ವ್ಯವಸ್ಥೆಯು ಎಲ್ಲಾ ಪ್ರಾದೇಶಿಕ ಕಚೇರಿಗಳಲ್ಲಿ ಕಾರ್ಯಾಚರಿಸುತ್ತಿದ್ದು, ಇದರಲ್ಲಿ 'ರೀಜನಲ್ ರಿಟೈಲ್ ಕಲೆಕ್ಷನ್ ಟೀಂ' (RRCT) ಮತ್ತು 'ರೀಜನಲ್ ಕಾರ್ಪೊರೇಟ್ ಕಲೆಕ್ಷನ್ ಟೀಂ '(RCCT) ಗಳು ಒಳಗೊಂಡಿವೆ. ಎಲ್ಲಾ ಸಾಲದ ಖಾತೆಗಳ ಬಾಕಿ ಸಂಗ್ರಹವನ್ನು ಖಾತ್ರಿಗೊಳಿಸಲು ಸಿಆರ್‌ಎಂಡಿಯ ಒಟ್ಟಾರೆ ಮೇಲ್ವಿಚಾರಣೆಯ ಅಡಿಯಲ್ಲಿ ಆರ್‌ಆರ್‌ಸಿಟಿಗಳು ಮತ್ತು ಆರ್‌ಸಿಸಿಟಿಗಳು ಡಿಪಿಡಿ-ವಾರು ವಸೂಲಾತಿ ಕ್ರಮಗಳನ್ನು ತೆಗೆದುಕೊಳ್ಳುತ್ತವೆ. ಆಯಾ ಪ್ರಾದೇಶಿಕ ಕಚೇರಿಗಳಲ್ಲಿ ಸಾಲ ಮಂಜೂರಾತಿಯ ನಂತರದ ನಿಗಾ ಕೈಗೊಳ್ಳಲು ಪ್ರತ್ಯೇಕ ಕ್ರೆಡಿಟ್ ಮಾನಿಟರಿಂಗ್ ಟೀಂ (CRMT) ಕೂಡಾ ಆರ್‌ಸಿಎಚ್‌ಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ವರದಿ ವರ್ಷದಲ್ಲಿ, ಮುಂಗಡ ಮೇಲ್ವಿಚಾರಣೆಯನ್ನು ಬಲಪಡಿಸಲು ಬ್ಯಾಂಕ್ ಈ ಕೆಳಗಿನ ಉಪಕ್ರಮಗಳನ್ನು ಕೈಗೊಂಡಿದೆ:

1. ಆರ್‌ಸಿಎಚ್/ಶಾಖೆಗಳ ಫಾಲೋಅಪ್ ಚಟುವಟಿಕೆಗಳ ನಿಗಾ ವಹಿಸಲು ಸ್ವಯಂಚಾಲಿತ ವೆಬ್ ಆಧಾರಿತ ಕಲೆಕ್ಷನ್ ಟೂಲ್-'ಕೆಬಿಎಲ್-ಕಲೆಕ್ಟ್'ನ ಅನುಷ್ಠಾನ;

2. ಸಾಲಗಾರರ ಆಪರೇಟಿಂಗ್ ಖಾತೆಗಳಿಂದ ಇಎಂಐ/ಕಂತು/ಸಾಲಗಳ ಬಡ್ಡಿಯ ಸ್ವಯಂ ಸಂಗ್ರಹಕ್ಕಾಗಿ 'ಆಟೊ ಸ್ವೀಪ್ ಸಿಸ್ಟಮ್' ನ ಪರಿಚಯ;

3. ರೂ.25.00 ಕೋಟಿ ಮತ್ತು ಮೇಲಿನ ಬೃಹತ್ ಮೊತ್ತದ ಸಾಲಗಳ ಅಡಿಯಲ್ಲಿ 'ಆರಂಭಿಕ ಎಚ್ಚರಿಕೆ ಸಿಗ್ನಲ್(EWS)' ಗಳ ಸ್ವಯಂ ದಾಖಲಾತಿ;

4. ಕಾನೂನಾತ್ಮಕ ಆಡಿಟ್ ಕಾರ್ಯದ ಸ್ವಯಂಚಾಲನೆ.

ಅಲ್ಲದೆ, ಮುಂಗಡ ಮೇಲ್ವಿಚಾರಣೆಯಲ್ಲಿ ಹೊಸ ಔನ್ನತ್ಯವನ್ನು ಸಾಧಿಸುವ ನಿಟ್ಟಿನಲ್ಲಿ, ಬ್ಯಾಂಕ್‌ನ ಸಂಸ್ಥಾಪನಾ ದಿನದಂದು, (18.02.2019ರಂದು) 'ಮಾನಿಟರಿಂಗ್ ಎಕ್ಸಲೆನ್ಸ್ ಇನಿಶಿಯೇಟಿವ್ಸ್' ಎಂಬ ಹೆಸರಿನ ವರ್ಷಪೂರ್ತಿಯ ಕಾರ್ಯಕ್ರಮವನ್ನು ಆರಂಭಿಸಲಾಯಿತು, ಈ ಕಾರ್ಯಕ್ರಮವು 31.03.2020 ರಂದು ಕೊನೆಗೊಂಡಿದ್ದು, ಇದು ಒತ್ತಡಕ್ಕೊಳಗಾದ ಸಾಲಗಳ ಮಟ್ಟವನ್ನು ನಿಯಂತ್ರಿಸುವಲ್ಲಿ ಬ್ಯಾಂಕ್‌ಗೆ ನೆರವಾಗಿದೆ.

## ಕ್ರೆಡಿಟ್ ಆಪತ್ತುತಗ್ಗಿಸುವಿಕೆ: ಪ್ರಮಾಣೀಕೃತ ವಿಧಾನಗಳಿಗಾಗಿ (Standardised Approach) ಪ್ರಕಟಣೆಗಳು:

ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ, ಬ್ಯಾಂಕು ಆಧಾರದ(ಕೊಲಾಟರಲ್) ಆಪತ್ತನ್ನು ತಗ್ಗಿಸಲು ಸಮಗ್ರ ವಿಧಾನ ಅನುಸರಿಸುತ್ತಿದೆ. ಈ ಕಾರ್ಯವಿಧಾನದ ಅಡಿಯಲ್ಲಿ ಬಂಡವಾಳ ಅವಶ್ಯಕತೆಗಳನ್ನು ಲೆಕ್ಕಹಾಕುವಾಗ ಹಣಕಾಸು ಆಧಾರಗಳನ್ನು ಬೇಸಲ್ ಮಾರ್ಗಸೂಚಿಗಳ ಪ್ರಕಾರ ಸಾಲದ ಮಿತಿಯಿಂದ ಕಳೆಯಲಾಗುತ್ತದೆ.

## ಕೇಂದ್ರೀಕರಣದ ಆಪತ್ತು (CONCENTRATION RISK)

ಸಾಲದ ಅರ್ಹತೆಯ ಆಧಾರದ ಮೇಲೆ ಸಮರ್ಪಕವಾದ ಕ್ಷೇತ್ರೀಯ ಮಿತಿ (ಸೆಕ್ಟೊರಲ್ ಲಿಮಿಟ್) ಹಾಗೂ ಸಾಲಗಾರರ ಮಿತಿಯನ್ನು (ಬೋರೋವರ್ ಲಿಮಿಟ್) ಬಳಸಿ ಬ್ಯಾಂಕ್ ತನ್ನ ಕೇಂದ್ರೀಕರಣದ ಆಪತ್ತನ್ನು ನಿಯಂತ್ರಿಸುತ್ತದೆ. ಭೌಗೋಳಿಕ ಒಡ್ಡುವಿಕೆಯನ್ನು (ಜಿಯೊಗ್ರ್ಯಾಫಿಕಲ್ ಎಕ್ಸ್‌ಪೋಷರ್) ನಿಯಂತ್ರಿಸುವ ಮೂಲಕ ಕೂಡ ಬ್ಯಾಂಕ್ ತನ್ನ ಕೇಂದ್ರೀಕರಣದ ಆಪತ್ತಿಗೆ ಕಡಿವಾಣ ಹಾಕುತ್ತದೆ.

## ದೊಡ್ಡ ಮೊತ್ತದ ಸಾಲಗಳ ಮೇಲಿನ ಚೌಕಟ್ಟು (Large Exposures Framework)

ಆರ್. ಬಿ. ಐ. ದೊಡ್ಡ ಮೊತ್ತದ ಸಾಲಗಳ ಮೇಲಿನ ಚೌಕಟ್ಟನ್ನು ಜೂನ್ 07, 2019 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿದೆ. ಈ ಹಿಂದಿನ ಏಪ್ರಿಲ್ 04, 2019 ರ ನಿಯಮಾವಳಿಯಡಿಯಲ್ಲಿ ಬ್ಯಾಂಕ್ ಒಂದು NBFCಗೆ ಕೊಡಬಹುದಾದ ಸಾಲದ ಮಿತಿಯು ಅದರ ಅರ್ಹ ಬಂಡವಾಳದ ಶೇಕಡ 15 ಕ್ಕೆ ಸೀಮಿತಗೊಳಿಸಿದೆ. ಇತರೆ ಸಾಲಗಾರರಿಗೆ ಬ್ಯಾಂಕ್ ಕೊಡಬಹುದಾದ ಸಾಲದ ಮಿತಿಯು(ಕೌಂಟರ್‌ಪಾರ್ಟೀ ಎಕ್ಸ್‌ಪೋಷರ್) ಶೇಕಡ 20ರಷ್ಟು ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಬ್ಯಾಂಕಿನ ಮಂಡಳಿಯು ಶೇಕಡ25 ಕ್ಕೆ ಏರಿಸಬಹುದಾಗಿದೆ. ಒಂದು NBFCಗೆ ಕೊಡಬಹುದಾದ ಸಾಲದ ಮಿತಿಯನ್ನು ಇತರೆ ಸಾಲಗಾರರಿಗೆ ಕೊಡಬಹುದಾದ ಸಾಲದ ಮಿತಿಗೆ ಹೊಂದಿಕೊಳ್ಳುವಂತೆ ಮಾಡಲು, ಒಂದು NBFCಗೆ ಕೊಡಬಹುದಾದ ಸಾಲದ ಮಿತಿಯನ್ನು (ಚಿನ್ನದ ಸಾಲದ ಕಂಪನಿಯ ಹೊರತಾಗಿ) ಟೈರ್-1 ಬಂಡವಾಳದ 20 ಶೇಕಡಕ್ಕೆ ಮಿತಿಗೊಳಿಸಲಾಗಿದೆ.

## ಗ್ರಾಹಕರ ಮಟ್ಟದಲ್ಲಿ ಅಥವಾ ಗುಂಪು (Group) ಮಟ್ಟದಲ್ಲಿ ದೊಡ್ಡ ಮೊತ್ತದ ಸಾಲಗಳು:

ಸಾಲಗಾರನ ಆಂತರಿಕ ರೇಟಿಂಗ್ ಗೆ ಅನುಗುಣವಾಗಿ ಬ್ಯಾಂಕಿಗೆ ಏಕೈಕ ಸಾಲಗಾರನ ಮಟ್ಟದಲ್ಲಿ ಸಾಲ ವಿಸ್ತರಣೆಯ ಮೇಲೆ ಮಿತಿಯನ್ನು ನಿಗದಿಪಡಿಸಲಾಗಿದೆ. ಬ್ಯಾಂಕ್, ಸಾಲದ ಆಪತ್ತಿನ ರೇಟಿಂಗ್ ಮಟ್ಟ (ಕಡಮೆ/ಮಿತವಾದ/ ಹೆಚ್ಚು/ಅತಿ ಹೆಚ್ಚು) ಹಾಗೂ ಪೋರ್ಟ್‌ಫೋಲೀಯೋ ಮಟ್ಟದಲ್ಲಿ ಸಾಲದ ಆಪತ್ತಿನ ದಿಕ್ಕನ್ನು (ಏರಿಕೆಯ / ಇಳಿಕೆಯ / ಸ್ಥಿರವಾದ) ನಿಯಂತ್ರಿಸುತ್ತಿರುತ್ತದೆ.

## ನಿರ್ವಹಣಾ ಆಪತ್ತು ಮತ್ತು ಅದರ ನಿಯಂತ್ರಣ:

ನೇರ ಅಥವಾ ಪರೋಕ್ಷ ನಷ್ಟಕ್ಕೆ ಕಾರಣವಾಗುವ ನಿರ್ವಹಣಾ ಆಪತ್ತು ಆಂತರಿಕ ಪ್ರಕ್ರಿಯೆಗಳು, ವ್ಯಕ್ತಿಗಳು, ವ್ಯವಸ್ಥೆಯ ಕುಸಿತ ಮತ್ತು ಬಾಹ್ಯ ಘಟನೆಗಳಿಂದ ಸಂಭವಿಸುತ್ತದೆ. ಉದಾಹರಣೆಗಳೆಂದರೆ: ವಂಚನೆಗಳು, ವ್ಯವಸ್ಥೆಯ ವೈಫಲ್ಯ, ಹಣಕಾಸು ವ್ಯವಹಾರದಲ್ಲಿ ಆಗುವ ತಪ್ಪುಗಳು ಇತ್ಯಾದಿ.

## ಚೌಕಟ್ಟು ಮತ್ತು ಪ್ರಕ್ರಿಯೆಗಳು:

ನಿರ್ವಹಣಾ ಆಪತ್ತುಗಳನ್ನು ತಗ್ಗಿಸಲು ಬ್ಯಾಂಕು ಒಂದು ಸಮಗ್ರ ಮತ್ತು ಬಲಶಾಲಿಯಾದ ಆಪತ್ತು ನಿರ್ವಹಣಾ ಚೌಕಟ್ಟನ್ನು ರೂಪಿಸಿದೆ. ಅದರ ಅನುಷ್ಠಾನವನ್ನು ಆಪರೇಶನಲ್ ರಿಸ್ಕ್ ಮ್ಯಾನೇಜ್‌ಮೆಂಟ್ ಸಮಿತಿ (ORMC) ನಿರ್ವಹಿಸುತ್ತದೆ ಮತ್ತು ಆಡಳಿತ ಮಂಡಳಿಯ ರಿಸ್ಕ್ ಮತ್ತು ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಸಮಿತಿ (RCMC) ಪರಾಮರ್ಶಿಸುತ್ತದೆ. ನಿರ್ದೇಶಕ ಮಂಡಳಿಯ ಆರ್‌ಸಿಎಂಸಿ ಅನುಮೋದಿತ ನಿರ್ವಹಣಾ ಆಪತ್ತುಗಳ ನಿರ್ವಹಣೆ ನೀತಿ ಅನ್ವಯ ಬ್ಯಾಂಕಿನ ಈ ಆಪತ್ತನ್ನು ನಿವಾರಿಸುವ ಮತ್ತು ತಡೆಯುವ ಕ್ರಮ ಮುಂದುವರಿಸಿಕೊಂಡು ಬರಲಾಗುತ್ತಿದೆ. ಈ ನೀತಿಯ ಅನ್ವಯ, ಎಲ್ಲ ನೂತನ ಉತ್ಪನ್ನಗಳಲ್ಲಿ ಇರಬಹುದಾದ ಸಂಭಾವ್ಯ ನಿರ್ವಹಣಾ ಆಪತ್ತುಗಳನ್ನು ಗುರುತಿಸಿ ಅವುಗಳ ನಿಯಂತ್ರಣಕ್ಕೆ ಸೂಕ್ತ ಕ್ರಮಗಳನ್ನು ಅಳವಡಿಸುವ ಕಾರ್ಯವನ್ನು ಪ್ರಾಡಕ್ಟ್ ಅಂಡ್ ಪ್ರೋಸೆಸ್ ಅಪ್ರೂವಲ್ ಸಮಿತಿಯು (NPPAC) ನಿರ್ವಹಿಸುತ್ತದೆ.

## ನಿರ್ವಹಣಾ ಆಪತ್ತುಗಳ ವರದಿ ಮತ್ತು ಮಾಪನದ ವ್ಯವಸ್ಥೆಯ ಸ್ವರೂಪ ಮತ್ತು ವ್ಯಾಪ್ತಿ

ನಿಮ್ಮ ಬ್ಯಾಂಕಿನಲ್ಲಿ ಆಪತ್ತಿನ ಘಟನೆಗಳು, ನಷ್ಟದ ಘಟನೆಗಳು, ಸ್ವಲ್ಪದರಲ್ಲಿ ತಪ್ಪಿದ ರಿಸ್ಕ್‌ಗಳು ಮತ್ತು ಅಬಾಧ್ಯತೆಯ ವಿಷಯಗಳನ್ನು ಸಮರ್ಪಕವಾಗಿ ವರದಿ ಮಾಡಲು ಒಂದು ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸಕಾಲದಲ್ಲಿ ಅವುಗಳನ್ನು ಚಾಲನೆಗೊಳಿಸಿ ತಪ್ಪುಗಳನ್ನು ಸರಿಪಡಿಸುವ ಮತ್ತು

ಆಪತ್ತುಗಳನ್ನು ತಗ್ಗಿಸುವ ಹಾಗೂ ನಿಯಂತ್ರಣವನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಾಗುತ್ತದೆ. ಎಲ್ಲ ಗಂಭೀರ ಆಪತ್ತುಗಳ ಮತ್ತು ಸಂಭಾವ್ಯ ನಷ್ಟಗಳ ಘಟನೆಗಳನ್ನು ಹಿರಿಯ ಅಧಿಕಾರಿಗಳಿಗೆ/ ಓಆರ್‌ಎಂಸಿ/ಆರ್‌ಸಿಎಂಸಿಗೆ ವರದಿ ಮಾಡಿ ಅವರ ನಿರ್ದೇಶನಗಳು ಮತ್ತು ಸಲಹೆಯಂತೆ ವ್ಯವಸ್ಥೆಯನ್ನು ಸರಿಪಡಿಸಲಾಗುತ್ತದೆ.

### ಕ್ಯಾಪಿಟಲ್ ಅಸೆಸ್‌ಮೆಂಟ್ ನಲ್ಲಿ ಕಾರ್ಯಾಚರಣೆ ಅಪಾಯಗಳ ನಿರ್ವಹಣೆ ವಿಧಾನ:

ಆರ್‌ಬಿಐ ನಿಯಮಾನುಸಾರ ಬ್ಯಾಂಕು, ಕಾರ್ಯಾಚರಣೆ ಆಪತ್ತುಗಳಿಗೆ ತಗಲುವ ಬಂಡವಾಳ ಶುಲ್ಕವನ್ನು ಲೆಕ್ಕಹಾಕಲು ಮೂಲ ಸೂಚಕ (BI) ವಿಧಾನವನ್ನು ಅಂಗೀಕರಿಸಿದೆ.

### ಮಾರುಕಟ್ಟೆ ಆಪತ್ತು (ಮಾರ್ಕೆಟ್ ರಿಸ್ಕ್):

ಮಾರುಕಟ್ಟೆ ದರಗಳ ಬದಲಾವಣೆಯಿಂದ ಬ್ಯಾಂಕಿನ ಗಳಿಕೆಗಳು ಮತ್ತು ಬಂಡವಾಳದ ಮೇಲೆ ಉಂಟಾಗುವ ಅಪಾಯವೇ ಮಾರುಕಟ್ಟೆ ಆಪತ್ತು. ಮುಖ್ಯವಾಗಿ ಬಡ್ಡಿದರಗಳ ಬದಲಾವಣೆಯಿಂದ, ವಿದೇಶಿ ವಿನಿಮಯ ದರ, ಈಕ್ವಿಟಿ ಮತ್ತು ಸರಕು ಬೆಲೆಗಳ ಬದಲಾವಣೆಯಿಂದ ಈ ಆಪತ್ತು ಉದ್ಭವಿಸುತ್ತದೆ.

ನಿಮ್ಮ ಬ್ಯಾಂಕು ಏಕೀಕೃತ ಖಜಾನೆ ನೀತಿ (ಟ್ರೆಶರಿ ಪಾಲಿಸಿ), ಆಸ್ತಿ ಹೊಣೆಗಾರಿಕೆ ನಿರ್ವಹಣಾ ನೀತಿ {ಅಸೆಟ್ ಲಯಬಿಲಿಟಿ ಮ್ಯಾನೇಜ್‌ಮೆಂಟ್ (ALM) ಪಾಲಿಸಿ}, ಮಾರುಕಟ್ಟೆ ಆಪತ್ತು ನಿರ್ವಹಣಾ ನೀತಿ ಮತ್ತು ನಿಧಿ ವರ್ಗಾವಣೆ ದರ ನೀತಿ (Fund Transfer Pricing)ಗಳನ್ನು ಆಡಳಿತ ಮಂಡಳಿ ಅನುಮೋದಿಸಿದ್ದು, ಬ್ಯಾಂಕಿನ ಮಾರ್ಕೆಟ್ ಆಪತ್ತುಗಳ ಸಮರ್ಥ ನಿರ್ವಹಣೆಗೆ ಅನುಕೂಲವಾಗಿದೆ. ವಿವಿಧ ಆಪತ್ತು ನಿರ್ವಹಣಾ ಸಾಧನಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಮೂಲಕ ಏಕೀಕೃತ ಖಜಾನೆ ನೀತಿಯು ಖಜಾನೆ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಆಪತ್ತುಗಳನ್ನು ನಿರ್ಣಯಿಸಲು ಮತ್ತು ನಿಯಂತ್ರಿಸಲು ಉದ್ದೇಶಿಸುತ್ತದೆ. ಖಜಾನೆ ಕಾರ್ಯಾಚರಣೆಗಳಲ್ಲಿ ಎದುರಾಗುವ ವ್ಯವಸ್ಥೆಯಲ್ಲಿರುವ ಆಪತ್ತುಗಳು, ವಿಶ್ವಾಸಾರ್ಹತೆ, ಮಾರುಕಟ್ಟೆ, ನಿರ್ವಹಣೆ, ಮತ್ತು ಹಣದ ಹರಿವಿನ ಬಗೆಗಿನ ಆಪತ್ತುಗಳ ನಿರ್ವಹಣೆಗೆ ವ್ಯಾಪಕವಾದ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

ಖಜಾನೆಯಲ್ಲಿರುವ ವಿವಿಧ ಪ್ರಾಡಕ್ಟ್‌ಗಳು ಮತ್ತು ಅವುಗಳ ಕಾರ್ಯವಿಧಾನಗಳಿಂದ ಉದ್ಭವಿಸುವ ಮಾರ್ಕೆಟ್ ಆಪತ್ತುಗಳನ್ನು ನಿವಾರಿಸಲು ಬ್ಯಾಂಕು, ರೆಗ್ಯುಲೇಟರಿ/ಆಂತರಿಕ ಮಿತಿಗಳನ್ನು ನಿಗದಿಪಡಿಸಿದ್ದು, ಅವುಗಳ ಪಾಲನೆಯನ್ನು ಬಯಸುತ್ತದೆ. ರೇಟಿಂಗ್‌ಗಳಲ್ಲಿ ಆಗುವ ಬದಲಾವಣೆಗಳನ್ನು ನಿಯಮಿತವಾಗಿ ಪರೀಕ್ಷಿಸಿ. ಸಾಲಗಾರ, ಉದ್ಯಮಗಳು ಮತ್ತು ದೇಶಗಳಿಗೆ ಅನುಮೋದನಾ ಮಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ. ನಷ್ಟ-ಮಿತಿ ನಿಲುಗಡೆ (ಸ್ಟಾಪ್ ಲಾಸ್ ಲಿಮಿಟ್), ಓವರ್‌ನೈಟ್ ಲಿಮಿಟ್, ಡೇಲೈಟ್ ಲಿಮಿಟ್, ಅಗ್ರಿಗೇಟ್ ಗ್ಯಾಪ್ ಲಿಮಿಟ್ (ಒಟ್ಟಾರೆ ಅಂತರದ ಮಿತಿ), ವೈಯಕ್ತಿಕ ಅಂತರದ ಮಿತಿ, ಫೋರೆಕ್ಸ್ ಗೆ (ವಿದೇಶಿ ವಿನಿಮಯ) ವ್ಯಾಲ್ಯೂ ಅಟ್ ರಿಸ್ಕ್ (VaR)ಮಿತಿ, ಅಂತರ್-ಬ್ಯಾಂಕು ವ್ಯವಹಾರ ಮತ್ತು ವಿವಿಧ ಹೂಡಿಕೆ ಮಿತಿಗಳನ್ನು ನಿಯಂತ್ರಿಸಲಾಗುತ್ತದೆ. ಮಾರುಕಟ್ಟೆ ಆಪತ್ತುಗಳ ನಿರ್ವಹಣೆಗಾಗಿ ಬ್ಯಾಂಕು ವಿಶೇಷ ಕಛೇರಿಯನ್ನು ಹೊಂದಿದ್ದು, ಅದನ್ನು ರಿಸ್ಕ್ ಮ್ಯಾನೇಜ್‌ಮೆಂಟ್ ವಿಭಾಗ ನಿರ್ವಹಿಸುತ್ತದೆ.

ಆಡಳಿತ ಮಂಡಳಿ, ಆರ್‌ಸಿಎಂಸಿ ಮತ್ತು ಎಎಲ್‌ಸಿಓ ಗಳು ಬ್ಯಾಂಕಿನ ಮಾರುಕಟ್ಟೆ ಆಪತ್ತಿನ ನಿರ್ವಹಣೆಯ ಮೇಲ್ವಿಚಾರಣೆ ನಡೆಸುತ್ತವೆ. ಅದು ನಿಗದಿಪಡಿಸಿದ ಪ್ರಕ್ರಿಯೆಗಳನ್ನೂ, ಆರ್‌ಬಿಐ ಬಿಡುಗಡೆ ಮಾಡಿದ ಮಾರ್ಗಸೂಚಿಗಳು ಮತ್ತು ಜಾಗತಿಕವಾಗಿ ಅನುಸರಿಸಲಾಗುವ ಅತ್ಯುತ್ತಮ ಆಪತ್ತು ನಿರ್ವಹಣೆ ವಿಧಾನಗಳನ್ನೂ ಹಾಗೂ ಆಂತರಿಕ ಮಾನದಂಡಗಳು, ವಿಧಾನಗಳು, ನೀತಿಗಳು ಮತ್ತು ಆಪತ್ತು ನಿರ್ವಹಣೆಯ ಮಿತಿಗಳನ್ನು ಬ್ಯಾಂಕು ಪಾಲಿಸಿಕೊಂಡು ಬಂದಿದೆ.

ನಿಮ್ಮ ಬ್ಯಾಂಕು ಶಾಖೆಗಳು/ ಉತ್ಪನ್ನಗಳು/ ಗ್ರಾಹಕರಿಗೆ ಲಾಭದ ಸಾಧ್ಯತೆಗಳ ವಿಧಾನ / ಗ್ರಹಿಕೆ ಅನುಸರಿಸಿ ನಿಧಿ ವರ್ಗಾವಣೆ ದರ ನೀತಿ (ಫಂಡ್ ಟ್ರಾನ್ಸ್‌ಫರ್ ಪಾಲಿಸಿ- ಎಫ್‌ಟಿಪಿ) ಯೊಂದನ್ನು ರೂಪಿಸಿದೆ. ಈ ಎಫ್‌ಟಿಪಿಯ ಫಲಿತಾಂಶಗಳನ್ನು ಆಧರಿಸಿ ಪರಿಣಾಮಕಾರಿ ನಿರ್ಧಾರ ಕೈಗೊಳ್ಳಲಾಗುತ್ತದೆ.

ಹೆಡ್ಜಿಂಗ್ ಮತ್ತು/ಅಥವಾ ಆಪತ್ತುಗಳನ್ನು ತಗ್ಗಿಸುವ ನೀತಿಗಳು ಮತ್ತು ಹೆಡ್ಜಸ್/ಆಪತ್ತು ತಗ್ಗಿಸುವಿಕೆಯ ನಿರಂತರ ಪರಿಣಾಮಕಾರಿತ್ವವನ್ನು ಮೇಲ್ವಿಚಾರಣೆ ಮಾಡುವ ತಂತ್ರಗಳು ಮತ್ತು ಪ್ರಕ್ರಿಯೆಗಳನ್ನು ALCO ನಲ್ಲಿ ಚರ್ಚಿಸಲಾಗುತ್ತದೆ ಮತ್ತು ಅಲ್ಲಿ ಮೂಡಿ ಬರುವ ಅಭಿಪ್ರಾಯಗಳ ಆಧಾರದ ಮೇಲೆ, ಹೆಡ್ಜ್ ವ್ಯವಹಾರಗಳನ್ನು ಕೈಗೊಳ್ಳಲಾಗುತ್ತದೆ.

### ಟ್ರೇಡಿಂಗ್ ಬುಕ್ (ವ್ಯಾಪಾರ ಪುಸ್ತಕ) ನಲ್ಲಿ ಮಾರುಕಟ್ಟೆ ಆಪತ್ತು:

ಆರ್‌ಬಿಐ ನಿಯಮಗಳಿಗೆ ಅನುಸಾರವಾಗಿ ನಿಮ್ಮ ಬ್ಯಾಂಕು, ಮಾರುಕಟ್ಟೆ ಆಪತ್ತಿಗೆ ಅನ್ವಯವಾಗುವ ಬಂಡವಾಳದ ಪರ್ಯಾಪ್ತತೆಯ ಲೆಕ್ಕಾಚಾರಕ್ಕಾಗಿ ಸ್ಟ್ಯಾಂಡರ್ಡೈಸ್ಡ್ ಡ್ಯುರೇಶನ್ ಅಪ್ರೋಚ್ (Standardized Duration Appraoch) ಅನ್ನು ಬಳಸುತ್ತದೆ.

### ಅಸಮಂಜಸ ಹಣದ ಹರಿವಿನ ಅಪಾಯ (ಲಿಕ್ವಿಡಿಟಿ ರಿಸ್ಕ್)

ಸಾಕಷ್ಟು ಹಣದ ಹರಿವು ಇಲ್ಲದಿದ್ದ ಸಂದರ್ಭದಲ್ಲಿ ದೈನಂದಿನ ಕಾರ್ಯಾಚರಣೆಯ ತನ್ನ ಬಾಧ್ಯತೆಯನ್ನು ಪೂರೈಸಲು ಬ್ಯಾಂಕು ವಿಫಲವಾದರೆ ಆಗ ಈ ಆಪತ್ತಿನ ಸನ್ನಿವೇಶ ಉದ್ಭವಿಸುತ್ತದೆ. ನಿಧಿಯ ಅಗತ್ಯತೆಯ ಬಗ್ಗೆ ಮುಂಚಿತವಾಗಿ ಅಂದಾಜಿಸುವ ಮೂಲಕ ಈ ಆಪತ್ತನ್ನು ತಡೆಯಲಾಗುತ್ತದೆ. ಅದಕ್ಕಾಗಿ ತನ್ನಲ್ಲಿರುವ ವಿವಿಧ ನಿಧಿಗಳ ಹರಿವಿನ ಬಗ್ಗೆ ಬ್ಯಾಂಕು ಸಂಪೂರ್ಣ ಸಮನ್ವಯ ಹೊಂದಿದ್ದು, ಸಾಮಾನ್ಯ ಮತ್ತು ಒತ್ತಡದ ಪರಿಸ್ಥಿತಿಗಳಲ್ಲಿ ಲಭ್ಯವಿರುವ ನಿಧಿಯ ಪ್ರಮಾಣವನ್ನು ಮುಂಚಿತವಾಗಿ ಅಂದಾಜಿಸುತ್ತದೆ. ಹಣಹೊಂದಿಸುವಿಕೆಯಲ್ಲಿನ ಆಪತ್ತು (ಫಂಡಿಂಗ್ ರಿಸ್ಕ್), ಹಣದ ಒಳ ಮತ್ತು ಹೊರ ಹರಿವು ಉಂಟಾಗುವ ಸಮಯದಲ್ಲಿ ಹೊಂದಾಣಿಕೆಯಾಗದೆ ಇರುವುದು (ಟೈಮ್ ರಿಸ್ಕ್) ಮತ್ತು ಅವಧಿ ಮುಂಚಿತವಾಗಿಯೇ ಮರುಪಾವತಿಯನ್ನುಬಯಸುವುದು(ಕಾಲ್ ರಿಸ್ಕ್) ಈ ಬಗೆಯ ಮೂರು ಆಪತ್ತಿನ ಸಂದರ್ಭಗಳನ್ನು ಗುರುತಿಸಲಾಗಿದೆ.

ವಿಭಿನ್ನ ಕಾಲಾವಧಿಯಲ್ಲಿ ಆಸ್ತಿ ಮತ್ತು ಹೊಣೆಗಾರಿಕೆಗಳ ಉಳಿದಿರುವ ಪರಿಪಕ್ವತೆಯನ್ನು (ರೆಸಿಡ್ಯುಯಲ್ ಮೆಚ್ಯುರಿಟಿ) ಅಂದಾಜಿಸಿ ಹಾಗೂ ವಿವಿಧ ಹಣದ ಹರಿವಿನ ಅನುಪಾತಗಳನ್ನು ಆಧರಿಸಿ ದೈನಂದಿನ ಹಣದ ಹರಿವಿನ ವ್ಯತ್ಯಾಸವನ್ನು ವಿಶ್ಲೇಷಿಸುವ ಮೂಲಕ ನಿಮ್ಮ ಬ್ಯಾಂಕು, ಈ ಆಪತ್ತುಗಳನ್ನು ಅಳೆದು ಈ ಅನುಪಾತಗಳಿಗೆ ಅನುಮೋದಿಸಲಾದ ಮಿತಿಯ ಒಳಗೇ ನಿರ್ವಹಿಸಲಾಗುತ್ತದೆ. ಒತ್ತಡ ಪರೀಕ್ಷೆ, ಸಿಮ್ಯುಲೇಶನ್, ಸೂಕ್ಷ್ಮತೆಯ ವಿಶ್ಲೇಷಣೆ ಇತ್ಯಾದಿಗಳನ್ನು ನಿಯಮಿತವಾಗಿ ನಡೆಸಿ, ವಿಭಿನ್ನ ಆಪತ್ತಿನ ಸನ್ನಿವೇಶಗಳಲ್ಲಿ ಅಗತ್ಯವಿರುವ ತುರ್ತು ಫಂಡಿಂಗ್ ಯೋಜನೆ ಮಾಡಲಾಗುತ್ತದೆ.

### ಲಿಕ್ವಿಡಿಟಿ ಕವರೇಜ್ ರೇಶಿಯೋ (LCR)

ಬೇಸಲ್-III ಚೌಕಟ್ಟಿನ ಲಿಕ್ವಿಡಿಟಿ ಮಾನದಂಡಗಳಲ್ಲಿ ಹೇಳಿರುವಂತೆ 'ಲಿಕ್ವಿಡಿಟಿ ಕವರೇಶ್ ರೇಶಿಯೋ'(LCR) ವಿಧಾನವನ್ನು- ಜಾಗತಿಕವಾಗಿ ಬ್ಯಾಂಕುಗಳ ಹಣದ ಹರಿವಿನ ಸ್ಥಿತಿಯನ್ನು ಅಳೆಯಲು ಬಳಸಲಾಗುತ್ತದೆ. ಈ ಮಾನದಂಡವು 30 ದಿನಗಳ ಅವಧಿಯಷ್ಟು ವಿಸ್ತರಿಸಬಹುದಾದ ತುರ್ತು ಸಂದರ್ಭಗಳಲ್ಲಿಯೂ ಕೂಡ ಬ್ಯಾಂಕುಗಳು 'ಸುಲಭವಾಗಿ ನಗದಿಗೆ ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಿರುವ ಅತ್ಯಧಿಕ ಗುಣಮಟ್ಟದ ಲಿಕ್ವಿಡ್ ಅಸೆಟ್ಸ್' (HQLA) ಅನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿರುವುದನ್ನು ಖಚಿತಪಡಿಸುತ್ತದೆ. ಬ್ಯಾಂಕುಗಳ ಎಲ್‌ಸಿಆರ್ ಅನುಪಾತವನ್ನು ಲೆಕ್ಕ ಹಾಕುವಾಗ ಈ ಕೆಳಗೆ ಹೇಳಿರುವ ಅಸೆಟ್‌ಗಳನ್ನು ಒಂದನೇ ಹಂತದ HQLA ಎಂದು ಪರಿಗಣಿಸಲಾಗುತ್ತದೆ:

1. ಕನಿಷ್ಠ ಎಸ್‌ಎಲ್‌ಆರ್ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಸರಕಾರಿ ಸೆಕ್ಯುರಿಟಿಗಳಲ್ಲಿ ಹೂಡಿರುವ ನಿಧಿ,
2. ಆರ್‌ಬಿಐ ನೀಡಬಹುದಾದ ಮಿತಿಗನುಗುಣವಾಗಿ (1) ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ (MSF) ಮತ್ತು (2) LCR ಅನುಪಾತದ ಪಾಲನೆಗಾಗಿ ಲಿಕ್ವಿಡಿಟಿ ಪಡೆಯುವ ಸೌಲಭ್ಯದಡಿಯಲ್ಲಿ (FALLCR) ಕಡ್ಡಾಯ ಎಸ್‌ಎಲ್‌ಆರ್ ಅಗತ್ಯಗಳ ಅನುಗುಣವಾಗಿ ಸರಕಾರಿ ಸೆಕ್ಯುರಿಟಿಗಳಲ್ಲಿ ಹೂಡಿರುವ ನಿಧಿ.

ಎಚ್‌ಟಿಎಂ(HTM), ಎಎಫ್‌ಎಸ್(AFS) ಅಥವಾ ಎಚ್‌ಎಫ್‌ಟಿ (HFT)- ಈ ಯಾವುದೇ ವರ್ಗಕ್ಕೆ ಒಳಪಟ್ಟ ಸೆಕ್ಯುರಿಟಿ ಆಗಿದ್ದರೂ ಎಲ್‌ಸಿಆರ್ ಉದ್ದೇಶಕ್ಕಾಗಿ ಬ್ಯಾಂಕುಗಳು ಸರಕಾರಿ ಸೆಕ್ಯುರಿಟಿಗಳನ್ನು ಅದರ ಮೌಲ್ಯವನ್ನು ಮಾರುಕಟ್ಟೆ ಮೌಲ್ಯಕ್ಕನುಸಾರವಾಗಿಯೇ ಪರಿಗಣಿಸಲಾಗುತ್ತದೆ.

### ಗುಣಾತ್ಮಕ ಪ್ರಕಟಣೆಗಳು (QUALITATIVE DISCLOSURE)

ಬೇಸಲ್-III ಚೌಕಟ್ಟಿನ ಲಿಕ್ವಿಡಿಟಿ ಮಾನದಂಡಗಳಲ್ಲಿ ಹೇಳಿರುವಂತೆ 'ಲಿಕ್ವಿಡಿಟಿ ಕವರೇಶ್ ರೇಶಿಯೋ'(LCR), ಹಣದ ಹರಿವಿನ ಆಪತ್ತಿನ ಮೇಲ್ವಿಚಾರಣಾ ಸಾಧನಗಳು (ಲಿಕ್ವಿಡಿಟೀ ರಿಸ್ಕ್ ಮಾನಿಟರಿಂಗ್ ಟೂಲ್ಸ್) ಹಾಗೂ ಎಲ್. ಸಿ. ಆರ್. ಪ್ರಕಟಣೆಯ ಮಾನದಂಡಗಳು (ಎಲ್. ಸಿ.

ಆರ್. ಡಿಸ್‌ಕ್ಲೋಷರ್ ಸ್ಟ್ಯಾಂಡರ್ಡ್ಸ್)" ಅಡಿಯಲ್ಲಿ ಅರ್.ಬಿ.ಐ ಯ ಆದೇಶದಂತೆ ದ್ರವ್ಯತೆಯ ವ್ಯಾಪ್ತಿಯ ಅನುಪಾತವನ್ನು (ಲಿಕ್ವಿಡಿಟೀ ಕವರೇಜ್ ರೇಶಿಯೋ) ಬ್ಯಾಂಕ್ ದಿನನಿತ್ಯ ಲೆಕ್ಕಾಚಾರ ಮಾಡುತ್ತಿದೆ. ಎಲ್ಲ ಕಾಲದಲ್ಲೂ ಉತ್ತಮ ಗುಣಮಟ್ಟದ ನಗದೀಕರಿಸಬಹುದಾದ ಸ್ವತ್ತು (ಹೈ ಕ್ವಾಲಿಟೀ ಲಿಕ್ವಿಡ್ ಅಸೆಟ್)(HQLA) ಅಗತ್ಯ ಪ್ರಮಾಣದಲ್ಲಿ ಇರುವಂತೆ ಬ್ಯಾಂಕ್ ನೋಡಿಕೊಳ್ಳುತ್ತದೆ. ಮಾರ್ಚ್ 31, 2020 ರಂದು ಸಮಾಪ್ತಿಯಾದ ವರ್ಷದಲ್ಲಿ ಒಟ್ಟಾರೆಯಾಗಿ ನಿಮ್ಮ ಬ್ಯಾಂಕಿನ HQLA ಯು ನಿವ್ವಳ ನಗದು ಹೊರಹರಿವಿನ (ನೆಟ್ ಕ್ಯಾಶ್ ಔಟ್‌ಫ್ಲೋಸ್) ಕನಿಷ್ಠ ಅಗತ್ಯತೆಯಾದ ಶೇ. 100% ಕ್ಕಿಂತ ಮೇಲೆ ಶೇ.219.25 ನಷ್ಟಿದೆ.

ನಿಗದಿತ ಪ್ರಮಾಣದ ಎಲ್. ಸಿ. ಆರ್. ಅನ್ನು ಕಾಪಾಡಿಕೊಳ್ಳಲು ಇರುವ ಬಂಡವಾಳವನ್ನು ಬಳಸಿ ಉತ್ತಮ ಗುಣಮಟ್ಟದ ಸ್ವತ್ತನ್ನು ಹಾಗೂ ಹಣದ ಹರಿವಿನ ಚಿತ್ರಣವನ್ನು (ಲಿಕ್ವಿಡಿಟೀ ಪ್ರೊಫೈಲ್) ರೂಪಿಸುವ ಮೂಲಕ ಹಣದ ಹರಿವಿನ ಅವಶ್ಯಕತೆಗಳನ್ನು(ಲಿಕ್ವಿಡಿಟೀ ರಿಕ್ವೈರ್ಮೆಂಟ್ಸ್) ಕಾಪಾಡಿಕೊಳ್ಳುವ ಜೊತೆಗೆ, ಬ್ಯಾಂಕ್ ಲಾಭದಾಯಕವಾಗುವಂತೆ ನೋಡಿಕೊಳ್ಳಲು ಅಗತ್ಯವಾದ ಕಾರ್ಯಯೋಜನೆಗಳನ್ನು ರೂಪಿಸಲು ಬ್ಯಾಂಕ್ ಆಸ್ತಿ ಹಾಗೂ ಬಾಧ್ಯತೆಗಳ ನಿರ್ವಹಣಾ ಮಂಡಳಿಗೆ (ಬ್ಯಾಂಕ್ ಅಸೆಟ್ ಲೈಯಬಿಲಿಟೀ ಮ್ಯಾನೇಜ್ಮೆಂಟ್ ಕಮಿಟೀ) ಅಧಿಕಾರವನ್ನು ನೀಡಲಾಗಿದೆ. ಬಂಡವಾಳ ಹೂಡಿಕೆಯ ಕಾರ್ಯತಂತ್ರಗಳನ್ನು ALCO ನ ಮಾರ್ಗಸೂಚಿಗಳಿಗೆ ಅನುಗುಣವಾಗಿ ಖಜಾನೆ ವಿಭಾಗವು (ಟ್ರೆಷರೀ ಅಂಡ್ ಅಕೌಂಟ್ ಡಿಪಾರ್ಟ್‌ಮೆಂಟ್) ರೂಪಿಸುತ್ತದೆ. ಸಮರ್ಪಕವಾದ ಹಣದ ಹರಿವು, ಮೂಲಗಳ ವೈವಿಧ್ಯ, ಸೇವಾ ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಸೂಕ್ತವಾದ ಬಂಡವಾಳ ಮಿಶ್ರಣವನ್ನು ತಲುಪುವುದೇ ಬಂಡವಾಳ ಹೂಡಿಕೆಯ ಉದ್ದೇಶ. ಬ್ಯಾಂಕ್ ಸಿದ್ಧಗೊಳಿಸಿದ ಹಣದ ಹರಿವಿನ ರಚನಾತ್ಮಕ ವರದಿಯ (ಸ್ಟ್ರಕ್ಚರಲ್ ಲಿಕ್ವಿಡಿಟೀ ಸ್ಟೇಟ್ಮೆಂಟ್) ಆಧಾರದ ಮೇಲೆ ಖಜಾನೆ ವಿಭಾಗವು ಪ್ರಸ್ತುತ ಹಾಗೂ ಭವಿಷ್ಯದ ಹಣದ ಹರಿವಿನ ಅವಶ್ಯಕತೆಯನ್ನು ನಿಗದಿಪಡಿಸಿ ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

### ಸೈಬರ್ ಆಪತ್ತು

ಸೈಬರ್ ಆಪತ್ತು ಎನ್ನುವುದು ಬ್ಯಾಂಕಿಂಗ್ ವ್ಯವಹಾರ ಸೇರಿದಂತೆ ಎಲ್ಲ ವ್ಯವಹಾರಗಳಿಗೂ ಆಪತ್ತನ್ನು ತಂದೊಡ್ಡುವಂತಹದ್ದು. ಆರ್. ಬಿ. ಐ. ಯ ಮಾರ್ಗಸೂಚಿಯ ಪ್ರಕಾರ ನಿಮ್ಮ ಬ್ಯಾಂಕ್ ಸೈಬರ್ ಆಪತ್ತನ್ನು ತಡೆಗಟ್ಟಲು "ಸೈಬರ್ ಭದ್ರತಾ ಚೌಕಟ್ಟು" ಅನ್ನು ಜಾರಿಗೊಳಿಸಿದೆ ಹಾಗೂ ತನ್ನ ಮಾಹಿತಿ ವ್ಯವಸ್ಥೆಗಳನ್ನು ಕಾಪಾಡಲು ಹಲವಾರು ಮಾಹಿತಿ ಭದ್ರತಾ ವ್ಯವಸ್ಥೆಗಳಾದ ಅಪ್ಲಿಕೇಶನ್ ಫೈರ್ವಾಲ್(Application Firewall), ವೆಬ್ ಸೆಕ್ಯೂರಿಟೀ ಗೇಟ್ ವೇ (Web Security Gateway) , ಎಂಡ್ ಪಾಯಂಟ್ ಸೆಕ್ಯೂರಿಟೀ ಸಿಸ್ಟಮ್ಸ್ (End Point Security Systems), ಹನೀ ಪಾಟ್ ಸಿಸ್ಟಮ್ಸ್ ಅಂಡ್ ಪ್ರಿವಿಲೇಜ್ ಐಡೆಂಟಿಟೀ ಮ್ಯಾನೇಜ್ಮೆಂಟ್ (PIM) ಗಳನ್ನು ಅಳವಡಿಸಿದೆ.ಸೆಕ್ಯೂರಿಟೀ ಇನ್ಫರ್ಮೇಶನ್ ಇವೆಂಟ್ ಮ್ಯಾನೇಜ್ಮೆಂಟ್ (SIEM) ಸಾಧನಗಳ ಮೂಲಕ ದಾಖಲೆಗಳನ್ನು ನಿಯಂತ್ರಿಸುವ ಸೆಕ್ಯೂರಿಟೀ ಆಪರೇಶನ್ಸ್ ಸೆಂಟರ್ (SOC) ಅನ್ನು ಕೂಡ ಪ್ರತ್ಯೇಕವಾಗಿ ನಿರ್ಮಿಸಿದೆ. ಯಾವುದೇ ಸಾಧನಗಳು ಕೆಟ್ಟುಹೋಗುವುದನ್ನು ಹಾಗೂ ದುರುದ್ದೇಶಯುಕ್ತ ಘಟನೆಗಳು ಸಂಭವಿಸುವುದನ್ನು ಕಂಡುಹಿಡಿಯಲು ಹಾಗೂ ತಡೆಹಿಡಿಯಲು ಎಲ್ಲ ಭದ್ರತಾ ಸಾಧನಗಳ ನಿರ್ವಹಣೆ ಹಾಗೂ ನಿಯಂತ್ರಣವನ್ನು ಅವ್ಯಾಹತವಾಗಿ 24*7*365 ರಂತೆ ಮಾಡಲಾಗುತ್ತದೆ. ಆಪತ್ತಿನ ತೀವ್ರತೆಯನ್ನು ತಗ್ಗಿಸುವ ಕ್ರಮಗಳ ಜೊತೆಗೆ ಆಪತ್ತನ್ನು ವರ್ಗಾಯಿಸುವ (Risk Trasfer approach) ಕ್ರಮವನ್ನು ಕೂಡ ಬ್ಯಾಂಕ್ ಕೈಗೊಂಡಿದೆ. ಸೈಬರ್ ಭದ್ರತಾ ವಿಮೆಯನ್ನು ಕೂಡ ಬ್ಯಾಂಕ್ ಜಾರಿಗೆ ತಂದಿದೆ.

ಒಂದು ನಿರ್ದೇಶಕರ ಮಂಡಳಿಯ ಮಟ್ಟದ ಸಮಿತಿಯು (ಮಾಹಿತಿ ತಂತ್ರಜ್ಞಾನ ಕಾರ್ಯನೀತಿ & ಆಡಳಿತ ಸಮಿತಿ) ಮಾಹಿತಿ ಭದ್ರತಾ ವಿಚಾರದಲ್ಲಿ ಬ್ಯಾಂಕಿನ ಪೂರ್ವತಯಾರಿಯನ್ನು ಮೇಲ್ವಿಚಾರಣೆ ಮಾಡುತ್ತದೆ ಹಾಗೂ ಈ ಕುರಿತಾದ ಕಾರ್ಯನೀತಿಗಳನ್ನು ಅನುಮೋದಿಸುತ್ತದೆ.

ನಿಮ್ಮ ಬ್ಯಾಂಕಿನ ಆಡಳಿತ ಮಂಡಳಿಯ ಬಹುತೇಕ ಹಿರಿಯ ಸದಸ್ಯರು ಹೈದರಾಬಾದ್ ನಲ್ಲಿರುವ IDRBT ಯಲ್ಲಿ ಸೈಬರ್ ಭದ್ರತಾ ತರಬೇತಿಯನ್ನು ಪಡೆದಿದ್ದಾರೆ. ಮೇಲಾಗಿ, ಸೈಬರ್ ಭದ್ರತಾ ಆಪತ್ತಿನ ಕುರಿತಾದ ಆರ್. ಬಿ. ಐ. ಹಾಗೂ ಇತರೆ ನಿಯಂತ್ರಕಗಳ ಸಲಹೆಗಳನ್ನು ಪಾಲಿಸುತ್ತಾ ಬಂದಿದೆ. ಹಾಗೂ ಬ್ಯಾಂಕಿನ ಮಾಹಿತಿ ಭದ್ರತಾ ಆಂತರಿಕ ಸಮಿತಿಯು ನಿರಂತರವಾಗಿ ಬ್ಯಾಂಕಿನ ಮಾಹಿತಿ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸುತ್ತದೆ ಹಾಗೂ ಮಾಹಿತಿ ಭದ್ರತಾ ಕಾರ್ಯಕ್ರಮಗಳ ಅನುಷ್ಠಾನವನ್ನು ನೋಡಿಕೊಳ್ಳುತ್ತದೆ.

ಬ್ಯಾಂಕಿನ ಮಾಹಿತಿಗಳನ್ನು ಕಾಪಾಡಲು ಬ್ಯಾಂಕ್ ಬಳಸುವ ನೀತಿಗಳನ್ನು ನಿರೂಪಿಸಲು ಹಾಗೂ ಕಾರ್ಯಗತಗೊಳಿಸುವುದರ ಜೊತೆಗೆ ಬ್ಯಾಂಕಿನ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಹೊಸ ವ್ಯವಸ್ಥೆಗಳ ಅನುಷ್ಠಾನದ ವಿಷಯದಲ್ಲಿ ಕಂಡು ಬರುವ ಭದ್ರತಾ ವಿಚಾರವನ್ನು ನೋಡಿಕೊಳ್ಳಲು ನಿಮ್ಮ ಬ್ಯಾಂಕ್ ಮುಖ್ಯ ಭದ್ರತಾ ಮಾಹಿತಿ ಅಧಿಕಾರಿಯನ್ನು ನೇಮಿಸಿದೆ.

ವರದಿ ವರ್ಷದಲ್ಲಿ ತನ್ನ ಆಂತರಿಕ ಸೈಬರ್ ಕ್ಷಮತೆಯನ್ನು ಸದೃಢಗೊಳಿಸಲು IDRBT ಆಯೋಜಿಸುವ ಸೈಬರ್ ಭದ್ರತಾ ಡ್ರಿಲ್ ಗಳಲ್ಲಿ ಬ್ಯಾಂಕ್ ಸಕ್ರಿಯವಾಗಿ ಭಾಗವಹಿಸಿದೆ.

## ಬಡ್ಡಿದರ ಆಪತ್ತು

ಬಡ್ಡಿದರಗಳ ಏರಿಳಿತದಿಂದಾಗಿ ಸ್ವತ್ತು ಅಥವಾ ಬಾಧ್ಯತೆಗಳ ಆರ್ಥಿಕ ಮೌಲ್ಯವು (ಅಥವಾ ಒಳಹರಿವು/ ಹೊರಹರಿವು) ಬದಲಾಗುವುದರಿಂದ ಈ ಆಪತ್ತು ಉದ್ಭವಿಸುತ್ತದೆ.

ಬ್ಯಾಂಕಿಂಗ್ ಪುಸ್ತಕದಲ್ಲಿ ಬಡ್ಡಿದರ ಆಪತ್ತು(IRRBB): ಈ ಆಪತ್ತನ್ನು ಎರಡು ದೃಷ್ಟಿಕೋನದಲ್ಲಿ ವಿಶ್ಲೇಷಿಸಲಾಗುತ್ತದೆ - 'ಗಳಿಕೆ ದೃಷ್ಟಿಕೋನ' ಮತ್ತು 'ಆರ್ಥಿಕ ಮೌಲ್ಯ ದೃಷ್ಟಿಕೋನ'. ಮೊದಲನೆಯದನ್ನು ಸಾಂಪ್ರದಾಯಿಕ ಅಂತರ ವಿಶ್ಲೇಷಣೆಯ (ಟ್ರೆಡೀಶನಲ್ ಗ್ಯಾಪ್ ಅನ್ಯಾಲಿಸಿಸ್) (TDA) ಅಡಿಯಲ್ಲಿ ಗಳಿಕೆಯಲ್ಲಾಗಬಹುದಾದ ಆಪತ್ತನ್ನು (ಅರ್ನಿಂಗ್ಸ್-ಅಟ್-ರಿಸ್ಕ್)(EaR) ಬಳಸಿಕೊಂಡು ಲೆಕ್ಕಹಾಕಿದರೆ ಎರಡನೆಯದನ್ನು ಕಾಲಾವಧಿ ಅಂತರ ವಿಶ್ಲೇಷಣೆಯ (ಡ್ಯೂರೇಶನ್ ಗ್ಯಾಪ್ ಅನ್ಯಾಲಿಸಿಸ್) (DGA) ಅಡಿಯಲ್ಲಿ ಬದಲಾಗುವ ಷೇರು ಮಾರುಕಟ್ಟೆ ಮೌಲ್ಯವನ್ನು (ಮಾರ್ಕೆಟ್ ವ್ಯಾಲ್ಯೂ ಆಫ್ ಈಕ್ವಿಟೀ)(MVE)ಬಳಸಿ ಲೆಕ್ಕ ಹಾಕಲಾಗುತ್ತದೆ.

## ಗಳಿಕೆಯಲ್ಲಾಗಬಹುದಾದ ಆಪತ್ತು (ಅರ್ನಿಂಗ್ಸ್- ಅಟ್ -ರಿಸ್ಕ್) (EaR) ಕುರಿತ ನೀತಿ:

ಕೆ. ಬಿ. ಎಲ್. ನಲ್ಲಿ, ಒಂದು ವರ್ಷದ ತನಕ ಪರಿಪಕ್ವ / ಪುನರ್ಮೌಲ್ಯಗೊಳ್ಳುವ ಎಲ್ಲ ದರ ಸಂಬಂಧಿ ಸೂಕ್ಷ್ಮತೆಯನ್ನು ಹೊಂದಿರುವಸ್ವತ್ತುಗಳು ಹಾಗೂ ಬಾಧ್ಯತೆಗಳನ್ನು ಸಾಂಪ್ರದಾಯಿಕ ಅಂತರ ವಿಶ್ಲೇಷಣೆಯ (ಟ್ರೆಡೀಶನಲ್ ಗ್ಯಾಪ್ ಅನ್ಯಾಲಿಸಿಸ್) ಅಡಿಯಲ್ಲಿ ವರ್ಗೀಕರಿಸಲಾಗಿದೆ ಹಾಗೂ ಪ್ರತಿಯೊಂದು ಕಾಲಾವಧಿಯಲ್ಲಿ ಹಾಗೂ ಪ್ರತಿಯೊಂದು ಉತ್ಪನ್ನ/ಸೇವೆಗಳ ಮಟ್ಟದಲ್ಲಿ ಸರಾಸರಿ ಬಡ್ಡಿದರಗಳ ಮೇಲೆ ಹಲವು ಏರಿಳಿತಗಳನ್ನು ಅನ್ವಯಿಸುವ ಮೂಲಕ EaR ವಿಶ್ಲೇಷಣೆಯನ್ನು ಮಾಡಲಾಗುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿ NII ಹಾಗೂ NIM ಗಳಲ್ಲಿನ ಬದಲಾವಣೆಗಳಿಂದ EaR ಅನ್ನು ಅಳತೆ ಮಾಡಲಾಗುತ್ತದೆ.

## ಬಾಹ್ಯ ಮಾನದಂಡದ ಆಧಾರಿತ ಸಾಲ ನೀಡಿಕೆ:

ಕಾಲಕಾಲಕ್ಕೆ ಏರಿಳಿತಗೊಳ್ಳುವ ಬಡ್ಡಿದರ(floating rate) ವನ್ನು ಹೊಂದಿರುವ ಎಲ್ಲ ವೈಯಕ್ತಿಕ ಅಥವಾ ರೀಟೇಲ್ (ಗೃಹ, ವಾಹನ ಇತ್ಯಾದಿ) ಹಾಗೂ ಕಿರು, ಮಾಧ್ಯಮ ಕೈಗಾರಿಕಾ ಸಾಲಗಳನ್ನು ಅಕ್ಟೋಬರ್ 1, 2019 ರಿಂದ ಕಡ್ಡಾಯವಾಗಿ ಬಾಹ್ಯ ಮಾನದಂಡಕ್ಕೆ ಜೋಡಿಸಬೇಕೆಂದು ಆರ್.ಬಿ.ಐ. ಆದೇಶಿಸಿದೆ. ಇಂತಹ ಬಾಹ್ಯ ಮಾನದಂಡಕ್ಕೆ ಜೋಡಣೆಯಾಗಿರುವ ಸಾಲಗಳನ್ನು ಬ್ಯಾಂಕುಗಳು ಇತರ ಸಾಲಗಾರರಿಗೆ ಕೂಡ ನೀಡಬಹುದು. ಬ್ಯಾಂಕುಗಳು ಸಾಲಗಳನ್ನು ಆರ್. ಬಿ. ಐ ಯ ರೆಪೋ ರೇಟ್ ಗೆ / ಭಾರತೀಯ ಸರ್ಕಾರದ 3 ತಿಂಗಳ ಅಥವಾ 6 ತಿಂಗಳ ಕರಾರುಪತ್ರದ (ಟ್ರೆಷರೀ ಬಿಲ್) ಬಡ್ಡಿದರಕ್ಕೆ ಅಥವಾ ಭಾರತ ವಿತ್ತೀಯ ಮಾನದಂಡ ಸಂಸ್ಥೆಯು(Benchmarks India Pvt Ltd) ಪ್ರಕಟಿಸುವ ಇತರ ಯಾವುದೇ ಮಾರುಕಟ್ಟೆ ಬಡ್ಡಿದರಕ್ಕೆ ಜೋಡಿಸಬಹುದಾಗಿದೆ. ಬಾಹ್ಯ ಮಾನದಂಡದ ಮೇಲಿನ ಸ್ಪ್ರೆಡ್ ನ್ನು ಬ್ಯಾಂಕುಗಳು ಸ್ವತಃ ನಿರ್ಧರಿಸಬಹುದು, ಆದರೆ ಸಾಲಗಾರನ ಸಾಲದ ಆಪತ್ತು ಗಣನೀಯವಾಗಿ ಬದಲಾವಣೆಯಾದರೆ ಮಾತ್ರ ಸಾಲಗಳಿಗೆ ಅನ್ವಯಿಸುವ ಆಪತ್ತಿನ ಪ್ರೀಮಿಯಮ್ ಅನ್ನು ಬದಲಾಯಿಸಬಹುದು. ನಿರ್ವಹಣಾ ವೆಚ್ಚ ಸೇರಿದಂತೆ ಹರವಿನ (ಸ್ಪ್ರೆಡ್) ಇತರೆ ಅಂಗಗಳನ್ನು 3 ವರ್ಷಕ್ಕೆ ಒಂದು ಬಾರಿಯಂತೆ ಮತ್ತು ಬಡ್ಡಿದರವನ್ನು ಕನಿಷ್ಟ ಪಕ್ಷ 3 ತಿಂಗಳಿಗೆ ಒಮ್ಮೆಯಂತೆ ಬದಲಾಯಿಸಲು ಅವಕಾಶವಿರುತ್ತದೆ. ಈ ನಡೆಯು ವಿತ್ತೀಯ ನೀತಿಯ ದರವನ್ನು ಸಾಲಗಾರರಿಗೆ ವೇಗವಾಗಿ ಪ್ರಸಾರವಾಗುವಂತೆ ಮಾಡುವ ಉದ್ದೇಶ ಹೊಂದಿದೆ.

## ಲೀವರೇಜ್ ಅನುಪಾತದ ಮೇಲಿನ ಬೇಸಲ್ ||| ಮಾನದಂಡಗಳು (Basel III Standards on Leverage Ratio (LR))

ಅತಿಯಾದ ಲೀವರೇಜ್ ಅನ್ನು ನಿಯಂತ್ರಿಸಲು ಹಾಗೂ ವಿತ್ತೀಯ ಸ್ಥಿರತೆಯನ್ನು ಕಾಪಾಡಲು ಆರ್. ಬಿ. ಐ. ಭಾರತದಲ್ಲಿರುವ ಎಲ್ಲ ಬ್ಯಾಂಕ್ ಗಳಿಗೆ ಬೇಸಲ್ ||| ನಿಯಮಗಳ ಅಡಿಯಲ್ಲಿ ಕನಿಷ್ಠ ಲೀವರೇಜ್ ಅನುಪಾತವನ್ನು ನಿಗದಿಪಡಿಸಿದೆ. ಆ ಪ್ರಕಾರ ಪ್ರತೀ ತ್ರೈಮಾಸಿಕದ ಕೊನೆಯಲ್ಲಿ ಬ್ಯಾಂಕುಗಳು ಹೊಂದಿರುವ ಬಂಡವಾಳ ಹಾಗೂ ಅನುಮೋದಿಸಲಾದ ಮಿತಿಗಳೆರಡನ್ನೂ ಲೀವರೇಜ್ ಅನುಪಾತದ ಜೊತೆಯಲ್ಲಿ ಪ್ರಕಟಗೊಳಿಸಬೇಕಿದೆ. ಅಂತೆಯೇ, ಬ್ಯಾಂಕುಗಳು ಕನಿಷ್ಠ ಅವಶ್ಯವಾದ ಲೀವರೇಜ್ ಅನುಪಾತವನ್ನು ಎಲ್ಲ ಕಾಲದಲ್ಲೂ ಕಾಪಾಡಿಕೊಳ್ಳಬೇಕು. 31 ಮಾರ್ಚ್, 2020 ರಂದು ಕಾಯಿದೆಯ ಕನಿಷ್ಟ ಅವಶ್ಯಕತೆಯಾದ 3.5 ಶೇಕಡಕ್ಕೆ ಹೋಲಿಸಿದರೆ ನಿಮ್ಮ ಬ್ಯಾಂಕಿನ ಲೀವರೇಜ್ ಅನುಪಾತ ಶೇ. 6.23 ಇತ್ತು.

## ಬಂಡವಾಳದ ಸಮರ್ಪಕತೆ

ಬೇಸಲ್ || ನಿಯಮಗಳ ಅಂಗ-2 ರ ಅಡಿಯಲ್ಲಿ, ಒಂದು ಬ್ಯಾಂಕಿನ ಪ್ರಸ್ತುತ ಬಾಧ್ಯತೆಗಳ ಹಾಗೂ ಅದರ ಸ್ವತ್ತುಗಳ ಮೇಲಿನ ಆಪತ್ತಿಗೆ ಅನುಗುಣವಾಗಿ ಸಮರ್ಪಕವಾದ ಮಟ್ಟದ ಬಂಡವಾಳದ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳಲು ಆಂತರಿಕ ಬಂಡವಾಳದ ಸಮರ್ಪಕತೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆಯನ್ನು ಪರಿಚಯಿಸಲಾಯಿತು. ಬ್ಯಾಂಕ್ ತನ್ನ ಚಟುವಟಿಕೆಗಳನ್ನು ಆಧರಿಸಲು ಸ್ವತ್ತುಗಳ ಮೌಲ್ಯದಲ್ಲಾಗುವ ಯಾವುದೇ ಪ್ರತಿಕೂಲ ಪರಿಣಾಮವನ್ನು ಸಮರ್ಥವಾಗಿ ಎದುರಿಸುವಲ್ಲಿ ಸಮರ್ಪಕವಾದ ಮಟ್ಟದ ಬಂಡವಾಳ ಅತ್ಯಗತ್ಯ.

ಬ್ಯಾಂಕಿನ ಕಾರ್ಯತಂತ್ರದ ಉದ್ದೇಶ, ವ್ಯವಹಾರದ ಲಾಭದಾಯಕತೆ ಹಾಗೂ ಬೆಳವಣಿಗೆಯ ಅವಕಾಶಗಳನ್ನು, ಭವಿಷ್ಯದ ವ್ಯವಹಾರದ ಸಮಗ್ರ ದೃಷ್ಟಿಕೋನವನ್ನು ಒಳಗೊಂಡಂತೆ ಬ್ಯಾಂಕಿನ ಬಂಡವಾಳದ ಅಗತ್ಯತೆಯನ್ನು ಲೆಕ್ಕಹಾಕಲಾಗುತ್ತದೆ. ಈ ಯೋಜಿಸಿದ ವ್ಯವಹಾರದ ಬೆಳವಣಿಗೆಗೆ ಸಾಲದ, ನಿರ್ವಹಣೆಯ ಹಾಗೂ ಮಾರುಕಟ್ಟೆಯ ಆಪತ್ತನ್ನು ಒಳಗೊಂಡಂತೆ ನಿಯಮಾನುಸಾರವಾಗಿ ಬೇಕಾದ ಕನಿಷ್ಟ ಬಂಡವಾಳದ ಮಟ್ಟವನ್ನು ಕಾಯ್ದುಕೊಳ್ಳುವುದಷ್ಟೇ ಅಲ್ಲದೆ, ಅಭಿವೃದ್ಧಿಗೆ ಅಗತ್ಯವಾಗಿ ಬೇಕಾಗಿರುವ ಬಂಡವಾಳ ದೊರೆಯುವಂತೆ ನೋಡಿಕೊಳ್ಳುವುದು ಕೂಡ ಬಂಡವಾಳ ಸಮರ್ಪಕತೆಯ ಒಂದು ಭಾಗವಾಗಿದೆ. ಪರಿಣಾಮಕಾರಿಯಾದ, ತಂತ್ರಜ್ಞಾನದ ಆಧಾರಿತವಾದ ಆಪತ್ತಿನ ನಿರ್ವಹಣಾ ವ್ಯವಸ್ಥೆಗಳನ್ನು ಹೊಂದಿರುವ ಒಂದು ಸದೃಢ ಆಪತ್ತು ನಿರ್ವಹಣಾ ಸಂಪ್ರದಾಯವು ಆಪತ್ತುಗಳ ಬಗೆಗಿನ ಅರಿವನ್ನು ವ್ಯವಹಾರದಲ್ಲಿ ಬೆಸೆದಿದೆ.

## ಬೇಸಲ್ ||| ಬಂಡವಾಳದ ಸಮರ್ಪಕತೆಯ ಕನಿಷ್ಟ ಅನುಪಾತದ ಅವಶ್ಯಕತೆ

ಟಿಯರ್ 1 (Tier-1) ಹಾಗೂ ಟಿಯರ್ 2 (Tier-2) ಬಂಡವಾಳವನ್ನು ಒಟ್ಟುಸೇರಿಸಿ ಅದನ್ನು ಆಪತ್ತಿಗೆ ಹೊಂದಿಸಿದ ಸ್ವತ್ತುಗಳಿಂದ ಭಾಗಿಸುವ ಮೂಲಕ ಬಂಡವಾಳ ಸಮರ್ಪಕತೆಯ ಅನುಪಾತವನ್ನು ಅಳೆಯಲಾಗುತ್ತದೆ. ಬ್ಯಾಂಕಿನ ಮೂಲ ಬಂಡವಾಳಗಳಾದ ಷೇರು ಬಂಡವಾಳ, ಮೀಸಲುಗಳು ಹಾಗೂ ಹೆಚ್ಚುವರಿಗಳು ಹಾಗೂ ಷೇರು ಪ್ರೀಮಿಯಮ್ ಮೊತ್ತ (ಈಕ್ವಿಟೀ ಕ್ಯಾಪಿಟಲ್, ರಿಸರ್ವ್ಸ್ & ಸರ್ಪ್ಲಸ್ ಹಾಗೂ ಶೇರ್ ಪ್ರೀಮಿಯಮ್) ಮುಂತಾದವು ಟಿಯರ್-1 ಬಂಡವಾಳ ಎಂಬುದಾಗಿ ವರ್ಗೀಕರಿಸಲಾಗಿದೆ. ಇಂತಹ ಬಂಡವಾಳಗಳು ಬ್ಯಾಂಕ್ ತನ್ನ ಕಾರ್ಯಚಟುವಟಿಕೆಗಳನ್ನು ನಿಲ್ಲಿಸುವ ಅಗತ್ಯ ಬಾರದಂತೆ ನಷ್ಟವನ್ನು ಭರಿಸುವ ಸಾಮರ್ಥ್ಯ ಹೊಂದಿವೆ. ಮಾರ್ಚ್ 31, 2020 ರಂದು, ಬೇಸೆಲ್ ||| ಅಡಿಯಲ್ಲಿ, ಬ್ಯಾಂಕುಗಳು ಕನಿಷ್ಠ ಶೇಕಡಾ 10.875 ರಷ್ಟು ಟಿಯರ್ 1 ಹಾಗೂ ಟಿಯರ್ 2 ಬಂಡವಾಳದ ಸಮರ್ಪಕತೆಯ ಅನುಪಾತವನ್ನು (ಕ್ಯಾಪಿಟಲ್ ಕನ್ಸರ್ವೇಶನ್ ಬಫರ್ ಸೇರಿದಂತೆ) ಹೊಂದಿರಬೇಕು. ಮಾರ್ಚ್ 31, 2020 ರಂದು, ಬೇಸೆಲ್ ||| ಅಡಿಯಲ್ಲಿ, ಬ್ಯಾಂಕುಗಳು ಕನಿಷ್ಟ ಪಕ್ಷ ಶೇಕಡಾ 10.875 ರಷ್ಟು ಟಿಯರ್ 1 ಹಾಗೂ ಟಿಯರ್ 2 ಬಂಡವಾಳದ ಸಮರ್ಪಕತೆಯ ಅನುಪಾತವನ್ನು (ಕ್ಯಾಪಿಟಲ್ ಕನ್ಸರ್ವೇಶನ್ ಬಫರ್ ಸೇರಿದಂತೆ) ಹೊಂದಿರಬೇಕು. ಮಾರ್ಚ್ 31, 2020 ಕ್ಕೆ ನಿಮ್ಮ ಬ್ಯಾಂಕಿನ CRAR ಶೇ. 12.66ರ ಆರೋಗ್ಯಕರ ಮಟ್ಟದಲ್ಲಿದೆ.

## ಬಂಡವಾಳದ ಸಮರ್ಪಕತೆಯ ಪರಿಶೀಲನಾ ಪ್ರಕ್ರಿಯೆ (ICAAP)

ಆಪತ್ತಿಗೆ ಅನುಗುಣವಾಗಿ ತನ್ನ ಬಂಡವಾಳದ ಸಮರ್ಪಕತೆಯನ್ನು ಅಳೆಯಲು ಬ್ಯಾಂಕ್ ಬೇಸಲ್ ನಿಯಮಗಳಿಗೆ ಅನುಸಾರವಾಗಿ ಬಂಡವಾಳದ ಸಮರ್ಪಕತೆಯ ಪರಿಶೀಲನಾ ಪ್ರಕ್ರಿಯೆ (ICAAP)ಯ ಅಡಿಯಲ್ಲಿ ಒಂದು ನಿಯಮಾವಳಿಯನ್ನು ಜಾರಿಗೊಳಿಸಿದೆ. ಬಂಡವಾಳ ಹಾಗೂ ಗಳಿಕೆಗಳ ಮೇಲೆ ಮಾರುಕಟ್ಟೆಯ ಪ್ರತಿಕೂಲ ಏರಿಳಿತಗಳಿಂದಾಗಿ ಆಗಬಹುದಾದ ಪರಿಣಾಮವನ್ನು ಇನ್ನಷ್ಟು ಚೆನ್ನಾಗಿ ಅರಿತುಕೊಳ್ಳಲು ಒತ್ತಡ ಪರೀಕ್ಷೆಯ ಚೌಕಟ್ಟನ್ನು ರೂಪಿಸಲಾಗಿದೆ. ಆಪತ್ತುಗಳನ್ನು ಎದುರಿಸುವಲ್ಲಿ ಬ್ಯಾಂಕಿನ ಕ್ಷಮತೆ ಹಾಗೂ ಯೋಜಿಸಿದ ವ್ಯವಹಾರದ ಬೆಳವಣಿಗೆಗೆ ಬೇಕಾದ

ಬಂಡವಾಳದ ಸಮರ್ಪಕತೆಯನ್ನು ಅಳತೆ ಮಾಡಲು ICAAP ಹಾಗೂ ಒತ್ತಡ ಪರೀಕ್ಷೆಯ ಫಲಿತಾಂಶಗಳನ್ನು ಕಾಲಕಾಲಕ್ಕೆ ಪರಿಶೀಲಿಸಲಾಗುವುದು. ನಿಮ್ಮ ಬ್ಯಾಂಕಿನ ಆಪತ್ತುಗಳನ್ನು ತಾಳುವ ದಕ್ಷತೆ, ವ್ಯವಹಾರದ ಬೆಳವಣಿಗೆ ಹಾಗೂ ಬಂಡವಾಳದ ಸಮರ್ಪಕತೆಗಳನ್ನು 'ಆಪತ್ತು ಹಾಗೂ ಬಂಡವಾಳ ನಿರ್ವಹಣಾ ಸಮಿತಿ ಮಂಡಳಿ'ಯು (ರಿಸ್ಕ್ ಎಂಡ್ ಕ್ಯಾಪಿಟಲ್ ಮ್ಯಾನೇಜ್ಮೆಂಟ್ ಕಮಿಟೀ-RCMC) ನಿಯಮಿತವಾಗಿ ಪರಿಶೀಲಿಸುತ್ತದೆ.

### ಅನುಸರಣಾ ಆಪತ್ತು

ವಿವೇಕಯುತ ಮಾರ್ಗಸೂಚಿಗಳನ್ನು ಬ್ಯಾಂಕ್ ಅಥವಾ ಅದರ ಸೇವಾದಾರರು ಸಮರ್ಪಕವಾಗಿ ಪಾಲಿಸದಿದ್ದಲ್ಲಿ ಅನುಸರಣಾ ಆಪತ್ತಿನ ಜೊತೆಗೆ ನಿಯಂತ್ರಕರಿಂದ ದಂಡ/ಶಿಸ್ತುಕ್ರಮಗಳನ್ನು ಎದುರಿಸಬೇಕಾಗಬಹುದು. ಕೆವೈಸಿ/ಎಎಂಎಲ್ ವಿಷಯಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ಅಥವಾ ಶಾಸನಬದ್ಧ ಅವಶ್ಯಕತೆಗಳನ್ನು ಅನುಸರಿಸಲು ವಿಫಲವಾದ ಪಕ್ಷದಲ್ಲಿ ಆರ್‌ಬಿಐ ಬ್ಯಾಂಕುಗಳಿಗೆ ದಂಡ ವಿಧಿಸುತ್ತದೆ.

### ಆಂತರಿಕ ನಿಯಂತ್ರಣ ವ್ಯವಸ್ಥೆಗಳು - ಸಮರ್ಪಕತೆ ಮತ್ತು ಅನುಸರಣೆ

ಬ್ಯಾಂಕಿನ ಗಾತ್ರ, ಭೌಗೋಳಿಕ ವ್ಯಾಪ್ತಿ ಹಾಗೂ ಚಟುವಟಿಕೆಗಳ ಸಂಕೀರ್ಣತೆಗೆ ಹೊಂದಿಕೊಳ್ಳುವಂತೆ ನಿಮ್ಮ ಬ್ಯಾಂಕ್ ಒಂದು ಪರಿಣಾಮಕಾರಿ ಹಾಗೂ ಸದೃಢ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಿದೆ. ಉನ್ನತ ಮಟ್ಟದಲ್ಲಿ, ಆಂತರಿಕ ನಿಯಂತ್ರಣ ಅಂಶಗಳ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ನಿರ್ದೇಶಕರ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಗೆ ವಹಿಸಲಾಗಿದೆ. ಇದು ಆಂತರಿಕ ನಿಯಂತ್ರಣ ಅಂಶಗಳ ಬಗ್ಗೆ ಒಟ್ಟಾರೆ ದೃಷ್ಟಿಕೋನವನ್ನು ತೆಗೆದುಕೊಂಡು ಎಲ್ಲಾ ಸಂಬಂಧಿತ ನೀತಿ ಮಾರ್ಗಸೂಚಿಗಳನ್ನು ರೂಪಿಸುತ್ತದೆ.

ಹಲವಾರು ನಿಯಂತ್ರಕರು ಮತ್ತು ನಿರ್ದೇಶಕರ ಮಂಡಳಿಯು ನೀಡಿರುವ ಆದೇಶಗಳ ಪಾಲನೆಗಾಗಿ ಮತ್ತು ಬ್ಯಾಂಕಿನ ಆಂತರಿಕ ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬ್ಯಾಂಕ್ ಮುಖ್ಯ ಅನುಸರಣಾ ಅಧಿಕಾರಿಯನ್ನು ಹೊಂದಿರುವ ಒಂದು ಸ್ವತಂತ್ರ ಪರಿಪಾಲನಾ ವಿಭಾಗವನ್ನು ರೂಪಿಸಿದೆ.

ಹಲವಾರು ಆಪತ್ತುಗಳನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುವ ಆಂತರಿಕ ಲೆಕ್ಕಪರಿಶೋಧಕರ ರಿಸ್ಕ್ ಬೇಸ್ಡ್ ಇಂಟರ್ನಲ್ ಆಡಿಟ್ (RBIA) ಅನ್ನು ನಿಮ್ಮ ಬ್ಯಾಂಕ್ ಪರಿಚಯಿಸಿದೆ. ಇದರಲ್ಲಿ ಸಾಂಪ್ರದಾಯಿಕ ಆಪತ್ತುಗಳ ನಿರ್ವಹಣೆ ಹಾಗೂ ನಿಯಂತ್ರಣದ ವಿಧಾನಗಳಾದ ವಹಿವಾಟು ಪರೀಕ್ಷೆ(ಟ್ರ್ಯಾನ್ಸ್ಯಾಕ್ಶನ್ ಟೆಸ್ಟಿಂಗ್) ಜೊತೆಗೆ, ಪ್ರಸ್ತುತ ಆಪತ್ತುಗಳನ್ನು ಕಡಮೆ ಮಾಡುವುದಲ್ಲದೇ ಭವಿಷ್ಯದ ಆಪತ್ತುಗಳನ್ನು ಕೂಡ ಕಡಿಮೆ ಮಾಡುವ ಸಲಹೆಗಳನ್ನು ನೀಡುತ್ತದೆ.

RBIAಯ ಅಡಿಯಲ್ಲಿ ಆಪತ್ತಿನ ಮೌಲ್ಯಮಾಪನ ಹಲವಾರು ಮಟ್ಟಗಳಲ್ಲಿ (ಕಾರ್ಪೊರೇಟ್ ಹಾಗೂ ಶಾಖೆ, ಪೋರ್ಟ್‌ಫೋಲೀಯೋ ಹಾಗೂ ವೈಯಕ್ತಿಕ ವ್ಯವಹಾರಗಳು ಇತ್ಯಾದಿ) ಆಪತ್ತುಗಳನ್ನು ಹುಡುಕಲು, ಲೆಕ್ಕ ಹಾಕಲು, ನಿಯಂತ್ರಿಸಲು ಹಾಗೂ ಕಡಿಮೆ ಮಾಡಲು ಬಳಸಲಾಗುತ್ತದೆ. ಬ್ಯಾಂಕಿನ ವ್ಯವಹಾರಗಳ ಗಾತ್ರ ಹಾಗೂ ಸಂಕೀರ್ಣತೆಯನ್ನು ಗಮನದಲ್ಲಿಟ್ಟುಕೊಂಡು ನಿರ್ದೇಶಕರ ಮಂಡಳಿಯ ಲೆಕ್ಕ ಪರಿಶೋಧಕರ ಸಮಿತಿಯ ಅನುಮತಿಯ ಮೇರೆಗೆ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು RBIA ವಿಧಾನವನ್ನು ರೂಪಿಸಿದೆ. ಆಪತ್ತಿನ ಮೌಲ್ಯಮಾಪನ ಪ್ರಕ್ರಿಯೆಯು ಬ್ಯಾಂಕ್ ಕೈಗೊಂಡ ಹಲವಾರು ಚಟುವಟಿಕೆಗಳಲ್ಲಿ ಅಂತರ್ಗತವಾಗಿರುವ ಆಪತ್ತುಗಳನ್ನು ಗುರುತಿಸುವುದು ಮತ್ತು ಅವುಗಳನ್ನು ನಿಯಂತ್ರಿಸುವುದು ಒಳಗೊಂಡಿದೆ. ಜೊತೆಗೆ, ನಿಯಂತ್ರಣ ವ್ಯವಸ್ಥೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುತ್ತದೆ.

ಆಂತರಿಕ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆ ಹಾಗೂ ಪರಿಣಾಮಕಾರಿತ್ವದ ವಿಚಾರದಲ್ಲಿ ನಿರಂತರ ಭರವಸೆಯನ್ನು ಹೊಂದಲು ಬ್ಯಾಂಕ್ ನಿಯಮಿತವಾಗಿ ಎಲ್ಲ ಶಾಖೆಗಳಲ್ಲೂ ಹಾಗೂ ಕಚೇರಿಗಳಲ್ಲೂ ನಿಯಮಿತ ತಪಾಸಣೆ ಮತ್ತು ಮಾಹಿತಿ ವ್ಯವಸ್ಥೆಯ (IS) ಪರಿಶೋಧನೆಯನ್ನು ಕೈಗೊಳ್ಳುತ್ತಿದೆ. ಅಲ್ಲದೆ ನಿಮ್ಮ ಬ್ಯಾಂಕ್ ಸಹಗಾಮಿ ಲೆಕ್ಕಪರಿಶೋಧನಾ ನೀತಿಯ (Concurrent Audit Policy) ಅಡಿಯಲ್ಲಿ ಕೆಲವು ಆಯ್ದ ಶಾಖೆಗಳಲ್ಲಿ ಸಹಗಾಮಿ ಲೆಕ್ಕಪರಿಶೋಧನೆಯನ್ನು ಹಾಗೂ ಎಲ್ಲ ಶಾಖೆಗಳ ಕಿರು ಪರಿವೀಕ್ಷಣೆಯನ್ನು ಜರಗಿಸುತ್ತಿದೆ. ಸಹಗಾಮಿ ಲೆಕ್ಕಪರಿಶೋಧನೆಯ ವ್ಯಾಪ್ತಿಯಲ್ಲಿ, ಖಜಾನೆ ಕಾರ್ಯಗಳು ದೇಶೀಯ ಹಾಗೂ ಫಾರೆಕ್ಸ್), ಅಂತರರಾಷ್ಟ್ರೀಯ ವಿಭಾಗ, ವಿದೇಶೀ ವಿನಿಮಯ ವ್ಯವಹಾರ ಶಾಖೆಗಳು, ಕೇಂದ್ರ ಸಂಸ್ಕರಣಾ ಕೇಂದ್ರ, ಕೇಂದ್ರೀಕೃತ ಖಾತೆ ಪರಿಶೀಲನಾ ಕೋಶ(CAVC), ಸ್ವಿಫ್ಟ್ ಸಮನ್ವಯ, ಪ್ರಾದೇಶಿಕ ಸಾಲ ಸಂಸ್ಕರಣಾ ಕೇಂದ್ರಗಳು(RLPC), ಹಾಗೂ ಕೇಂದ್ರೀಕೃತ ಪಾವತಿ ಮತ್ತು ಸಮನ್ವಯ ಕೋಶ ಕೋಶದ ಬಾಹ್ಯ ಲೆಕ್ಕಪರಿಶೋಧನೆ ಮುಂತಾದವು ಒಳಗೊಂಡಿವೆ. ಅಲ್ಲದೆ, ಡಾಟಾ ಸೆಂಟರ್ ಹಾಗೂ ವಿಪತ್ತು ನಿರ್ವಹಣಾ ವ್ಯವಸ್ಥೆಯ ಪರಿಶೋಧನೆಯನ್ನು (IS Audit) CERT ನ ವತಿಯಿಂದ

ಜರಗಿಸಲಾಗುತ್ತಿದೆ. ಹಾಗೂ ಇತರೆ ಸಾಮಾನ್ಯ ಮಾಹಿತಿ ವ್ಯವಸ್ಥೆಯ ಪರಿಶೋಧನೆಯನ್ನು ಆಂತರಿಕ CISA ಅರ್ಹತೆ ಹೊಂದಿದ ಹಾಗೂ ISO 27001 ದರ್ಜೆಯ ಲೆಕ್ಕಪರಿಶೋಧಕರಿಂದ ಮಾಡಿಸಲಾಗುತ್ತದೆ.

ಇದರ ಹೊರತಾಗಿ, ಪರಿಣಾಮಕಾರಿಯಾಗಿ ಸಾಲದ ನಿರ್ವಹಣೆಯನ್ನು ಮಾಡಲು ಬೃಹತ್ ಸಾಲದ ಖಾತೆಗಳ ಸ್ಟಾಕ್/ಕ್ರೆಡಿಟ್ ಆಡಿಟ್ ನ್ನು ಬಾಹ್ಯ ವೃತ್ತಿಪರ ಪರಿಶೋಧಕರಿಂದ ಬ್ಯಾಂಕ್ ಮಾಡಿಸುತ್ತಿದೆ. ವಿವಿಧ ಬಗೆಯ ಆಪತ್ತುಗಳನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡಲು ಬ್ಯಾಂಕಿನ ಸಾಲದ ನಿರ್ವಹಣಾ (ಕ್ರೆಡಿಟ್ ಮಾನಿಟರಿಂಗ್ ಡಿಪಾರ್ಟ್‌ಮೆಂಟ್) ಹಾಗೂ ಆಪತ್ತು ನಿರ್ವಹಣಾ ವಿಭಾಗಗಳು (ರಿಸ್ಕ್ ಮ್ಯಾನೇಜ್ಮೆಂಟ್ ಡಿಪಾರ್ಟ್‌ಮೆಂಟ್) ಅಪಾಯದ ತಾಳುವಿಕೆ ಹಾಗೂ ಕ್ಷಮತೆಯನ್ನು ಹೆಚ್ಚಿಸುವಿಕೆಯ ಕೆಲಸವನ್ನು ಮಾಡುತ್ತಿವೆ.

ಒಟ್ಟಾರೆ ಕಾರ್ಪೋರೇಟ್ ಉದ್ದೇಶಗಳನ್ನು ಈಡೇರಿಸುವಲ್ಲಿ ಆಡಳಿತ ಮಂಡಳಿಯ ಪರಿಣಾಮಕಾರಿತ್ವವನ್ನು ಅರಿಯಲು ಬ್ಯಾಂಕಿನ ಪ್ರಧಾನ ಹಾಗೂ ಪ್ರಾದೇಶಿಕ ಕಚೇರಿಗಳಲ್ಲಿ ಮ್ಯಾನೇಜ್ಮೆಂಟ್ ಆಡಿಟ್ ಕೂಡ ನಡೆಸುತ್ತಿದೆ.

ಕಂಪೆನಿಗಳ ಕಾಯ್ದೆ 2013 ರ ಅನುಗುಣವಾಗಿ, ಬ್ಯಾಂಕಿನ ಪ್ರತಿಯೊಂದು ಪ್ರಕ್ರಿಯೆಗೆ ಸಂಬಂಧಿಸಿದ ಆಪತ್ತು ಮತ್ತು ನಿಯಂತ್ರಣಗಳನ್ನು ದಾಖಲಿಸುವ ಮೂಲಕ ಬ್ಯಾಂಕ್ ಆಂತರಿಕ ವಿತ್ತೀಯ ನಿಯಂತ್ರಣಗಳ ಚೌಕಟ್ಟನ್ನು ರೂಪಿಸಿದೆ (Internal Financial Control Framework) ಮತ್ತು ಹಣಕಾಸು ವರದಿ ಮಾಡುವಿಕೆಯ ಆಂತರಿಕ ವಿತ್ತೀಯ ನಿಯಂತ್ರಣ(ICFR) ಗಳ ಪರೀಕ್ಷೆಯನ್ನು ವಾರ್ಷಿಕವಾಗಿ ಮಾಡಲಾಗುತ್ತದೆ.

ಬ್ಯಾಂಕಿನ ಹಿತಾಸಕ್ತಿಯನ್ನು ಕಾಪಾಡಲು ನಿಮ್ಮ ಬ್ಯಾಂಕ್ 'ಡಿಫೆನ್ಸ್ ಇನ್ ಡೆಪ್ತ್' ಎನ್ನುವ ಭದ್ರತಾ ವ್ಯವಸ್ಥೆಯನ್ನು SIEM ನ ಸಹಯೋಗದಲ್ಲಿ ಭದ್ರತಾ ಕಾರ್ಯಾಚರಣೆ ಕೇಂದ್ರದ (ಸೆಕ್ಯೂರಿಟೀ ಆಪರೇಶನ್ ಸೆಂಟರ್) (SOC) ನಿರಂತರ ನಿಯಂತ್ರಣದಿಂದ ಅನುಷ್ಠಾನಗೊಳಿಸುತ್ತಿದೆ. ಡಾಟಾ ಸೆಂಟರ್, ನಿಯರ್ ಲೈನ್ ಸೈಟ್ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯ ವ್ಯವಸ್ಥೆಗಳಿಗೆ ಹಾಗೂ ಪ್ರಕ್ರಿಯೆಗಳಿಗೆ ಬ್ಯಾಂಕ್ ISO 27001:2013 ಪ್ರಮಾಣಪತ್ರವನ್ನು ಹೊಂದಿದೆ.

ಕ್ರಮಬದ್ಧ ಹಾಗೂ ಪರಿಣಾಮಕಾರಿಯಾದ ವ್ಯವಹಾರವನ್ನು ನಡೆಸಲು, ತನ್ನ ಸ್ವತ್ತುಗಳನ್ನು ಕಾಪಾಡಿಕೊಳ್ಳಲು, ವಂಚನೆ ಹಾಗೂ ದೋಷಗಳನ್ನು ತಡೆಗಟ್ಟಲು ಹಾಗೂ ಕಂಡುಹಿಡಿಯಲು, ಲೆಕ್ಕಪತ್ರ ದಾಖಲೆಗಳ ನಿಖರತೆ ಹಾಗೂ ಸಂಪೂರ್ಣತೆಗೆ ಹಾಗೂ ಕಾಲಕಾಲಕ್ಕೆ ವಿಶ್ವಾಸಾರ್ಹ ಹಾಗೂ ಪಾರದರ್ಶಕ ವಿತ್ತೀಯ ಮಾಹಿತಿಗಳನ್ನು ತಯಾರಿಸಲು ನಿಮ್ಮ ಬ್ಯಾಂಕ್ ಸಮರ್ಪಕ ನೀತಿ ನಿಯಮಗಳನ್ನು ರೂಪಿಸಿದೆ. ಆಂತರಿಕ ವಿತ್ತೀಯ ನಿಯಂತ್ರಣಗಳ ಪ್ರಯೋಜನವನ್ನು ಹಾಗೂ ಸಮರ್ಪಕತೆಯನ್ನು ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯು ಕಾಲಕಾಲಕ್ಕೆ ಮೌಲ್ಯಮಾಪನ ಮಾಡುತ್ತದೆ ಹಾಗೂ ಅಗತ್ಯ ಬಿದ್ದಲ್ಲಿ ಅವುಗಳನ್ನು ಇನ್ನಷ್ಟು ಸದೃಢಗೊಳಿಸಲು ಸಲಹೆಗಳನ್ನು ನೀಡುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನಾ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯ ಮೇಲ್ವಿಚಾರಣೆಯಲ್ಲಿ ಸ್ವತಂತ್ರವಾಗಿ ಕಾರ್ಯ ನಿರ್ಯವಹಿಸುತ್ತದೆ.

### ಅಪಾಯ ಆಧಾರಿತ ಮೇಲ್ವಿಚಾರಣೆ (RBS)

ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಪ್ರಕ್ರಿಯೆಗಳು, ಸೇವಾ ವ್ಯಾಪ್ತಿ ಮತ್ತು ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳಲ್ಲಿನ ಸಂಕೀರ್ಣತೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್, ತನ್ನ ಉನ್ನತ ಮಟ್ಟದ ನಿರ್ವಹಣಾ ಸಮಿತಿಯ ಶಿಫಾಸರುಗಳ ಅನುಸಾರವಾಗಿ, ಮೇಲ್ವಿಚಾರಣಾ ವಿಧಾನವನ್ನು 'ಆಪತ್ತು ಮತ್ತು ಬಂಡವಾಳದ ಮೌಲ್ಯಮಾಪನಕ್ಕಾಗಿನ ಮೇಲ್ವಿಚಾರಣಾ ಕಾರ್ಯಕ್ರಮ' ದ ವ್ಯಾಪ್ತಿಗೆ (ಸುಪರ್‌ವೈಸರಿ ಪ್ರೋಗ್ರಾಂ ಫಾರ್ ಅಸೆಸ್‌ಮೆಂಟ್ ಆಫ್ ರಿಸ್ಕ್ ಆಂಡ್ ಕ್ಯಾಪಿಟಲ್ -SPARC) ಒಳಪಡಿಸಿದೆ. ಇದು ಪ್ರಸ್ತುತ ಹಾಗೂ ಭವಿಷ್ಯದ ಆಪತ್ತುಗಳೆರಡನ್ನೂ ಮೌಲ್ಯಮಾಪನಗೊಳಿಸುವತ್ತ ಕೇಂದ್ರೀಕೃತವಾಗಿದೆ. ಇದರ ವ್ಯಾಪ್ತಿಯಲ್ಲಿ, ಸಮಸ್ಯೆಗಳನ್ನು ಪ್ರಾರಂಭದ ಹಂತದಲ್ಲೇ ಗುರುತಿಸುವುದು ಮತ್ತು ಕ್ಲಪ್ತ ಸಮಯದಲ್ಲಿ ಸರಿಪಡಿಸುವ ಕ್ರಮಕೈಗೊಳ್ಳುವುದು ಇತ್ಯಾದಿ ಸೇರಿವೆ. ನಿಮ್ಮ ಬ್ಯಾಂಕ್, 31ನೇ ಮಾರ್ಚ್, 2015ರಿಂದ ಮೊದಲ್ಗೊಂಡು ಆಪತ್ತು ಆಧಾರಿತ ಮೇಲ್ವಿಚಾರಣೆಯ ವ್ಯಾಪ್ತಿಗೆ ಒಳಪಟ್ಟಿದೆ. ಆರ್‌ಬಿಎಸ್‌ನಲ್ಲಿ ಕಂಡುಬಂದ ಅನೇಕ ಸಂಗತಿಗಳನ್ನು ಪಾಲಿಸಲಾಗುತ್ತಿದೆ.

### ಅನುಸರಣಾ ಕಾರ್ಯ

ಬ್ಯಾಂಕ್‌ನಲ್ಲಿನ ಅನುಸರಣಾ ಕಾರ್ಯವು ಬ್ಯಾಂಕ್‌ನ ಕಾರ್ಪೋರೇಟ್ ಆಡಳಿತ ವ್ಯವಸ್ಥೆಯ ಆಂತರಿಕ ನಿಯಂತ್ರಣ ಮತ್ತು ಆಪತ್ತು ನಿರ್ವಹಣಾ ಪ್ರಕ್ರಿಯೆಯ ಜತೆಯಲ್ಲಿನ ಪ್ರಮುಖ ಅಂಶಗಳಲ್ಲೊಂದಾಗಿದೆ. ಕಾರ್ಪೋರೇಟ್ ಆಡಳಿತ ವ್ಯವಸ್ಥೆಯ ಪ್ರಮುಖ ಅಂಶವಾಗಿ, ಆರೋಗ್ಯಕರ ಅನುಸರಣಾ ಸಂಸ್ಕೃತಿಯನ್ನು ಬ್ಯಾಂಕ್‌ನೊಳಗೆ ಉತ್ತೇಜಿಸಲು ಸಾಕಷ್ಟು ಸ್ವಾತಂತ್ರ್ಯದೊಂದಿಗೆ ಸದೃಢ ಅನುಸರಣಾ ವಿಭಾಗವನ್ನು ಬ್ಯಾಂಕ್ ಹೊಂದಿದೆ. ಎಲ್ಲಾ

ಶಾಸನಬದ್ಧ ನಿಬಂಧನೆಗಳು, ಆರ್‌ಬಿಐ ಮತ್ತು ಇತರೆ ನಿಯಂತ್ರಕಗಳ ಮಾರ್ಗಸೂಚಿಗಳು, ಸ್ಟಾಂಡರ್ಡ್‌ಗಳು ಮತ್ತು ಸಂಹಿತೆಗಳು, ಬ್ಯಾಂಕ್‌ನ ಆಂತರಿಕ ನೀತಿಗಳು ಮತ್ತು ನ್ಯಾಯಯುತ ಅಭ್ಯಾಸಗಳ ಸಂಹಿತೆಯ ಕಟ್ಟುನಿಟ್ಟಿನ ಪಾಲನೆಯನ್ನು ಬ್ಯಾಂಕ್ ಖಾತ್ರಿಗೊಳಿಸುತ್ತದೆ. ಅನುಸರಣಾ ಕಾರ್ಯವು ನಿಯಂತ್ರಕ ಮತ್ತು ಶಾಸನಬದ್ಧ ಮಾರ್ಗಸೂಚಿಗಳ ವ್ಯಾಖ್ಯಾನ/ಪ್ರಸಾರವನ್ನು ಒಳಗೊಂಡಿದೆ ಮತ್ತು ನಿಯಂತ್ರಣಗಳು ಹಾಗೂ ಕಾರ್ಯವಿಧಾನಗಳು ತಮ್ಮ ಆಪತ್ತು ನಿರ್ವಹಣೆ ಕಾರ್ಯದಲ್ಲಿ ಹಿರಿಯ ಆಡಳಿತ ಮಂಡಳಿಗೆ ಸೂಕ್ತವಾದ ಮಾಹಿತಿಯನ್ನು ನೀಡುತ್ತವೆ. ಮುಖ್ಯ ಅನುಸರಣಾ ಅಧಿಕಾರಿಯ ಮೇಲ್ವಿಚಾರಣೆಯ ಅಡಿಯಲ್ಲಿ, ಬ್ಯಾಂಕ್‌ನ ಆಪತ್ತು ಆಧಾರಿತ ಅನುಸರಣಾ ಕಾರ್ಯವು ಶಾಖೆಗಳು/ಉದ್ಯಮ ಘಟಕಗಳಾದ್ಯಂತ 'ಅನುಸರಣಾ ಪರೀಕ್ಷೆ' ಮೂಲಕ ಅನುಸರಣಾ ಗುಣಮಟ್ಟವನ್ನು ಪರಿಶೀಲಿಸುವುದರ ಜೊತೆಗೆ ಸೂಕ್ತ ಕವರೇಜ್ ಅನ್ನು ಖಾತ್ರಿಗೊಳಿಸುತ್ತದೆ. ತಾನು ಎದುರಿಸಿದ ಪ್ರಮುಖ ಅನುಸರಣಾ ಆಪತ್ತನ್ನು ಗುರುತಿಸಲು ಮತ್ತು ವಿಶ್ಲೇಷಿಸಲು ಮತ್ತು ಪರಿಣಾಮಕಾರಿಯಾಗಿ ಆಪತ್ತುಗಳನ್ನು ನಿರ್ವಹಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಬ್ಯಾಂಕ್ ವಾರ್ಷಿಕ ಅನುಸರಣಾ ಆಪತ್ತು ಮೌಲ್ಯಮಾಪನವನ್ನು ನಡೆಸುತ್ತದೆ.

### IND-AS' ಅನುಷ್ಠಾನ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದಿನಾಂಕ 11ನೇ ಫೆಬ್ರವರಿ, 2017ರಂದು ಹೊರಡಿಸಿದ ಸುತ್ತೋಲೆಯ ಮೂಲಕ ಕೊಡಮಾಡಿದ ನೀಲನಕ್ಷೆಯ ಪ್ರಕಾರ, "ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್ (Ind AS)' ಗೆ ಪರಿವರ್ತನೆಯು ಬ್ಯಾಂಕ್‌ಗಳಲ್ಲಿ 1ನೇ ಏಪ್ರಿಲ್ 2018ರ ನಂತರದಿಂದ ಆರಂಭಗೊಳ್ಳುವ ಅಕೌಂಟಿಂಗ್ ಅವಧಿಯಿಂದ ಜಾರಿಗೆ ಬಂದಿದೆ. ಆದಾಗ್ಯೂ, ಆರ್‌ಬಿಐ Ind ASನ ಅನುಷ್ಠಾನವನ್ನು, ದಿನಾಂಕ 22ನೇ ಮಾರ್ಚ್ 2019ರ ಸುತ್ತೋಲೆ ಸಂ. ಡಿಬಿಆರ್.ಬಿಪಿ.ಬಿಸಿ. ಸಂ.29/21.07.001/ 2018-19 ಪ್ರಕಾರ ಮುಂದಿನ ಸೂಚನೆಯ ತನಕ ಮುಂದೂಡಿದೆ.

ನಿಮ್ಮ ಬ್ಯಾಂಕ್ Ind ASನ ಅನುಷ್ಠಾನಕ್ಕೆ ಸಿದ್ಧವಾಗಿದೆ ಮತ್ತು ಪ್ರಸ್ತುತ ಅಕೌಂಟಿಗ್ ಚೌಕಟ್ಟು ಮತ್ತು Ind AS ನಡುವಿನ ವಿವಿಧ ವ್ಯತ್ಯಾಸಗಳು ಮತ್ತು ಮಾಪನ, ಅಕೌಂಟಿಂಗ್, ವಿತ್ತೀಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪ್ರಕಟಿಸುವಿಕೆ ಮತ್ತು ನಿಬಂಧನೆಗಳ ಅಗತ್ಯತೆಗಳ ಮೇಲೆ ಪರಿಣಾಮ ಹೊಂದಿರುವ ವಿವಿಧ ಕ್ಷೇತ್ರಗಳನ್ನು ಖಚಿತಗೊಳಿಸುವ ಕುರಿತು ಡಯಾಗ್ನೋಸ್ಟಿಕ್ ಅಧ್ಯಯನವನ್ನು ಬ್ಯಾಂಕ್ ನಡೆಸಿದೆ. ಇದಲ್ಲದೆ, Ind ASನ ಅಳವಡಿಕೆಗಾಗಿ ಕೋರ್ ಬ್ಯಾಂಕಿಂಗ್ ಸೊಲ್ಯೂಶನ್ (ಸಿಬಿಎಸ್) ಮತ್ತು ಬ್ಯಾಂಕ್‌ನ ಐಟಿ ವ್ಯವಸ್ಥೆಗಳಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಕೂಡಾ ಪರಿಶೀಲಿಸಲಾಗುತ್ತಿದೆ. ಆರ್‌ಬಿಐ ನಿಗದಿಪಡಿಸಿದಂತೆ, ಪ್ರೊಫಾರ್ಮಾ Ind AS ವಿತ್ತೀಯ ಹೇಳಿಕೆಗಳನ್ನು ಕಾಲಕಾಲಕ್ಕೆ ಬ್ಯಾಂಕ್ ಸಲ್ಲಿಸುತ್ತಿದೆ.

### ಅಧೀನ ಋಣಪತ್ರಗಳು

ಆರೋಗ್ಯಕರ ಬಂಡವಾಳ ಸ್ಥಿತಿವನ್ನು ಕಾಪಾಡುವ ನಿಟ್ಟಿನಲ್ಲಿ, ಬ್ಯಾಂಕ್ ಅಧೀನ ಋಣಪತ್ರಗಳನ್ನು (ಅಂದರೆ, Unsecured Non Convertible Subordinated (Lower Tier -2) BASEL III Debt Instruments) ಟಿಯರ್-2 ಬಂಡವಾಳದ ಭಾಗವಾಗಿ ವಿಭಿನ್ನ ಸರಣಿಗಳಲ್ಲಿ ವಿತರಿಸಿದ್ದು ಇವು ಎನ್‌ಎಸ್‌ಇನಲ್ಲಿ ಲಿಸ್ಟ್ ಆಗಿರುತ್ತವೆ. 31ನೇ ಮಾರ್ಚ್ 2020ರಂದು ಸಾಲಪತ್ರಗಳ ಬಾಕಿ ವಿವರಗಳು ಈ ಕೆಳಗಿನಂತಿವೆ:

| ಸರಣಿ | ವಿತರಣಾ ದಿನಾಂಕ | ಪ್ರತಿ ಬಾಂಡ್‌ನ ಮುಖಬೆಲೆ (ರೂ.) | ಬಾಂಡ್‌ಗಳ ಸಂಖ್ಯೆ | ಮೊತ್ತ (ರೂ ಕೋಟಿ) | ಅವಧಿ (ವಿತರಣಾ ದಿನಾಂಕದಿಂದ) | ಬಡ್ಡಿ ದರ ( Coupon % ವಾರ್ಷಿಕ) | ಕ್ರೆಡಿಟ್ ರೇಟಿಂಗ್ | ಲಿಸ್ಟಿಂಗ್ | ಬಾಂಡ್‌ಗಳ ISIN ಸಂಖ್ಯೆ |
|---|---|---|---|---|---|---|---|---|---|
| IV | 17.11.2012 | 10,00,000 | 2,500 | 250.00 | 120 ತಿಂಗಳುಗಳು | 11 | ICRA A & CARE A | ಎನ್ ಎಸ್‌ಇನಲ್ಲಿ ಲಿಸ್ಟ್ ಆಗಿರುವ -ಸಾಲ ವಿಭಾಗ | INE614B08021 |
| V | 16.11.2018 | 1,00,000 | 40,000 | 400.00 | | 12 | | | INE614B08039 |
| VI | 18.02.2019 | 1,00,000 | 32,000 | 320.00 | | 12 | | | INE614B08047 |

ನಿಮ್ಮ ಬ್ಯಾಂಕ್ ಈ ಋಣಪತ್ರಗಳ ವಿತರಣೆಯ ಕರಾರುಗಳ ಪ್ರಕಾರ, ಸಕಾಲದಲ್ಲಿ ಬಡ್ಡಿಯನ್ನು ಪಾವತಿಸಿದೆ. ಅಲ್ಲದೆ, ವರದಿವರ್ಷದಲ್ಲಿ, ಬ್ಯಾಂಕ್‌ನಿಂದ ಠೇವಣಿ ಪ್ರಮಾಣಪತ್ರ (Certificate of Deposit) ಗಳನ್ನು ವಿತರಿಸಲಾಗಿಲ್ಲ.

## ಲಾಭಾಂಶ ವಿತರಣಾ ನೀತಿ

ನಿಮ್ಮ ಬ್ಯಾಂಕ್, ಸೆಬಿ (ಎಲ್‌ಒಡಿಆರ್) ನಿಬಂಧನೆಗಳು, 2015ರ ನಿಬಂಧನೆ 43ಎ ಅನುಸಾರವಾಗಿ ಷೇರುದಾರರಿಗೆ ಲಾಭಾಂಶ ವಿತರಿಸುವ ನೀತಿಯನ್ನು ಅಳವಡಿಸಿಕೊಂಡಿದೆ. ಈ ನೀತಿಯ ಸಾರಾಂಶ ಈ ಕೆಳಗಿನಂತಿದೆ:

- ಬ್ಯಾಂಕಿಂಗ್ ಸಂಸ್ಥೆಯಾಗಿ, ಲಾಭಾಂಶ ವಿತರಣೆಯು ಲಾಭಾಂಶದ ವಿತರಣೆಗಾಗಿನ ಅರ್ಹತಾ ಮಾನದಂಡದ ಕುರಿತಂತೆ, ದಿನಾಂಕ 5ನೇ ಮೇ, 2005ರ ಆರ್‌ಬಿಐಯ ಸುತ್ತೋಲೆ ಡಿಬಿಒಡಿ.ಸಂ.ಬಿಪಿ. ಬಿಸಿ. 8821.02.67/2004-05 ನಿಂದ ನಿರ್ದೇಶಿತವಾಗಿದೆ.
- ಲಾಭಾಂಶದ ಶಿಫಾರಸಿಗೆ ಆಂತರಿಕ ಅಂಶಗಳಾದ ಹಣಕಾಸು ಕಾರ್ಯನಿರ್ವಹಣೆ, ಲಾಭಾಂಶ ಪಾವತಿ ಪ್ರವೃತ್ತಿಗಳು, ತೆರಿಗೆ ಪರಿಣಾಮಗಳು, ಕಾರ್ಪೊರೇಟ್ ಕ್ರಮಗಳು ಮತ್ತು ಬಾಹ್ಯ ಅಂಶಗಳಾದ ಷೇರುದಾರರ ನಿರೀಕ್ಷೆಗಳು, ಸ್ಥೂಲ ಪರಿಸರ ಇತ್ಯಾದಿಯಂತಹ ಎರಡೂ ಅಂಶಗಳನ್ನು ಪರಿಗಣಿಸಲಾಗುತ್ತದೆ.
- ಲಾಭಾಂಶದ ಪರಿಮಾಣವನ್ನು ನಿರ್ಧರಿಸಲು, ಹಣಕಾಸು ಕಾರ್ಯನಿರ್ವಹಣೆ, ಭವಿಷ್ಯದ ಉದ್ಯಮ ಪ್ರಗತಿಗೆ ಬೆಂಬಲವಾಗಿ ಅಗತ್ಯವಾಗಿರುವ ಬಂಡವಾಳ ನಿಧಿ, ಮೇಲೆ ಹೇಳಿದ ಆರ್‌ಬಿಐ ಮಾರ್ಗಸೂಚಿಗಳ ಅಡಿಯಲ್ಲಿ ಶಿಫಾರಸು ಮಾಡಲಾದ ಲಾಭಾಂಶ ಪಾವತಿ ಅನುಪಾತದ ಪರಿಗಣನೆ ಇತ್ಯಾದಿ ಅಂಶಗಳನ್ನು ಪರಿಗಣಿಸಲಾಗಿದೆ.

ಬ್ಯಾಂಕ್‌ನ ಲಾಭಾಂಶ ವಿತರಣಾ ನೀತಿಯು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ https://karnatakabank.com/investor-portal/corporate-governance

ಆದರೆ, ಈ ಮೊದಲು ವಿವರಿಸಿದಂತೆ, ಆರ್‌ಬಿಐ ಸುತ್ತೋಲೆ ಸಂಖ್ಯೆ:DOR.BP.BC.No. 64/21.02.067/ 2019-20 ದಿನಾಂಕ ಏಪ್ರಿಲ್ 17, 2020ರ ಪ್ರಕಾರ, ವರದಿ ವರ್ಷದಲ್ಲಿ ವಿತರಿಸಬಹುದಾದ ಲಾಭವನ್ನು ಬ್ಯಾಂಕು ಗಳಿಸಿದ್ದರೂ, ಆರ್‌ಬಿಐ ನಿರ್ದೇಶನದ ಕಾರಣದಿಂದ ನಿರ್ದೇಶಕ ಮಂಡಳಿಯು 2019-20ರ ವರ್ಷಕ್ಕೆ ಯಾವುದೇ ಲಾಭಾಂಶ ವರ್ಗಾವಣೆಯನ್ನು ಶಿಫಾರಸು ಮಾಡಿರುವುದಿಲ್ಲ.

## ಸಮಗ್ರ ವರದಿ (Integrated Reporting)

ಸೆಬಿ ತನ್ನ ಫೆಬ್ರವರಿ 6, 2017 ದಿನಾಂಕದ ಸುತ್ತೋಲೆ ಪ್ರಕಾರ 2017-18ರ ವಿತ್ತೀಯ ವರ್ಷದಿಂದ, ಮೊದಲ 500 ಲಿಸ್ಟೆಡ್ ಸಂಸ್ಥೆಗಳು ಸ್ವಯಂಪ್ರೇರಿತ ಆಧಾರದ ಮೇಲೆ ಇಂಟಿಗ್ರೇಟೆಡ್ ರಿಪೋರ್ಟಿಂಗ್ ಅನ್ನು ಅಳವಡಿಸಿಕೊಳ್ಳಬಹುದಾಗಿ ಸೂಚಿಸಿದೆ. ಅಂತೆಯೇ, ನಿಮ್ಮ ಬ್ಯಾಂಕ್ 500 ಲಿಸ್ಟೆಡ್ ಸಂಸ್ಥೆಗಳಲ್ಲಿ ಒಂದಾಗಿದ್ದು, ಬ್ಯಾಂಕ್ ಸಿದ್ಧಪಡಿಸಿದ ಒಂದು ವಿಸ್ತೃತ ಸಮಗ್ರವರದಿಯನ್ನು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಹೂಡಿಕೆದಾರರ ಪೋರ್ಟಲ್‌ನಲ್ಲಿ ನೀಡಲಾಗಿದೆ www.karnatakabank.com>Investor Portal>Corporate Governance tab.

## ನಿರ್ದೇಶಕರು ಮತ್ತು ಮಂಡಳಿಯಲ್ಲಿ ಬದಲಾವಣೆಗಳು

ನಿಮ್ಮ ಬ್ಯಾಂಕ್ ಮಾರ್ಚ್ 31, 2020ಕ್ಕೆ ಒಬ್ಬ ಮಹಿಳಾ ನಿರ್ದೇಶಕರ ಸಹಿತ ಒಟ್ಟು 9 ನಿರ್ದೇಶಕರನ್ನು ಹೊಂದಿತ್ತು. ಶ್ರೀ ಪಿ ಜಯರಾಮ ಭಟ್, ಅರೆಕಾಲಿಕ ಕಾರ್ಯನಿರ್ವಾಹಕೇತರ ಅಧ್ಯಕ್ಷರು, ಶ್ರೀ ಮಹಾಬಲೇಶ್ವರ ಎಂ ಎಸ್, ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ ಮತ್ತು ಶ್ರೀ ಬಿ ಆರ್ ಅಶೋಕ್, ಹೆಚ್ಚುವರಿ ನಿರ್ದೇಶಕರು ಇವರ ಹೊರತಾಗಿ ಉಳಿದವರೆಲ್ಲರೂ ಸ್ವತಂತ್ರ ನಿರ್ದೇಶಕರಾಗಿರುತ್ತಾರೆ. ನಿರ್ದೇಶಕರ ನೇಮಕಾತಿ ಮತ್ತು ಸಂಭಾವನೆಯ ಮಾನದಂಡಗಳ ವಿವರಗಳನ್ನು ಈ ವರದಿಯ ಭಾಗವಾಗಿರುವ ಸಾಂಸ್ಥಿಕ ಪ್ರಶಾಸನ ವರದಿಯೊಂದಿಗೆ ಅನುಬಂಧ III ರ ಅಡಿಯಲ್ಲಿ ನೀಡಲಾಗಿದೆ.

ವರದಿ ವರ್ಷದಲ್ಲಿ, ಶ್ರೀ ಬಿ ಎ ಪ್ರಭಾಕರ್, ಸ್ವತಂತ್ರ ನಿರ್ದೇಶಕರು, ಕಂಪನಿಗಳ ಕಾಯ್ದೆ 2013ರ ಪ್ರಕಾರ, ತಮ್ಮ ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 5, 2019ರಂದು ಹುದ್ದೆಯಿಂದ ನಿವೃತ್ತಗೊಂಡರು. ಅವರು ತಮ್ಮ ಅಧಿಕಾರಾವಧಿಯ ವೇಳೆ ನೀಡಿದ

ಮೌಲ್ಯಯುತ ಕೊಡುಗೆ ಮತ್ತು ಮಾರ್ಗದರ್ಶನಕ್ಕಾಗಿ ನಿರ್ದೇಶಕರ ಮಂಡಳಿಯು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ, ಆಗಸ್ಟ್ 27, 2019ರಿಂದ ಅನ್ವಯವಾಗುವಂತೆ, ಕಂಪನಿ ಕಾಯ್ದೆ 2013ರ ಸೆ. 161 ಪ್ರಕಾರ, ಶ್ರೀ ಬಿ ಆರ್ ಅಶೋಕ್, ಲೆಕ್ಕ ಪರಿಶೋಧಕರು, ಚೆನ್ನೈ ಅವರನ್ನು ಮಂಡಳಿಯು ಹೆಚ್ಚುವರಿ ನಿರ್ದೇಶಕರಾಗಿ ನಿಯುಕ್ತಿಗೊಳಿಸಿದೆ. ಶ್ರೀ ಬಿ ಆರ್ ಅಶೋಕ್ ರವರ ಅಧಿಕಾರಾವಧಿಯು ಮುಂಬರುವ 96ನೇ ವಾರ್ಷಿಕ ಮಹಾಸಭೆಯ ದಿನಾಂಕದವರೆಗೆ ಇರಲಿದ್ದು, ನಿರ್ದೇಶಕರ ಮಂಡಳಿಯು ಅವರನ್ನು ಬ್ಯಾಂಕಿನ ಸ್ವತಂತ್ರೇತರ ನಿರ್ದೇಶಕರಾಗಿ ನೇಮಕ ಮಾಡಲು ಶಿಫಾರಸು ಮಾಡುತ್ತದೆ. ಅದರಂತೆ, ಅವರ ನೇಮಕಾತಿಗೆ ಷೇರುದಾರರ ಅನುಮೋದನೆ ಕೋರುವ ನಿರ್ಣಯವನ್ನು 96ನೇ ವಾರ್ಷಿಕ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾಗಿದೆ.

ಶ್ರೀ ಪಿ ಜಯರಾಮ ಭಟ್ ಅವರನ್ನು ಬ್ಯಾಂಕಿನ ಅರೆಕಾಲಿಕ ಕಾರ್ಯನಿರ್ವಾಹಕೇತರ ನಿರ್ದೇಶಕರಾಗಿ ಆರ್‌ಬಿಐ ಹಾಗೂ ಷೇರುದಾರರ ಅನುಮೋದನೆಯೊಂದಿಗೆ ಏಪ್ರಿಲ್ 12, 2017ರಿಂದ ಮೂರು ವರ್ಷಗಳ ಅವಧಿಗೆ ಅಂದರೆ, ಏಪ್ರಿಲ್ 11, 2020ರ ತನಕ ನಿಯುಕ್ತಿಗೊಳಿಸಲಾಗಿತ್ತು. ಶ್ರೀ ಪಿ ಜಯರಾಮ ಭಟ್ ರವರ ಅಧ್ಯಕ್ಷತೆ ಮತ್ತು ಬ್ಯಾಂಕಿನ ಪ್ರಗತಿ ಹಾಗೂ ಅತ್ಯುತ್ತಮ ಕಾರ್ಪೊರೇಟ್ ಆಡಳಿತವನ್ನು ನೀಡುವಲ್ಲಿನ ಅವರ ಕೊಡುಗೆಗಳನ್ನು ಪರಿಗಣಿಸಿದ ಆಡಳಿತ ಮಂಡಳಿ ನಿರ್ದೇಶಕರು, ನವೆಂಬರ್ 13, 2021ರ ಅವಧಿಯವರೆಗೆ (ಅಂದರೆ 70 ವರ್ಷ ವಯೋಮಿತಿ ಪೂರ್ಣಗೊಳ್ಳುವ ತನಕ) ಅಧಿಕಾರಾವಧಿಯನ್ನು ಮುಂದುವರೆಸಲು ಶಿಫಾರಸು ಮಾಡಿದ್ದಾರೆ. ಈ ನಿಟ್ಟಿನಲ್ಲಿ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಸೆ.10B(1A)(i) ಪ್ರಕಾರ, ಬ್ಯಾಂಕುಗಳಲ್ಲಿ ಅಧ್ಯಕ್ಷರ ನೇಮಕಾತಿಯು ಆರ್‌ಬಿಐ ಅನುಮೋದನೆಗೆ ಒಳಪಟ್ಟಿದ್ದು ಈ ಸಂಬಂಧ ಬ್ಯಾಂಕಿನ ಅರ್ಜಿಯ ಮೇರೆಗೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಮಾರ್ಚ್ 24, 2020ರ ಇಮೇಲ್ ಮುಖಾಂತರ, ನವೆಂಬರ್ 13, 2021 ರವರೆಗೆ ಶ್ರೀ ಪಿ ಜಯರಾಮ ಭಟ್ ರವರ ಅರೆಕಾಲಿಕ ಕಾರ್ಯನಿರ್ವಾಹಕ ಅಧ್ಯಕ್ಷರ ಹುದ್ದೆಯಲ್ಲಿ ಮರುನೇಮಕಾತಿ ಮತ್ತು ಸಂಭಾವನೆಗೆ ಅನುಮೋದನೆ ನೀಡಿದೆ. ಅವರ ಮರು ನೇಮಕಾತಿಗಾಗಿ ಷೇರುದಾರರ ಅನುಮೋದನೆ ಕೋರುವ ನಿರ್ಣಯವನ್ನು 96ನೇ ವಾರ್ಷಿಕ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾಗಿದೆ.

ಫೆಬ್ರವರಿ 19, 2016ರಂದು ಬ್ಯಾಂಕ್‌ನ ಆಡಳಿತ ಮಂಡಳಿಗೆ ಸ್ವತಂತ್ರ ನಿರ್ದೇಶಕರಾಗಿ ನಿಯುಕ್ತಿಗೊಂಡಿದ್ದ ಶ್ರೀ ಕೇಶವ್ ಕೃಷ್ಣರಾವ್ ದೇಸಾಯಿ ಅವರು ಸ್ವತಂತ್ರ ನಿರ್ದೇಶಕರಾಗಿ ಫೆಬ್ರವರಿ 18, 2021ರಂದು ತಮ್ಮ 5 ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಲಿದ್ದಾರೆ. ಮಂಡಳಿಯ ಚರ್ಚೆಗಳಲ್ಲಿ ಭಾಗವಹಿಸುವಿಕೆಯನ್ನು ಮತ್ತು ಮಂಡಳಿಯಲ್ಲಿ ಅವರು ನೀಡಿದ ಒಟ್ಟಾರೆ ನಿರ್ದೇಶನಗಳನ್ನು ಪರಿಗಣಿಸಿ, ನಿರ್ದೇಶಕರ ಮಂಡಳಿಯು ಸ್ವತಂತ್ರ ನಿರ್ದೇಶಕರಾಗಿ ಅವರ ಮರುನಿಯುಕ್ತಿಗೆ ಅನುಮೋದನೆಯನ್ನು ಶಿಫಾರಸು ಮಾಡಿದೆ ಮತ್ತು ಷೇರುದಾರರ ಅನುಮೋದನೆ ಕೋರುವ ನಿರ್ಣಯವನ್ನು 96ನೇ ವಾರ್ಷಿಕ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾಗಿದೆ.

### ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (MD & CEO)

ಶ್ರೀ ಮಹಾಬಲೇಶ್ವರ ಎಂಎಸ್ ಅವರನ್ನು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ ಆಗಿ ಆರ್‌ಬಿಐ ಮತ್ತು ಷೇರುದಾರರ ಅನುಮೋದನೆಯೊಂದಿಗೆ 15ನೇ ಏಪ್ರಿಲ್ 2017ರಿಂದ ಮೂರು ವರ್ಷಗಳ ಅವಧಿಗೆ ಅಂದರೆ 14ನೇ ಏಪ್ರಿಲ್ 2020ರ ತನಕ ನಿಯುಕ್ತಿಗೊಳಿಸಲಾಗಿತ್ತು. ಕಠಿಣ ಸವಾಲುಗಳ ಮಧ್ಯೆಯೂ ಬ್ಯಾಂಕ್‌ನ ಪ್ರಗತಿಗೆ ಅವರ ಕೊಡುಗೆಯನ್ನು ಪರಿಗಣಿಸಿ, ನಿರ್ದೇಶಕರ ಮಂಡಳಿಯು ಅವರ ಅಧಿಕಾರಾವಧಿಯನ್ನು ಮುಂದಿನ ಮೂರು ವರ್ಷಗಳ ವರೆಗೆ ವಿಸ್ತರಿಸಿದೆ. ಅದರನ್ವಯ, ಭಾರತೀಯ ರಿಸರ್ವ್ ಬ್ಯಾಂಕ್ 24ನೇ ಮಾರ್ಚ್ 2020ನೇ ದಿನಾಂಕದಂದು ತನ್ನ ಇಮೇಲ್ ಮೂಲಕ, ಬ್ಯಾಂಕಿಂಗ್ ನಿಬಂಧನೆ ಕಾಯ್ದೆ, 1949ರ ಸೆಕ್ಷನ್ 35Bಯ ಪ್ರಕಾರವಾಗಿ 5ನೇ ಏಪ್ರಿಲ್ 2020ರಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಅವರ ಮರುನಿಯುಕ್ತಿಯನ್ನು ಅನುಮೋದಿಸಿತು. ಜೊತೆಗೆ, ದಿನಾಂಕ 4ನೇ ನವೆಂಬರ್ 2019ರ, ಡಬ್ಲ್ಯೂಟಿಡಿಗಳು/ಸಿಇಒಗಳು ಮತ್ತು ಮೆಟೀರಿಯಲ್ ರಿಸ್ಕ್ ಟೇಕರ್‌ಗಳ ಸಂಭಾವನೆಗಳ ಕುರಿತ ಆರ್‌ಬಿಐ ಸುತ್ತೋಲೆಯಲ್ಲಿ ವ್ಯಾಖ್ಯಾನಿಸಲಾಗಿರುವ ಮಾರ್ಗಸೂಚಿಗಳಿಗೆ ಬದ್ಧವಾಗಿ ಪರಿಷ್ಕೃತ ಸಂಭಾವನೆಯನ್ನು ಸಹ ಆರ್‌ಬಿಐ ಅನುಮೋದಿಸಿದೆ. ಇದರ ಅನುಸಾರವಾಗಿ, ಪರಿಷ್ಕೃತ ಸಂಭಾವನೆಯೊಂದಿಗೆ ಇವರ ಮರುನಿಯುಕ್ತಿಗೆ ಷೇರುದಾರರ ಅನುಮೋದನೆ ಕೋರುವ ನಿರ್ಣಯವನ್ನು 96ನೇ ವಾರ್ಷಿಕ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾಗಿದೆ.

## ಸ್ವತಂತ್ರ ಮತ್ತು ಕಾರ್ಯನಿರ್ವಾಹಕೇತರ ನಿರ್ದೇಶಕರು

ಕಂಪೆನಿಗಳ ಕಾಯ್ದೆ, 2013ರ ಸೆಕ್ಷನ್ 149(6)ರ ನಿಬಂಧನೆಗಳ ಅನ್ವಯ ಸ್ವತಂತ್ರ ನಿರ್ದೇಶಕರಾಗಲು ಸೂಕ್ತ ಅರ್ಹತೆ ಉಳ್ಳವರಾಗಿದ್ದಾರೆ ಎಂಬ ಅಗತ್ಯ ದೃಢೀಕರಣ ಪತ್ರವನ್ನು ಎಲ್ಲಾ ಸ್ವತಂತ್ರ ನಿರ್ದೇಶಕರಿಂದ 31ನೇ ಮಾರ್ಚ್, 2020ರ ವೇಳೆಗೆ ನಿಮ್ಮ ಬ್ಯಾಂಕ್ ಪಡೆದುಕೊಂಡಿದೆ.

## ಮಂಡಳಿಯ ಕಾರ್ಯನಿರ್ವಹಣೆ ಮೌಲ್ಯಮಾಪನ

ನಿಮ್ಮ ನಿರ್ದೇಶಕ ಮಂಡಳಿಯು ನಿರ್ದೇಶಕ ಮಂಡಳಿಯ ಸದಸ್ಯರ, ಅಧ್ಯಕ್ಷರ, ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ, ನಿರ್ದೇಶಕ ಮಂಡಳಿಯ ಸಮಿತಿಗಳ ಮತ್ತು ಒಟ್ಟಾರೆಯಾಗಿ ನಿರ್ದೇಶಕರ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ನಿಗದಿಪಡಿಸಿದೆ. ಅದರಂತೆ ನಿರ್ದೇಶಕರ, ನಿರ್ದೇಶಕ ಮಂಡಳಿಯ ಮತ್ತು ಸಮಿತಿಗಳ ಮೌಲ್ಯಮಾಪನ ಮಾಡಿ ಈ ಕುರಿತು ನೀಡಿದ ಹೇಳಿಕೆಯನ್ನು ಈ ವರದಿಯ ಭಾಗವಾಗಿ ಸಾಂಸ್ಥಿಕ ಪ್ರಶಾಸನ ಅನುಬಂಧ III ರ ಅಡಿಯಲ್ಲಿ ನೀಡಲಾಗಿದೆ. ಇದರಂತೆ, ಮಾರ್ಚ್ 22, 2020ರಂದು ನಡೆದ ಸ್ವತಂತ್ರ ನಿರ್ದೇಶಕರ ಸಭೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಮತ್ತು ಒಟ್ಟಾರೆಯಾಗಿ ನಿರ್ದೇಶಕ ಮಂಡಳಿಯ ಸಮೀಕ್ಷೆ ಮತ್ತು ಮೌಲ್ಯಮಾಪನಗೈಯಲಾಗಿದೆ.

ಅಲ್ಲದೆ, ನಿರ್ದೇಶಕ ಮಂಡಳಿಯು ಮಾರ್ಚ್ 20, 2020ರಂದು ನಡೆಸಿದ ತನ್ನ ಸಭೆಯಲ್ಲಿ ನಿರ್ದೇಶಕ ಮಂಡಳಿಯ ಸಮಿತಿಗಳ ಮತ್ತು ಸ್ವತಂತ್ರ ನಿರ್ದೇಶಕರ ಕಾರ್ಯನಿರ್ವಹಣೆಯ ಬಗ್ಗೆ ವಿಶ್ಲೇಷಣೆ ನಡೆಸಿದೆ.

## ಸಂಬಂಧಿತ ವ್ಯಕ್ತಿಗಳೊಂದಿಗೆ ಗುತ್ತಿಗೆ ಮತ್ತು ವ್ಯವಹಾರಗಳು

ಪ್ರಸ್ತುತ ವರದಿ ವರ್ಷದಲ್ಲಿ ಎಲ್ಲಾ ಸಂಬಂಧಿತ ವ್ಯಕ್ತಿಗಳೊಂದಿಗೆ ನಡೆದ ವಹಿವಾಟುಗಳು, ಸಾಮಾನ್ಯ ವ್ಯಾವಹಾರಿಕ ನೆಲೆಯಲ್ಲಿದ್ದು, ಅವುಗಳು ಸಂಬಂಧಿಸಿದ ವ್ಯಕ್ತಿಗಳಿಂದ ನಿರ್ದಿಷ್ಟ ಅಂತರವನ್ನು ಕಾಪಾಡಿಕೊಂಡು ಬರುವ ನೀತಿಯ ತಳಹದಿಯಲ್ಲಿರುತ್ತದೆ. ಸದ್ರಿ ಅವಧಿಯಲ್ಲಿ ಬ್ಯಾಂಕ್ ತನ್ನ ನಿರ್ದೇಶಕರೊಂದಿಗಾಗಲೀ, ತನ್ನ ಪ್ರಮುಖ ಆಡಳಿತಾತ್ಮಕ ಹೊಣೆ ಹೊತ್ತಿರುವ ವ್ಯಕ್ತಿಗಳೊಂದಿಗಾಗಲೀ ಅಥವಾ ಇನ್ನಿತರೆ ವ್ಯಕ್ತಿಗಳಿಗೊಂದಿಗಾಗಲೀ ನಡೆಸಿದ ವಹಿವಾಟುಗಳಲ್ಲಿ ಬ್ಯಾಂಕ್‌ನ ಹಿತಾಸಕ್ತಿಗೆ ಸಂಭಾವ್ಯ ವಿರೋಧವಾಗಬಲ್ಲ ಯಾವುದೇ ಅಂಶಗಳು ಇರುವುದಿಲ್ಲ. ಹೀಗಿರುವಾಗ ನಮೂನೆ ಎಒಸಿ-2 (AOC-2) ಮೂಲಕ ಪ್ರಕಟಣೆಗೊಳಿಸುವಿಕೆ ಅನ್ವಯವಾಗುವುದಿಲ್ಲ. ಬ್ಯಾಂಕ್‌ನ ಲೆಕ್ಕ ಪರಿಶೋಧನಾ ಸಮಿತಿ/ನಿರ್ದೇಶಕ ಮಂಡಳಿ ಅನುಮೋದಿಸಿರುವ ಸಂಬಂಧಿತ ವ್ಯಕ್ತಿಗಳೊಂದಿಗೆ ವಹಿವಾಟು ನಡೆಸುವ ನೀತಿಯನ್ನು ಬ್ಯಾಂಕ್‌ನ ಹೂಡಿಕೆದಾರರ ಪೋರ್ಟಲ್‌ನಲ್ಲಿ ನೀಡಲಾಗಿದೆ.

## ನಿರ್ದೇಶಕರ ಜವಾಬ್ದಾರಿಗಳ ಬಗ್ಗೆ ಹೇಳಿಕೆ

ಕಂಪೆನಿಗಳ ಕಾಯ್ದೆ 2013ರ ಸೆಕ್ಷನ್ 134(3)(ಸಿ), 134(5) ಮತ್ತು ಕಂಪೆನಿಗಳ (ಅಕೌಂಟ್ಸ್) ನಿಯಮ 2014ರ ನಿಯಮ 8ರ ಅನುಸಾರವಾಗಿ ನಿಮ್ಮ ನಿರ್ದೇಶಕರು ತಿಳಿಸುವುದೇನೆಂದರೆ:

(ಎ) ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವಾಗ, ಸೂಕ್ತವಾದ 'ಅಕೌಂಟಿಂಗ್ ಸ್ಟಾಂಡರ್ಡ್ಸ್' ಬಳಕೆ ಮಾಡಿಕೊಂಡಿದ್ದು, ಸೂಕ್ತ ವಿಶ್ಲೇಷಣೆಗಳನ್ನು, ಆವಶ್ಯಕ ವಿವರಗಳನ್ನು ಸಲ್ಲಿಸಲಾಗಿದೆ.

(ಬಿ) ನಿರ್ದೇಶಕರು ಸೂಕ್ತವಾದ ಅಕೌಂಟಿಂಗ್ ನೀತಿಗಳನ್ನು ಅಂಗೀಕರಿಸಿದ್ದು, ಅವುಗಳನ್ನು ನಿಖರವಾಗಿ ಪ್ರಯೋಗಿಸಿ, ಅಂದಾಜು ಮತ್ತು ತೀರ್ಪುಗಳನ್ನು ಸೂಕ್ತವಾಗಿ ವಿಮರ್ಶಿಸಿ ಸಕಾರಣವಾಗಿದೆ ಎಂದು ತಿಳಿದು, 31ನೇ ಮಾರ್ಚ್ 2020ಕ್ಕೆ ಬ್ಯಾಂಕಿನ ಲೆಕ್ಕಪತ್ರಗಳಲ್ಲಿ ಮತ್ತು ಲಾಭ ನಷ್ಟಗಳಲ್ಲಿ ಸತ್ಯ ಮತ್ತು ನೈಜ ಚಿತ್ರಣವನ್ನು ನೀಡುವಲ್ಲಿ ಆದ್ಯ ಗಮನ ಹರಿಸಿರುತ್ತಾರೆ.

(ಸಿ) ನಿರ್ದೇಶಕರು, ಬ್ಯಾಂಕ್‌ನ ಆಸ್ತಿಯನ್ನು ಸುಸ್ಥಿರವಾಗಿ ಕಾಪಾಡಿಕೊಂಡು ಬರುವಲ್ಲಿ ವಂಚನೆ ಹಾಗೂ ನಿಯಮಬಾಹಿರತೆ ಮುಕ್ತತೆ ಕುರಿತು ಸಾಕಷ್ಟು ಎಚ್ಚರವಹಿಸಿ ಕಂಪೆನಿಗಳ ಕಾಯ್ದೆ 2013ರ ಅನುಸಾರವಾಗಿ ಸೂಕ್ತವಾದ ಅಕೌಂಟಿಂಗ್ ದಾಖಲೆಗಳನ್ನು ನಿರ್ವಹಣೆ ಮಾಡಿರುತ್ತಾರೆ.

(ಡಿ) ನಿರ್ದೇಶಕರು ವಾರ್ಷಿಕ ಲೆಕ್ಕಪತ್ರಗಳನ್ನು 'ಗೋಯಿಂಗ್ ಕನ್‌ಸರ್ನ್' ತಳಹದಿಯಲ್ಲಿ ರಚಿಸಿರುತ್ತಾರೆ.

(ಇ) ಆಂತರಿಕ ಆರ್ಥಿಕತೆ ನಿಯಂತ್ರಣವನ್ನು ಧೋರಣಾತ್ಮಕವಾಗಿ ನಿರ್ದೇಶಕರು ಸ್ವೀಕರಿಸಿದ್ದು, ಅದನ್ನೇ ಬ್ಯಾಂಕ್ ಅನುಸರಿಸಿಕೊಂಡು ಬರುತ್ತಿದ್ದು, ಬ್ಯಾಂಕ್‌ನ ಧೋರಣೆಯ ರೀತ್ಯಾ ಆಂತರಿಕ ನಿಯಂತ್ರಣಗೈದಿದ್ದು, ಅದು ಸಾಕಷ್ಟು ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲ್ಪಡುತ್ತಿದೆ.

(ಎಫ್) ನಿರ್ದೇಶಕರು ಸಂಬಂಧಪಟ್ಟ ಕಾನೂನುಗಳಿಗೆ ಸಂಬಂಧಿಸಿ ಪೂರೈಕೆಗೊಳ್ಳಬೇಕಾಗಿರುವ ವಿವರಗಳನ್ನು ನೀಡುವಲ್ಲಿ ಸೂಕ್ತ ಹಾಗೂ ಸಕಾಲಿಕ ವ್ಯವಸ್ಥೆಗಳನ್ನು ಸಂಯೋಜಿಸಿದ್ದು, ಈ ವ್ಯವಸ್ಥೆಯು ಸೂಕ್ತವಾಗಿ, ಸಕಾಲಿಕವಾಗಿ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

## ಶಾಸನಬದ್ಧ ಪ್ರಕಟಣೆಗಳು

ಕಂಪೆನಿಗಳ ಕಾಯ್ದೆ 2013ರ ಸೆಕ್ಷನ್ 134(3) ಮತ್ತು ಕಂಪೆನಿಗಳ (ಅಕೌಂಟ್ಸ್) ನಿಯಮಗಳು 2014ರ ಅನ್ವಯ ಪ್ರಕಟಗೊಳಿಸಲಿಕ್ಕಿರುವ ಪ್ರಕಟಣೆಗಳು ಈ ಕೆಳಗಿನಂತಿವೆ:

ಎ) ಶಕ್ತಿಯ ಬಳಕೆ ಮತ್ತು ತಾಂತ್ರಿಕತೆ ಅಳವಡಿಕೆ: ಬ್ಯಾಂಕ್‌ನ ವ್ಯವಹಾರ ಸ್ವರೂಪದ ದೃಷ್ಟಿಯಿಂದ ಶಕ್ತಿಯ ಬಳಕೆ ಮತ್ತು ತಾಂತ್ರಿಕತೆ ಅಳವಡಿಕೆ ಕುರಿತಾದ ಕಂಪೆನಿಗಳ ಕಾಯ್ದೆ 2013ರ ಸೆಕ್ಷನ್ 134(3) ಅನ್ವಯ, ಬ್ಯಾಂಕ್‌ಗೆ ಇದು ಅನ್ವಯವಾಗುವುದಿಲ್ಲ. ಆದಾಗ್ಯೂ ಬ್ಯಾಂಕ್ ತನ್ನ ಚಟುವಟಿಕೆಯ ಸರ್ವಾಂಗೋಪಾಂಗಗಳಲ್ಲಿ ಮಾಹಿತಿ ತಂತ್ರಜ್ಞಾನದ ವಿಪುಲ ಬಳಕೆ ಮಾಡುತ್ತಿದೆ.

ಬಿ) ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವು: ಪ್ರಸ್ತುತ ವರ್ಷಾಂತ್ಯ 31 ಮಾರ್ಚ್ 2020ಕ್ಕೆ ಬ್ಯಾಂಕ್ ವಿದೇಶಿ ಕರೆನ್ಸಿ ರೂಪದಲ್ಲಿ ರೂ.0.93 ಕೋಟಿ ಗಳಿಸಿದೆ ಮತ್ತು ರೂ.1.66 ಕೋಟಿ ವ್ಯಯ ಮಾಡಿರುತ್ತದೆ.

ಸಿ) ಬ್ಯಾಂಕ್‌ನ ಭವಿಷ್ಯದ ವಹಿವಾಟಿಗೆ ತಡೆಯಾಗಬಲ್ಲ ಯಾವುದೇ ಆಜ್ಞೆಗಳು, ವಿಧೇಯಕಗಳು ಬ್ಯಾಂಕ್‌ಗೆ ಲಿಖಿತವಾಗಿ ಯಾವುದೇ ನಿಯಂತ್ರಣ ಕಚೇರಿಗಳಿಂದ, ಕೋರ್ಟ್‌ಗಳಿಂದ ಬಂದಿಲ್ಲ.

ಡಿ) ಆಂತರಿಕ ಆರ್ಥಿಕತಾ ನಿಯಂತ್ರಣ ವ್ಯವಸ್ಥೆ ಮತ್ತು ಅದರ ಪರ್ಯಾಪ್ತತೆ: ಆಂತರಿಕ ಆರ್ಥಿಕತಾ ನಿಯಂತ್ರಣ ವ್ಯವಸ್ಥೆಯನ್ನು ಸಮರ್ಥವಾಗಿ ನಿರ್ವಹಿಸಲು ನಿಮ್ಮ ಬ್ಯಾಂಕ್ ಸೂಕ್ತವಾಗಿ ಹಾಗೂ ಸಮಗ್ರವಾಗಿ ಕೆಲವು ಮಾನದಂಡಗಳು, ಪ್ರಯೋಗಗಳು ಮತ್ತು ಸಂರಚನೆಗಳನ್ನು ಪಾಲಿಸಿಕೊಂಡು ಬಂದಿದ್ದು, ಈ ವ್ಯವಸ್ಥೆ ಸಾಕಷ್ಟು ಪರಿಪೂರ್ಣವಾಗಿದ್ದು ಚುರುಕಾಗಿ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಇ) ಪ್ರಮುಖ ವ್ಯವಸ್ಥಾಪನಾ ವ್ಯಕ್ತಿಗಳು: ಕಂಪೆನಿಗಳ ಕಾಯ್ದೆ 2013ರ ನಿಬಂಧನೆಗಳ ಅನುಸಾರವಾಗಿ ಶ್ರೀ ಮಹಾಬಲೇಶ್ವರ ಎಂ ಎಸ್, ಎಂಡಿ ಮತ್ತು ಸಿಇಒ, ಶ್ರೀ ಮುರಳೀಧರ ಕೃಷ್ಣ ರಾವ್, ಸಿಎಫ್‌ಒ ಮತ್ತು ಶ್ರೀ ಪ್ರಸನ್ನ ಪಾಟೀಲ್, ಬ್ಯಾಂಕ್‌ನ ಕಂಪೆನಿ ಕಾರ್ಯದರ್ಶಿ ಇವರು 31ನೇ ಮಾರ್ಚ್ 2020ಕ್ಕೆ ಬ್ಯಾಂಕ್‌ನ ಪ್ರಮುಖ ವ್ಯವಸ್ಥಾಪನಾ ವ್ಯಕ್ತಿಗಳಾಗಿದ್ದರು. ಈ ಪ್ರಮುಖ ವ್ಯವಸ್ಥಾಪನಾ ವ್ಯಕ್ತಿಗಳಲ್ಲಿ ಪ್ರಸ್ತುತ ವರದಿ ವರ್ಷದಲ್ಲಿ ಯಾರೊಬ್ಬರೂ ರಾಜೀನಾಮೆ ನೀಡಿರುವುದಿಲ್ಲ.

ಶ್ರೀ ವೈ ವಿ ಬಾಲಚಂದ್ರ ಅವರು ಬ್ಯಾಂಕ್‌ನ ಮುಖ್ಯ ಕಾರ್ಯಾಚರಣಾ ಅಧಿಕಾರಿ (ಸಿಒಒ) ಹುದ್ದೆಗೆ ಭಡ್ತಿ ಹೊಂದಿದುದರಿಂದ ಮತ್ತು ಜವಾಬ್ದಾರಿಯ ಮರುಹಂಚಿಕೆಯಿಂದಾಗಿ, ಶ್ರೀ ವೈ ವಿ ಬಾಲಚಂದ್ರ ಅವರ ಸ್ಥಾನದಲ್ಲಿ 13.05.2019ರಿಂದ ಅನ್ವಯವಾಗುವಂತೆ ಬ್ಯಾಂಕ್‌ನ ಮಹಾ ಪ್ರಬಂಧಕರಾದ ಶ್ರೀ ಮುರಳೀಧರ ಕೃಷ್ಣ ರಾವ್ ಅವರನ್ನು ಬ್ಯಾಂಕ್‌ನ ಮುಖ್ಯ ಹಣಕಾಸು ಅಧಿಕಾರಿಯಾಗಿ (ಸಿಎಫ್‌ಒ) ನೇಮಿಸಲಾಗಿದೆ.

ಎಫ್) ನಿರ್ದೇಶಕರ ಸಂಭಾವನೆ: ಕಂಪೆನಿಗಳ ಕಾಯ್ದೆ 2013, ಸೆಕ್ಷನ್ 197 (12) ಮತ್ತು ಕಂಪೆನಿ (ವ್ಯವಸ್ಥಾಪನಾ ವ್ಯಕ್ತಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು 2014ರ ನಿಯಮಗಳ ಪ್ರಕಾರ ಪ್ರಕಟಿಸಬೇಕಾಗಿರುವ ವಿವರಗಳನ್ನು ಈ ವರದಿಯ ಅನುಬಂಧ VI ರಲ್ಲಿ ನೀಡಲಾಗಿದೆ.

ಜಿ) ಕಂಪೆನಿಗಳ ನಿಯಮ 2014ರ ನಿಯಮ 5ರಂತೆ ಹಾಗೂ ಕಂಪೆನಿಗಳ ಕಾಯ್ದೆ 2013ರ ಸೆಕ್ಷನ್ 197ರ ಅನುಸಾರದಂತೆ ಹಣಕಾಸು ವರ್ಷ 2019-20ರಲ್ಲಿ ಬ್ಯಾಂಕ್‌ನ ಯಾವ ಉದ್ಯೋಗಿಯೂ ಬಹಿರಂಗಪಡಿಸಬೇಕಾದ ಮಿತಿಯನ್ನು ಮೀರಿರುವ ವೇತನವನ್ನು ಪಡೆದಿರುವುದಿಲ್ಲ.

## ಆಡಳಿತ ಮಂಡಳಿಯ ಸಭೆಯ ಸಂಖ್ಯೆ

ವರದಿ ವರ್ಷದಲ್ಲಿ ಆಡಳಿತ ಮಂಡಳಿಯ ಸದಸ್ಯರು ಒಟ್ಟು 16 ಬಾರಿ ಸಭೆ ಜರಗಿಸಿದ್ದು, ವರದಿಯ ವಿವರಗಳನ್ನು ಈ ವರದಿಯೊಂದಿಗೆ ಲಗತ್ತಿಸಲಾಗಿರುವ ಕಾರ್ಪೊರೇಟ್ ಆಡಳಿತದ ವರದಿಯಲ್ಲಿ ನೀಡಲಾಗಿದೆ.

## ನಿರ್ದೇಶಕರ ಮಂಡಳಿಯ ಸಮಿತಿಗಳು

ಬ್ಯಾಂಕಿನ ನಿರ್ದೇಶಕರ ಮಂಡಳಿಯ 9 ಸಮಿತಿಗಳನ್ನು ಹೊಂದಿದ್ದು ಇವುಗಳು ಅತ್ಯುತ್ತಮ ಸಾಂಸ್ಥಿಕ ಸೇವಾ ನೀಡಿಕೆಗಾಗಿ ಮತ್ತು ಅನ್ವಯಿಸುವ ಕಾನೂನು ಅಗತ್ಯಗಳ ಪೂರೈಕೆ ಹಾಗೂ ಪರಿಪಾಲನೆಗಾಗಿ ರಚಿಸಲ್ಪಟ್ಟಿವೆ. ಆಡಳಿತ ಮಂಡಳಿ ಸಭೆ ಮತ್ತು ಸಮಿತಿಗಳ ಸಭೆಯ ವಿವರಗಳು, ಅವುಗಳ ರಚನೆ, ಷರತ್ತುಗಳು / ಉಲ್ಲೇಖಗಳ ಅಧಿಕಾರ, ಪಾತ್ರ ಇತ್ಯಾದಿಗಳನ್ನು ಈ ವರದಿಯೊಂದಿಗೆ ಲಗತ್ತಿಸಲಾಗಿರುವ ಕಾರ್ಪೊರೇಟ್ ಆಡಳಿತದ ಕುರಿತ ವರದಿಯನ್ನು ಅನುಬಂಧ III ರಲ್ಲಿ ನೀಡಲಾಗಿದೆ.

## ಕಾರ್ಪೊರೇಟ್ ಆಡಳಿತ

ನಿಮ್ಮ ಬ್ಯಾಂಕ್ ಅತ್ಯುತ್ತಮ ಕಾರ್ಪೊರೇಟ್ ಆಡಳಿತವನ್ನು ಪಾಲಿಸಲು ಬದ್ಧವಾಗಿದ್ದು ತನ್ಮೂಲಕ ಬ್ಯಾಂಕ್‌ನ ಸರ್ವ ಪಾಲುದಾರರಾದ ಷೇರುದಾರರು, ಠೇವಣಿದಾರರು, ಇತರೆ ಗ್ರಾಹಕರು ಮತ್ತು ನೌಕರರು ಹಾಗೂ ಸಮಾಜದ ಹಿತಾಸಕ್ತಿಯನ್ನು ಕಾಯ್ದುಕೊಂಡು, ನಿರ್ವಹಣೆಯ ಸರ್ವ ಸ್ತರದಲ್ಲೂ ಪಾರದರ್ಶಕತೆಯನ್ನು ಕಾಪಾಡುವ ಗುರಿ ಮತ್ತು ಬದ್ಧತೆಗಳನ್ನು ಹೊಂದಿರುತ್ತದೆ. ಸಾಂಸ್ಥಿಕ ಪ್ರಶಾಸನಕ್ಕೆ ಸಂಬಂಧಿಸಿದ ವಿವರವಾದ ವರದಿಯನ್ನು ಈ ವಾರ್ಷಿಕ ವರದಿಯ ಅನುಬಂಧ III ರಲ್ಲಿ ನೀಡಲಾಗಿದೆ.

## ಲೆಕ್ಕಪರಿಶೋಧಕರು

### ಎ. ಶಾಸನಬದ್ಧ ಲೆಕ್ಕಪರಿಶೋಧಕರು

ಆಗಸ್ಟ್ 07, 2019 ರಂದು ನಡೆದ 95ನೇ ವಾರ್ಷಿಕ ಮಹಾಸಭೆಯಲ್ಲಿ, ಮೆ. ಬದರಿ, ಮಧುಸೂದನ್ ಆಂಡ್ ಶ್ರೀನಿವಾಸನ್, (ಸಂಸ್ಥೆ ನೋದಣಿ ಸಂ.005389S) ಚಾರ್ಟರ್ಡ್ ಅಕೌಂಟೆಂಟ್ಸ್, ಸಂ. 132, ಎರಡನೇ ಮಹಡಿ, ಕಾಂತ ಕೋರ್ಟ್, ಲಾಲ್‌ಬಾಗ್ ರಸ್ತೆ, ಬೆಂಗಳೂರು-560027 ಮತ್ತು ಮೆ. ಮನೋಹರ್ ಚೌಧರಿ ಆಂಡ್ ಅಸೋಸಿಯೇಟ್ಸ್, (ಸಂಸ್ಥೆ ನೋಂದಣಿ ಸಂ.001997S) ಚಾರ್ಟರ್ಡ್ ಅಕೌಂಟೆಂಟ್ಸ್, ಹೊಸ ಸಂ.27, ಸುಬ್ರಮಣಿಯಮ್ ಬೀದಿ, ಅಭಿರಾಮ್‌ಪುರಂ, ಚೆನ್ನೈ-600018, ಅವರನ್ನು ಬ್ಯಾಂಕ್‌ನ ಜಂಟಿ ಶಾಸನಬದ್ಧ ಕೇಂದ್ರೀಯ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸುವಂತೆ ನಿಯುಕ್ತಿಗೊಳಿಸಲಾಯಿತು. ಅವರು ಮುಂಬರುವ ವಾರ್ಷಿಕ ಮಹಾಸಭೆಯ ಕೊನೆಯಲ್ಲಿ, ಎರಡನೇ ವರ್ಷದ ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ (ಅಂದರೆ, ಹಣಕಾಸು ವರ್ಷ 2018-19 ರಿಂದ ಆರಂಭಗೊಂಡ ಅವಧಿಯಲ್ಲಿ).

ಮೆ. ಬದರಿ, ಮಧುಸೂದನ್ ಆಂಡ್ ಶ್ರೀನಿವಾಸನ್, (ಸಂಸ್ಥೆ ನೋದಣಿ ಸಂ.005389S) ಚಾರ್ಟರ್ಡ್ ಅಕೌಂಟೆಂಟ್ಸ್. ಮತ್ತು ಮೆ. ಮನೋಹರ್ ಚೌಧರಿ ಆಂಡ್ ಅಸೋಸಿಯೇಟ್ಸ್, (ಸಂಸ್ಥೆ ನೋಂದಣಿ ಸಂ.001997S) ಚಾರ್ಟರ್ಡ್ ಅಕೌಂಟೆಂಟ್ಸ್, ಅವರನ್ನು ಜಂಟಿಯಾಗಿ ಬ್ಯಾಂಕ್‌ನ ಶಾಸನಬದ್ಧ ಕೇಂದ್ರೀಯ ಲೆಕ್ಕಪರಿಶೋಧಕರಾಗಿ 97ನೇ ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದ ತನಕ ಕಾರ್ಯನಿರ್ವಹಿಸುವಂತೆ ನಿಯುಕ್ತಿಗೊಳಿಸುವ ಪ್ರಸ್ತಾಪಕ್ಕೆ ಆಡಳಿತ ಮಂಡಳಿ ನಿರ್ದೇಶಕರು ಸದಸ್ಯರ ಅನುಮೋದನೆ ಕೋರುತ್ತಾರೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಸೆಕ್ಷನ್ 30 (1ಎ)ಯ ಅನುಸಾರವಾಗಿ, ಮೇಲೆ ಹೇಳಿದ ನಿಯುಕ್ತಿಗಳ ಅನುಮೋದನೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಕೋರಲಾಗಿದೆ. ಮೇಲೆ ಹೇಳಿದ ಲೆಕ್ಕಪರಿಶೋಧಕರಿಂದ ಸಮ್ಮತಿಯನ್ನು ಬ್ಯಾಂಕ್ ಪಡೆದಿದ್ದು ಕಂಪನಿಗಳ ಕಾಯ್ದೆ 2013ರ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಪ್ರಕಾರ ಬ್ಯಾಂಕ್‌ನ ಲೆಕ್ಕಪರಿಶೋಧಕರಾಗಿ ನಿಯೋಜಿಸಲು ಅನರ್ಹರಾಗಿಲ್ಲ ಎಂಬುದಾಗಿ ಅವರಿಂದ ಅಗತ್ಯ ದೃಢೀಕರಣವನ್ನು ಪಡೆಯಲಾಗಿದೆ.

### ಬಿ. ಸೆಕ್ರೆಟರಿಯಲ್ ಲೆಕ್ಕಪರಿಶೋಧಕರು ಮತ್ತು ವರದಿ

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್204 ಮತ್ತು ಅದರಡಿಯ ನಿಯಮಗಳ ಅನುಸಾರವಾಗಿ, ನಿಮ್ಮ ಬ್ಯಾಂಕ್, ಮೆ. ಗೋಪಾಲಕೃಷ್ಣರಾಜ್ ಎಚ್ ಎಚ್ ಆಂಡ್ ಅಸೋಸಿಯೇಟ್ಸ್, ವೃತ್ತಿನಿರತ ಕಂಪನಿ ಕಾರ್ಯದರ್ಶಿ, ಬೆಂಗಳೂರು ಅವರನ್ನು 31ನೇ ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಸೆಕ್ರೆಟರಿಯಲ್ ಲೆಕ್ಕಪರಿಶೋಧನೆ ನಡೆಸಲು ಸೆಕ್ರೆಟರಿಯಲ್ ಲೆಕ್ಕಪರಿಶೋಧಕರಾಗಿ ನಿಯುಕ್ತಿಗೊಳಿಸಲಾಗಿದೆ. ಲೆಕ್ಕಪರಿಶೋಧನಾ ವರದಿಯನ್ನು ಈ ವರದಿಯ ಅನುಬಂಧ IIIರ ಜೊತೆಯಲ್ಲಿ ನೀಡಲಾಗಿದೆ.

### ಸಿ. ಲೆಕ್ಕಪರಿಶೋಧಕರ ಟಿಪ್ಪಣಿಗಳು:

ಬ್ಯಾಂಕುಗಳಲ್ಲಿನ ಲೆಕ್ಕಪರಿಶೋಧನಾ ಸಮಿತಿಯ ರಚನೆಯು ಪ್ರಾಥಮಿಕವಾಗಿ ರಿಸರ್ವ್ ಬ್ಯಾಂಕ್ ಮತ್ತು ಸೆಬಿ (ಎಲ್ಒಡಿಆರ್) ನಿಯಮಗಳು, 2015 ರ ಹೊರಡಿಸಿದ ಮಾರ್ಗಸೂಚಿಗಳಿಂದ ನಿಯಂತ್ರಿಸಲ್ಪಡುತ್ತದೆ. ಶಾಸನಬದ್ಧ ಕೇಂದ್ರ ಲೆಕ್ಕ ಪರಿಶೋಧಕರು ಮತ್ತು ಸೆಕ್ರೆಟರಿಯಲ್ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯ ಸಮಿತಿಯ ಸಂಯೋಜನೆಯಲ್ಲಿ 2019ರ ಸೆಪ್ಟೆಂಬರ್ 6 ರಿಂದ 2019ರ ನವೆಂಬರ್ 5ರ ವರೆಗಿನ ಅಲ್ಪ ಅವಧಿಯಲ್ಲಿ ಅನುಸರಣೆ ಮಾಡದೇ ಇರುವ ಕುರಿತು ಟಿಪ್ಪಣಿಯನ್ನು ನೀಡಿರುತ್ತಾರೆ. ಈ ವಿಚಾರವು ಬ್ಯಾಂಕಿನ ಗಮನಕ್ಕೆ ಬಂದ ಕೂಡಲೇ 2019ರ ನವೆಂಬರ್ 6 ರಿಂದ ಜಾರಿಗೆ ಬರುವಂತೆ ಸೆಬಿ(ಎಲ್ಒಡಿಆರ್) ರೆಗ್ಯುಲೇಷನ್ಸ್, 2015 ರ ರೆಗ್ಯುಲೇಶನ್ 18ರ ಅನುಸಾರ ಲೆಕ್ಕಪರಿಶೋಧನಾ ಸಮಿತಿಯನ್ನು ಪುನರ್ ಸಂಯೋಜನೆ ಮಾಡಲಾಗಿದೆ. ಈ ವರದಿಗೆ ಜೊತೆಗೆ ನೀಡಿರುವ ಕಾರ್ಪೊರೇಟ್ ಆಡಳಿತ ವರದಿಯಲ್ಲೂ ವಿವರಗಳನ್ನು ಉಲ್ಲೇಖಿಸಲಾಗಿದೆ.

### ಕೃತಜ್ಞತೆಗಳು

ಭಾರತೀಯ ರಿಸರ್ವ್ ಬ್ಯಾಂಕ್, ಇತರೆ ಸರಕಾರಿ ಮತ್ತು ನಿಯಂತ್ರಣ ಪ್ರಾಧಿಕಾರಗಳು, ಹಣಕಾಸು ಸಂಸ್ಥೆಗಳು, ಸಹಭಾಗಿ ಬ್ಯಾಂಕ್‌ಗಳ ನಿರಂತರ ಮಾರ್ಗದರ್ಶನ ಮತ್ತು ಬೆಂಬಲಗಳಿಗಾಗಿ ಆಡಳಿತ ಮಂಡಳಿ ನಿರ್ದೇಶಕರು ತಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಲು ಇಚ್ಛಿಸುತ್ತಾರೆ. ಬ್ಯಾಂಕಿನ ಷೇರುದಾರರು, ಠೇವಣಿದಾರರು ಮತ್ತು ಇತರೆ ಗ್ರಾಹಕರ ನಿರಂತರ ಬೆಂಬಲ, ಸಹಕಾರ ಮತ್ತು ವಿಶ್ವಾಸಗಳಿಗಾಗಿ ನಿಮ್ಮ ನಿರ್ದೇಶಕರು ಋಣಿಯಾಗಿದ್ದಾರೆ. ಬ್ಯಾಂಕ್‌ನ ಎಲ್ಲಾ ಉದ್ಯೋಗಿಗಳು ನೀಡಿದ ಸಕ್ರಿಯ ಬೆಂಬಲ, ಬ್ಯಾಂಕ್‌ನ ನಿರಂತರ ಪ್ರಗತಿ ಮತ್ತು ಆದಾಯಕ್ಕಾಗಿ ನೀಡಿದ ಸಹಕಾರಕ್ಕಾಗಿ ನಿಮ್ಮ ನಿರ್ದೇಶಕರು ಹೃತ್ಪೂರ್ವಕ ಮೆಚ್ಚುಗೆಯನ್ನು ಸೂಚಿಸುತ್ತಾ ಮುಂಬರುವ ದಿನಗಳಲ್ಲಿ ಬ್ಯಾಂಕ್ ಅನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವಲ್ಲಿ ಇವರೆಲ್ಲರ ನಿರಂತರ ಸಹಕಾರವನ್ನು ನಿರೀಕ್ಷಿಸುತ್ತಾರೆ.

**ಆಡಳಿತ ಮಂಡಳಿ ನಿರ್ದೇಶಕರ ಪರವಾಗಿ ಮತ್ತು ಅಪ್ಪಣೆಯೊಂದಿಗೆ**

ಸಹಿ/-

**ಪಿ ಜಯರಾಮ ಭಟ್**

**ಅಧ್ಯಕ್ಷರು**

ಸ್ಥಳ: ಮಂಗಳೂರು

ದಿನಾಂಕ: ಜೂನ್ 6, 2020